# ನೇಸರು

₹ 5/-

ತಿಂಗಳೋಲೆ

PAGES 24

APRIL 2019 | Nesaru Tingalole | Vol. XXXVII - 4



## ಏಪ್ರಿಲ್ 13ಕ್ಕೆ ಶ್ರೀ ರಾಮ ನವಮಿ

ಮೈಸೂರು ಅಸೋಸಿಯೇಷನ್ ಮುಂಬೈ

**THE MYSORE ASSOCIATION, BOMBAY**

393, Bhau Daji Road, Matunga, Mumbai - 400 019. । Tel.: 2402 4647, 2403 7065

Email : mysoreassociation.mumbai@gmail.com

# ಭಾರತ, ಪಾಕಿಸ್ತಾನದ ಜೊತೆಗೆ ಕ್ರಿಕೆಟ್ ಆಡಬೇಕೇ?

ಮಾರ್ಚ್ 23, 2019 ರ ಸಂಜೆ ಅಸೋಸಿಯೇಷನ್ನಿನಲ್ಲಿ ಸದಸ್ಯರು ಸೇರಿ, ಬಲು ಭರಾಟೆಯಿಂದ ಮೇಲಿನ ವಿಷಯದ ಬಗ್ಗೆ ಚರ್ಚೆ ನಡೆಸಿದರು.

ಮೊದಲಿಗೆ ಹುಟ್ಟುಹಬ್ಬದ ಹುಡುಗ ಶ್ರೀ. ಕೆ. ಮಂಜುನಾಥಯ್ಯನವರು, ಮಾತನಾಡಿ, ಒಡನಾಟ ಯಾವಾಗಲೂ ಗೆಳೆಯರೊಂದಿಗೆ ನಮ್ಮ ಮೇಲೆ ಹಗೆ ಸಾಧಿಸುವವರೊಡನೆ, ಯಾವ ಆಟ ಆಡಬಹುದು. ಪಾಕಿಸ್ತಾನದ ಗುರಿಯೇ, ಭಾರತವನ್ನು ಸಾವಿರ ಗಾಯದಿಂದ ರಕ್ತವನ್ನು ಇಳಿಸಿ, ದುರ್ಬಲ ಮಾಡಬೇಕೆಂದು ಅನೇಕ ವರ್ಷಗಳ ಹಿಂದೆಯೇ ತೀರ್ಮಾನಿಸಿರುವಾಗ, ಅದು ಈಗ ಬದಲಾಗುವುದು ಅಸಾಧ್ಯ ಎಂದರು. ಅಂತೆಯೇ, ಪಾಕಿಸ್ತಾನದಲ್ಲಿರುವ



ಅಲ್ಪ ಸಂಖ್ಯಾತರನ್ನೇ ಬಗ್ಗು ಬಡಿಯುತ್ತಿರುವ ಇವರು ಭಾರತವನ್ನು ಲೆಕ್ಕಿಸುತ್ತಾರೆಯೇ? ನಾವೀಗ ದೊಡ್ಡ ಮನಸ್ಸಿನಿಂದ ಕಾಶ್ಮೀರ ಕಣಿವೆ ಪಾಕಿಸ್ತಾನಕ್ಕೇ ಕೊಟ್ಟರೂ ಕೂಡ ಈ ಯುದ್ಧ ಅಲ್ಲಿಗೇ ನಿಲ್ಲುವುದಿಲ್ಲ. ಪಾಕಿಸ್ತಾನವನ್ನು ಬಾಂಗ್ಲಾದೇಶದಿಂದ ಬೇರೆ ಮಾಡಿ, ಅವರ 10,000 ಸೈನಿಕರನ್ನು ಸೆರೆಹಿಡಿದ ಅಪಮಾನವನ್ನು ಅಲ್ಲಿಯ ಜನತೆ ಮರೆತರೂ, ಅಲ್ಲಿಯ ಸೈನ್ಯ ಮರೆಯುವುದಿಲ್ಲ. ಬಂಗ್ಲಾ ದೇಶವನ್ನು ಹೊರತು ಮಾಡಿದ ಮೇಲೆಯೇ ಜೀಯಾವುಲ್ ಹಖ್ ಅವನ ಆಳ್ವಿಕೆಯಲ್ಲಿ, ಈ ಉಗ್ರಗಾಮಿಗಳನ್ನು ತಯಾರು ಮಾಡಿ ಭಾರತದ ಮೇಲೆ ಛೂ ಬಿಡುತ್ತಿರುವುದು. ನಾವೂ ಅವರನ್ನು ಬಗ್ಗು ಬಡಿಯದೇ ಉಳಿಗಾಲವಿಲ್ಲ ಎಂದರು. ಈ ಸನ್ನಿವೇಶದಲ್ಲಿ ಕ್ರಿಕೆಟ್ ಏಕೆ, ಯಾವ ಆಟ, ಸಿನೆಮಾ, ಸಂಗೀತಕ್ಕೆ ಯಾವ ಪಾತ್ರವೂ ಇಲ್ಲ ಎಂದರು.

ಪ್ರಾ. ವೆಂಕಟೇಶ್ ಅವರು, ಆಟ ಕೇವಲ ಒಂದು ಜನ ಸಂಪರ್ಕದ ಭಾಗ, ಅದನ್ನು ರಾಜಕೀಯಕ್ಕೆ ಸೇರಿಸುವುದು ಸರಿಯಲ್ಲ. ಭಾರತವೇನು ತಾನಾಗಿ ಪಾಕಿಸ್ತಾನದ ಜೊತೆ ಕ್ರಿಕೆಟ್ ಆಡುತ್ತಿಲ್ಲ. ICCಯ ಆವರಣದಲ್ಲಿ ಎಲ್ಲಾ ದೇಶಗಳ ಜೊತೆ ಆಡಿದರೆ ತಪ್ಪೇನೂ ಇಲ್ಲ ಎಂದರು.

ಶ್ರೀ ನವಿಲೇಕರ್ ಅವರು, ಇದನ್ನು ಕೇವಲ ಆಟದ ನೋಟದಲ್ಲಿ ನೋಡುವಂತಿಲ್ಲ. ICCಯ ಆವರಣದಲ್ಲಿ ಭಾರತ ವರ್ಲ್ಡ್ ಕಪ್‌ಗಾಗಿ ಆಡದಿದ್ದರೆ, ಭಾರತಕ್ಕೆ ಬಹಿಷ್ಕಾರವಾದಂತೆ, ಎಂದು ನಾವೇನೂ ಹೆದರಬೇಕಾಗಿಲ್ಲ. ದಕ್ಷಿಣ ಆಫ್ರಿಕಾಕ್ಕೆ ಎಲ್ಲರೂ ಬಹಿಷ್ಕಾರ ಹಾಕಿದಾಗ ಇಂತಹ ಮಾತೇನೂ ಎದ್ದಿರಲಿಲ್ಲ. ಈಗ ಸಾಕ್ಕರ್ ಆಟದಲ್ಲಿ USA ಬಹಿಷ್ಕಾರ ಹಾಕಿದರೆ, ಎಲ್ಲರೂ ಹಿಂಜರಿಯುತ್ತಾರೆ. ಏಕೆಂದರೆ USAನ ಆರ್ಥಿಕ ಸಾಮರ್ಥ್ಯ ಅಷ್ಟಿದೆ. ಇಂತೆಯೇ ಕ್ರಿಕೆಟ್ ಆಟದಲ್ಲಿ ಭಾರತದಿಂದಲೇ 70ರಷ್ಟು ವರಮಾನವಿರುವಾಗ, ICCಯಲ್ಲಿ ನಾವೂ ನಮ್ಮ ಬಲವನ್ನು ಎತ್ತಿ ತೋರಿಸಬೇಕು ಎಂದರು.

ಶ್ರೀ ಸುರೇಶ್ ಅವರು, ಸಧ್ಯದ ಸನ್ನಿವೇಶದಲ್ಲಿ ನಮ್ಮ ಸೈನಿಕರನ್ನೇ ಸಾವಿಗೆ ಗುರಿ ಮಾಡಿದ ಅವರಿಗೆ ಆಶ್ರಯ ನೀಡುತ್ತಿರುವ ಪಾಕಿಸ್ತಾನದೊಡನೆ ಯಾವ ಆಟವನ್ನು ಆಡುವುದು ತಪ್ಪಾಗುತ್ತದೆ. ಈಗ ಶ್ರೀ. ಅಂಬರೀಷ್ ಮತ್ತು ಶ್ರೀ ಜಾಫರ್ ಶರೀಫರು ಸತ್ತರೆಂದು, ಮುಂಬಯಿಯಲ್ಲಿ ಸಾವಿರಾರು ಮಂದಿ ಸೇರಿದ್ದರೂ ಕೂಡ, ಜಾತ್ರೆಯನ್ನು ರದ್ದು ಮಾಡಿದ ಸರ್ಕಾರ, ಈಗ ನಮ್ಮ ಸೈನಿಕರು ಸತ್ತ ಸಮಯದಲ್ಲಿ ಆಟವನ್ನು ಆಡಿದರೆ ಸರಿಯೇ? ಎಂದು ಕೇಳಿದರು.

ಶ್ರೀಮತಿ ಕಮಲಾ ಅವರು, ಎಲ್ಲವೂ ಜನಜೀವನದ ಅಂಗ. ಜನಸಂಪರ್ಕ ಕೇವಲ ಆಟದಿಂದಲೇ ಬೆಳೆಯುವುದಿಲ್ಲ. ವ್ಯಾಪಾರ, ವಹಿವಾಟುಗಳ ಮೂಲಕವೂ ನಡೆಯುತ್ತದೆ. ಈ ಬಗ್ಗೆ ಪಾಕಿಸ್ತಾನ ಯಾವುದೇ ವಿಧದಿಂದ ಸಹಕರಿಸುತ್ತಿಲ್ಲ.

ಡಾ। ಮಂಜುನಾಥರು ಚರ್ಚೆಯ ವಿಷಯವನ್ನು ವಿಸ್ತಾರ ಮಾಡುತ್ತಾ, ಈಗ ಭಾರತ ಸರ್ಕಾರ ಈಗ ಭಾರತ ಸರ್ಕಾರ ತೆಗೆದು ಕೊಂಡಿರುವ ಹೆಜ್ಜೆಗಳು. ಈ ಸಮಸ್ಯೆಗೆ ಸಮಾಧಾನ ತರುವಂತೆ ಇದೆಯೇ ಇಲ್ಲವೇ ಪ್ರತಿಕೂಲವಾಗಿರುವುದೇ ಎಂದು ಕೇಳಿದರು.

ಶ್ರೀ ನೀಲಕಂಠ ಮೇಡರ್ ಅವರು ಮಾತನಾಡುತ್ತಾ ಪದೇ ಪದೇ ನಾವೇ ಕೆನ್ನೆಗೆ ಹೊಡೆಸಿಕೊಳ್ಳುತ್ತಿರುವುದು ಗಾಂಧಿಯವರ ಕಾಲಕ್ಕೆ ಸರಿ ಯಾಗಿದ್ದಿರಬಹುದು. ಆದರೆ ನಮ್ಮ ಎದುರಾಳಿಯನ್ನು, ಅವನು ಮಾತುಕತೆಗೆ ಅಣಿಯಾಗುವಂತೆ ಮಾಡಬೇಕಾದರೆ, ಅವನನ್ನು ಬಗ್ಗು ಬಡಿಯಬೇಕು ಎಂದರು. ಶ್ರೀ ನರೇಂದ್ರ ಮೋದಿಯವರೇ ಮತ್ತೆ ಪ್ರಧಾನಿಯಾದರೆ ಇದು ಕೈಗೂಡುವುದು ದಿಟ ಎಂದರು.

ಡಾ. ಮಂಜುನಾಥರು ಸೇಡಿಗೆ ಸೇಡು ಎನ್ನುತ್ತಾ ಅವನ ಕಣ್ಣುಗಳನ್ನು ಕಿತ್ತರೆ, ಹಗೆ ಇನ್ನೂ ಹೆಚ್ಚಾಗಬಹುದು. ಯಾವುದಾದಕ್ಕಾದರೂ ಕೊನೆ ಇರಬೇಕಲ್ಲವೇ ಎಂದು ಕೇಳಿದಾಗ, ಶ್ರೀ ಮಂಜುನಾಥಯ್ಯನವರು, ಎಲ್ಲವೂ action and reaction ನಲ್ಲಿ ನಡೆಯುತ್ತದೆ. ಇದಕ್ಕೇ ಕರ್ಮ ಎನ್ನುವುದು. ನಮಗೆ ಹತ್ತಿರವಾದ ಇತಿಹಾಸ ನೋಡಿದರೆ 1768 ಇಂದ 1853ರ ವರೆಗೆ ನಡೆದ ಕ್ರಿಮಿಯನ್ ಯುದ್ಧದ ಫಲವಾಗಿಯೇ ಮೊದಲ ಮಹಾಯುದ್ಧ, ನಂತರ ಎರಡನೇ ಮಹಾಯುದ್ಧ, ಅದರ ಫಲವಾಗಿ ನಡೆದ ಶೀತಲ ಯುದ್ಧ, ಅದರ ಫಲವಾಗಿ ನಡೆದ ಆಫ್ಗನ್ ಯುದ್ಧ, ನಂತರದ ತಾಲೀಬಾನ್, ಒಸಾಮ ಬಿಲ್ ಲಾಡೆನ್, ನಂತರದ ಇರಾಖ್, ಸಿರಿಯಾ ಯುದ್ಧ, ಎಲ್ಲವೂ ಒಂದರ ಕರ್ಮದಿಂದಾಗಿಯೇ ಮತ್ತೊಂದು ಹುಟ್ಟಿದ್ದು. ಆದ್ದರಿಂದ ಈ ಸಮಸ್ಯೆಗೆ ಕೊನೆ ಎಂದು ಕೇಳುವುದರಲ್ಲಿ ಅರ್ಥವಿಲ್ಲ. ಶ್ರಿ ಜಗ್ಗಿ ವಾಸುದೇವರು ಹೇಳುವಂತೆ, ನಮ್ಮ ದೇಶದ ವಿಭಜನೆಗೆ ಒಪ್ಪಿಕೊಂಡ ನಾಯಕರಿಗೆ ತಿಳುವಳಿಕೆಯೇ ಇರಲಿಲ್ಲ. ಸಾವಿರಾರು ವರ್ಷ ನಮ್ಮ ನಾಡಿಗೆ ಇತರ ದೇಶಗಳ ವ್ಯಾಪಾರ ಸಂಪರ್ಕ, ವಾಯವ್ಯ ದಿಕ್ಕು, ಈಶಾನ್ಯ ದಿಕ್ಕುಗಳಲ್ಲಿ ಇದ್ದಿದ್ದನ್ನು, ಕಳೆದುಕೊಂಡ ಈ ವಿಭಜನೆಗೆ ಅರ್ಥವೇ ಇಲ್ಲ. ಭೌಗೋಳಿಕವಾಗಿ ಆಯಕಟ್ಟಿನಲ್ಲಿರುವ ಪಾಕಿಸ್ತಾನವನ್ನು, ಪಾಶ್ಚಾತ್ಯ ದೇಶಗಳಾಗಲಿ, ಚೀನಾ ದೇಶವಾಗಲಿ ಬಿಟ್ಟುಕೊಡುವುದಿಲ್ಲ. ಈಗಾದರೂ ನಾವು ನಮ್ಮ ರಕ್ಷಣೆಯನ್ನು ನಾವೇ ಮಾಡಿಕೊಳ್ಳಬೇಕು. ಸಾವಿರಾರು ವರ್ಷಗಳಿಂದ ನಮ್ಮಲ್ಲಿ ಬೆಳೆದಿರುವ ಸಂಸ್ಕೃತಿಯನ್ನು ನಾವೇ ಕಾಪಾಡಿಕೊಂಡು ಬರದಿದ್ದರೆ, ನಾವು ಇನ್ನು ಬದುಕಿಯೂ ಫಲವಿಲ್ಲ ಎಂದರು. ಒಟ್ಟಾರೆ ಬಹುಮತ ಪಾಕಿಸ್ತಾನವನ್ನು ಸಧ್ಯದಲ್ಲಿ ಹತ್ತಿಕ್ಕಬೇಕು ಎಂದಿತ್ತು.

ಗೌ. ಸಂಪಾದಕರು :

ಡಾ. ಜ್ಯೋತಿ ಸತೀಶ್

❖ ❖❖

ಸಂಪಾದಕ ಮಂಡಳಿ:

ಡಾ. ಮಂಜುನಾಥ್

ಕೆ. ಮಂಜುನಾಥಯ್ಯ

ನಾರಾಯಣ ನವಿಲೇಕರ್

ಗಣಪತಿ ಶಂಕರಲಿಂಗ

ನೀಲಕಂಠ

❖ ❖❖

ಬೆಂಗಳೂರು ಪ್ರತಿನಿಧಿ :

ಎಂ.ಎ.ಎನ್. ಪ್ರಸಾದ್

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. **- ಸಂ**

The views expressed by the contributors in this journal are theirs and not of the Association and the Association is not in anyway responsible for the same.
*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065

Email :
mysoreassociation.mumbai@gmail.com

Website :
www.mysoreassociation.in

*ಸಂಪಾದಕೀಯ*

# ನೇಸರು
## ತಿಂಗಳೋಲೆ

**ಸಂಪುಟ 37** | **ಏಪ್ರಿಲ್ 2019** | **ಸಂಚಿಕೆ 4**

## ಮಾನವ್ಯ ಕವಿ ಬಿ.ಎ. ಸನದಿ ಅವರಿಗೆ ಭಾವಪೂರ್ಣ ನುಡಿನಮನ

ನಾಡಿನ ಹಿರಿಯ ಕವಿ, ಮುಂಬಯಿ ಕನ್ನಡಿಗರ ಹೆಮ್ಮೆಯ ಲೇಖಕ, ಪಂಪಪ್ರಶಸ್ತಿ ವಿಜೇತ ಬಿ. ಎ. ಸನದಿಯವರು ಕನ್ನಡ ಸಾರಸ್ವತ ಲೋಕದಲ್ಲಿ ಮಾನವ್ಯ ಕವಿಯಂದೇ ಚಿರಪರಿಚಿತರಾದವರು. ಅವರ ನಗುಮುಖಕ್ಕೆ, ಮೃದು ಮನಸ್ಸಿನ ನಡವಳಿಕೆಗೆ, ಅಪರಿಚಿತರೂ ತಲೆಬಾಗಲೇಬೇಕು. ಅಂತಹ ವ್ಯಕ್ತಿತ್ವ ಅವರದು. ಎಲ್ಲರನ್ನೂ ತಮ್ಮವರೆಂದೇ ಕಂಡು ಪ್ರೀತಿಸುವ ಅವರ ಮನೋಭಾವಕ್ಕೆ ಶರಣು ಶರಣು. 'ಮನುಷ್ಯ ಜಾತಿ ತಾನೊಂದೆ ವಲಂ' ಎನ್ನುವುದನ್ನು ತಮ್ಮ ಕವನಗಳ ಮೂಲಕ, ಲೇಖನಗಳ ಮೂಲಕ ಸಾರಿ ಹೇಳಿದ್ದು ಮಾತ್ರವಲ್ಲದೆ, ಜಾತಿ, ಮತ, ಧರ್ಮ ಇವೆಲ್ಲದರಿಂದ ಮೀರಿ ಮನುಷ್ಯ ಬೆಳೆಯಬೇಕು ಎನ್ನುವ ಅಭಿಲಾಷೆಯನ್ನು ಹೊತ್ತವರು. ಹಾಗೆಯೇ ತಮ್ಮ ನಿಡುಬಾಳಿನುದ್ದಕ್ಕೂ ತಮ್ಮನ್ನು ಅದೇ ರೀತಿ ಉಳಿಸಿಕೊಂಡು, ಅದೇ ರೀತಿ ನಡೆದುಕೊಂಡರು. ಅಂತಹ ಮಹಾನ್ ಚೇತನವನ್ನು ಕಳೆದುಕೊಂಡ ನಮ್ಮ ಪರಿಸ್ಥಿತಿ ನಾವಿಕನಿಲ್ಲದ ದೋಣಿಯ ಪಯಣಿಗರಂತಾಗಿದೆ. ಎಲ್ಲಿಯೇ ಸಿಕ್ಕಿದರೂ, ಹೇಗಿದ್ದೀಯಮ್ಮಾ, ಏನು ಮಾಡಿಕೊಂಡಿದ್ದಿ? ಎಂತ ಬಲು ಅಕ್ಕರೆಯಿಂದ ವಿಚಾರಿಸಿಕೊಳ್ಳುತ್ತಿದ್ದ ಅವರ ಪರಿ ಇಂದಿಗೂ ಕಣ್ಣಿಗೆ ಕಟ್ಟುವಂತಿದೆ. ಅವರ ನಾಲಿಗೆಯಲ್ಲಿ ನಮ್ಮ ಹೆಸರು ಜ್ಞಾಪಕವಿದ್ದಕ್ಕೆ ಒಳಗೊಳಗೆ ನಾನೆಷ್ಟು ಭಾಗ್ಯವಂತೆ ಅಂತ ಅಂದುಕೊಳ್ತಿನಿ. ಪಿಎಚ್.ಡಿ. ಮುಗಿಸಿದ್ದೀಯಾ, ಎರಡೆರಡು ಸಲ್ ನೆಟ್ ಎಕ್ಸಾಮ್ ಕೂಡ ಪಾಸಾಗಿದ್ದೀಯಾ ಊರಲ್ಲಿ ಲೆಕ್ಚರ್‌ಶಿಪ್‌ಗೆ ಅರ್ಜಿ ಹಾಕು ಅಂತ ಯಾವಾಗಲೂ ಹೇಳುತ್ತಿದ್ದರು. ಕಾಯಕ ಯಾವುದಾದರೇನು, ಕನ್ನಡ ಸಾಹಿತ್ಯದ ನಂಟನ್ನು ಉಳಿಸಿಕೊಂಡಿದ್ದೇನೆ, ನೇಸರುವಿನ ಸಂಪಾದಕಿಯಾಗಿ ಅಂತ ಹೇಳಿದ್ದಕ್ಕೆ ಬಹಳ ಖುಷಿಪಟ್ಟಿದ್ದರು. ಅಂತಹ ಹಿರಿಯರಿಂದ ಇನ್ನು ನಮಗೆ ಆಶೀರ್ವಾದ ಸಿಗುವುದಿಲ್ಲ ಎಂದು ನೆನೆದೇ ಮನಸ್ಸು ಖೇದಗೊಂಡಿದೆ.

ಸನದಿಯವರ ಜೊತೆ ಕುಳಿತುಕೊಂಡು ಮಾತನಾಡಿದರೆ ಹೊತ್ತು ಕಳೆದುಹೋಗುವುದೇ ತಿಳಿಯುವುದಿಲ್ಲ. ಅಷ್ಟೊಂದು ಜ್ಞಾನ ಭಂಡಾರವಿದೆ ಅವರಲ್ಲಿ. ಅವರ ನೆನಪಿನ ಬತ್ತಳಿಕೆಯಿಂದ ಅವರು ಮುಂಬೈಯಲ್ಲಿ ಕಳೆದ ಅನುಭವ ಕಥನಗಳನ್ನು ಕೇಳುವುದೇ ಒಂದು ರೋಮಾಂಚಕ ಅನುಭವ. ಒಬ್ಬ ಲೇಖಕನಾದವನು ಇತರ ಲೇಖಕರ ಕೃತಿಗಳನ್ನು ಓದಿ, ಮೆಚ್ಚುಗೆ ವ್ಯಕ್ತಪಡಿಸಬೇಕು. ಸನದಿಯವರೂ ಕೂಡ ಹಾಗೆಯೇ, ತಮಗಿಂತ ಕಿರಿಯವರು ಬರೆದು ಕಳಿಸಿದ ಕೃತಿಗಳುನ್ನು ಪ್ರೀತಿಯಿಂದ ಓದಿ, ತಿದ್ದಿ, ಸಲಹೆ ಸೂಚನೆಗಳನ್ನು ಹೇಳುತ್ತಿದ್ದರು. ತಮ್ಮ ಜೀವಮಾನದ ಬಹುಭಾಗವನ್ನು ಒಳನಾಡಿನಲ್ಲಿ ಕಳೆದರೂ, ಮುಂಬಯಿ ಆಕಾಶವಾಣಿಯಲ್ಲಿ ಹಿರಿಯ ಅಧಿಕಾರಿ 3 ದಶಕಗಳ ಕಾಲ ಮುಂಬಯಿಯಲ್ಲಿ ನೆಲೆಸಿದ ಅವರು ಆಕಾಶವಾಣಿಯಲ್ಲಿ ಕನ್ನಡ ಸಂಸ್ಕೃತಿಗೆ ಒತ್ತುಕೊಟ್ಟು, ಯಕ್ಷಗಾನ ಕಲೆಗೆ ವಿಶೇಷವಾದ ಸ್ಥಾನವನ್ನು ಕಲ್ಪಿಸಿಕೊಟ್ಟರು. ರೇಡಿಯೋ ನಾಟಕಗಳ ಮೂಲಕ ಕನ್ನಡ ಭಾಷೆಯ ಉಳಿವಿಗಾಗಿ ಅನನ್ಯ ಸೇವೆ ಸಲ್ಲಿಸಿದರು. ಕರ್ನಾಟಕ ಸಂಘದ ಉಪಾಧ್ಯಕ್ಷರಾಗಿ, ಎನ್.ಕೆ.ಇ.ಎಸ್.ನ ಆಡಳಿತ ಮಂಡಳಿಯ ಸದಸ್ಯರಾಗಿಯೂ ಕೆಲಸಮಾಡಿದ್ದರು. ಅವರ ಕುಮಟಾದಲ್ಲಿ ಮನೆಯ ಮುಂದಿರುವ ತುಳಸಿಕಟ್ಟೆ ಬಗ್ಗೆ ಅವರು ಬರೆದಿರುವ ಕವನದ ಸಾಲುಗಳು ಎಲ್ಲರನ್ನು ಮಂತ್ರಮುಗ್ಧಗೊಳಿಸಿವೆ ಎಂದರೆ ತಪ್ಪಾಗಲಿಕ್ಕಿಲ್ಲ.ಮುಸ್ಲಿಂ ಕುಟುಂಬದವರ ಮನೆಯ ಮುಂದೆ ಹಿಂದೂ ಸಂಪ್ರದಾಯದ ತುಳಸಿ ಕಟ್ಟೆಯನ್ನು ನೋಡಿ ಎಲ್ಲರ ಮನಸ್ಸನ್ನೂ ಕಾಡಿದಾಗ, ಸನದಿಯವರೇ ಬರೆದಿರುವ ಕವನದ ಸಾಲುಗಳು...

"ಇದ್ದರೂ ಇರಲಿ ಬಿಡಿ, ನಮಗೆ ಅಡಚಣೆಯಿಲ್ಲ
ಎಷ್ಟು ಚೆಂದಾಗಿದೆ ನೋಡಿ ಚೌಕಾಕಾರದ ಕಲ್ಲಿನ ಕಟ್ಟೆ!
ನಿಮ್ಮಂಥ ಅತಿಥಿಗಳ ಆನಂದಕಿರಲೆಂದು
ಅದರ ಸುತ್ತಲೂ
ತರತರದ ಹೂಕುಂಡಗಳ ಜೋಡಿಸಿಟ್ಟೆ!
ಯಾರೋ ಕಟ್ಟಿದುದನ್ನು ಒಡೆಯುವುದು
ಸರಿಯಲ್ಲವೆಂದು ಬಿಟ್ಟೆ!"

ಒಡೆದು ಆಳುವವರ ನಡುವೆ, ಕಟ್ಟುವ ಕಾಯಕ ನೆಚ್ಚಿಕೊಂಡ ಸನದಿಯವರ ನಿಷ್ಕಲ್ಮಶ ಮನೋಭಾವವನ್ನು ಶ್ಲಾಘಿಸಲೇಬೇಕು. ಎಲ್ಲರನ್ನೂ ತಮ್ಮ ಪ್ರೀತಿಯಿಂದ ಬೆಸುಗೆ ಹಾಕಿ ಕನ್ನಡ ಕಾಯಕ ಮಾಡುತ್ತಿದ್ದ ಮಹಾನ್ ಚೇತನ ಇವತ್ತು ನಮ್ಮೊಂದಿಗಿಲ್ಲ. ಅವರ ಆತ್ಮಕ್ಕೆ ಶಾಂತಿಸಿಗಲೆಂದು ಮನಸಾ ಹಾರೈಸುವೆ.

**– ಡಾ. ಜ್ಯೋತಿ ಸತೀಶ್**

ಇನ್ನು ಎಲ್ಲಿಗೋಟ– ಪ್ರವಾಸ ಟಿಪ್ಪಣಿಗಳು

# ದ ಹೌಸ್ ಆನ್ ಮ್ಯಾಂಗೋ ಸ್ಟ್ರೀಟ್‌ನ ಒಂದು ತುಣುಕು



✍ **ಉಮಾ ರಾವ್**

**ಕತ್ತಲಲ್ಲಿ ದಣಿದು ಎದ್ದ ಅಪ್ಪ**

ನಿಮ್ಮ ಅಜ್ಜ ತೀರಿಕೊಂಡ... ಒಂದು ಬೆಳಗಿನ ಜಾವ ಪಪ್ಪ ನನಗೆ ಹೇಳಿದ. ಸತ್ತು ಹೋದ. ಅಂದವನೇ ಆ ಸುದ್ದಿ ಅದೇ ಕೇಳಿದವನಂತೆ ಒಂದು ಹಳೆಯ ಕೋಟಿನಂತೆ ಮುದುರಿ ಅಳತೊಡಗಿದ. ಯಾವುದಕ್ಕೂ ಹೆದರದ ನನ್ನ ಪಪ್ಪ. ನಾನೆಂದೂ ಪಪ್ಪ ಅತ್ತಿದ್ದು ನೋಡಿರಲಿಲ್ಲ. ನನಗೇನು ಮಾಡಬೇಕೆಂದು ತೋಚುತ್ತಿಲ್ಲ.

ಅವನು ಇನ್ನು ಹೊರಡಬೇಕೆಂದು ನನಗೆ ಗೊತ್ತು. ಮೆಕ್ಸಿಕೋಗೆ ಪ್ಲೇನ್ ಹತ್ತಿ ಹೊರಡಬೇಕು, ಎಲ್ಲಾ ಚಿಕ್ಕಪ್ಪ ಚಿಕ್ಕಮ್ಮಂದಿರು ಅಲ್ಲಿರುತ್ತಾರೆ. ಗೋರಿಯೆದುರು ಬಿಳಿ ಹೂ ದಾನಿಗಳಲ್ಲಿ ಜೋಡಿಸಿಟ್ಟ ರಾಶಿ ರಾಶಿ ಹೂಗುಚ್ಛಗಳ ನಡುವೆ ಅವರೆಲ್ಲಾ ಒಂದುಕಪ್ಪು ಬಿಳುಪು ಫೋಟೋ ತೆಗೆಸಿಕೊಳ್ಳುತ್ತಾರೆ. ಸತ್ತು ಹೋದವರನ್ನು ಆ ದೇಶದಲ್ಲಿ ಕಳಿಸಿಕೊಡುವುದೇ ಹಾಗೆ.

ನಾನು ಎಲ್ಲರಿಗಿಂತ ದೊಡ್ಡವಳಾದ್ದರಿಂದ ನನ್ನ ಪಪ್ಪ ಮೊದಲು ನನಗೆ ವಿಷಯ ತಿಳಿಸಿದ್ದ. ಈಗ ಬೇರೆಲ್ಲರಿಗೂ ಹೇಳುವ ಕೆಲಸ ನನ್ನದು. ಯಾಕೆ ಆಟ ಆಡುವ ಹಾಗಿಲ್ಲ ಎಂದು ಅವರಿಗೆ ತಿಳಿಸಿ ಹೇಳಬೇಕು. ಇವತ್ತು ಗಲಾಟೆ ಮಾಡದೆ ಸುಮ್ಮನಿರಬೇಕೆಂದು ಅವರಿಗೆ ಒಪ್ಪಿಸಬೇಕು.

ಒರಟು ಕೈಗಳು, ಒರಟು ಬೂಟುಗಳ ನನ್ನ ಪಪ್ಪ, ಕತ್ತಲಲ್ಲಿ ದಣಿವಿನಲ್ಲೇ ಎದ್ದುತಲೆ ಗೂದಲನ್ನು ನೀರು ಹಚ್ಚಿ ಬಾಚಿಕೊಂಡು ಕಾಪಿ ಕುಡಿದು ನಾವು ಏಳುವ ಮೊದಲೇ ದಿನಾ ಕೆಲಸಕ್ಕೆ ಹೋಗುವ ನನ್ನ ಪಪ್ಪ ಇವತ್ತು ನನ್ನ ಹಾಸಿಗೆಯ ಮೇಲೆ ಕೂತಿದ್ದಾನೆ.

ನಾನು ನನ್ನ ಪಪ್ಪನೇ ಸತ್ತು ಹೋದರೆ ಏನು ಮಾಡುತ್ತೇನೆ ಎಂದು ಯೋಚಿಸುತ್ತಿದ್ದೇನೆ. ನನ್ನ ತೋಳುಗಳನ್ನು ಪಪ್ಪನ ಸುತ್ತ ಗಟ್ಟಿಯಾಗಿ ಬಳಸಿ ಅವನನ್ನು ಕಟ್ಟಿಕೊಂಡಿದ್ದೇನೆ... ಹಾಗೇ ಕಟ್ಟಿಕೊಂಡೇ ಇದ್ದೇನೆ.

**ಯೂನಿವರ್ಸಿಟಿ ಟೌನ್ ಮ್ಯಾಡಿಸನ್**

ಒಳ್ಳೆ ಬೇಸಗೆ ಕಾಲದ ನಡುವೆ ಮೊನ್ನೆ ಇದ್ದಕ್ಕಿದ್ದಂತೆ ಕಾರ್ಮೋಡ ಕಟ್ಟಿ ಕೆಲವೇ ಗಂಟೆಗಳಲ್ಲಿ ಧೋ ಎಂದು 7–8 ಇಂಚು ಮಳೆ ಸುರಿಯಿತು. ಜೊತೆಗೆ ಮಿಂಚು, ಗುಡುಗು, ಸಿಡಿಲುಗಳ ಆರ್ಭಟ. ಮಿಲ್ವಾಕಿಯ ರಸ್ತೆಗಳಲ್ಲೆಲ್ಲಾ ನೀರು ತುಂಬಿ ಹರಿದು, ಕಾರುಗಳು ದಾರಿಗಡ್ಡ ಕೆಟ್ಟು ನಿಂತು, ಮನೆಗಳ ಬೇಸ್ಮೆಂಟ್‌ಗಳಲ್ಲೆಲ್ಲಾ ನೀರು ತುಂಬಿಕೊಂಡು, ಗಂಟೆಗಟ್ಟಳೆ ಪವರ್ ಹೋಗಿ, ಕೆಲವು ಕಡೆ ಟಾರ್ನೈಡೊ ವಾರ್ನಿಂಗ್ ಬಂದು ಸೈರನ್‌ಗಳು ಕಿರುಚಿ ಜನರ ಬದುಕನ್ನು ತಿರುವು ಮುರುವು ಮಾಡಿತು.

ಆದರೆ ಮಾರನೆಯ ದಿನ ಬೆಳಗ್ಗೆದ್ದು ನೋಡಿದರೆ ಎಲ್ಲ ಸರಿಯಿದೆಯೇ ಎಂದು ಖಾತರಿ ಮಾಡಿಕೊಳ್ಳಲು ರಸ್ತೆಯಲ್ಲಿ ಗಸ್ತು ತಿರುಗುತ್ತಿದ್ದ ಬೇರೆ ಬೇರೆ ವಿಭಾಗಗಳ ಸರ್ಕಾರಿ ವಾಹನಗಳ ಬಿಟ್ಟು ಹಿಂದಿನ ದಿನದ ಆರ್ಭಟದ ಕುರುಹೂ ಇರಲಿಲ್ಲ. ಫಳಿಚ್ ಅಂತಿದ್ದ ಬಿಸಿಲು. ನೀಲಿ ನೀಲಿ ಆಕಾಶ. ಚಿಲಿಪಿಲಿ ಗುಟ್ಟುತ್ತಾ ಸಣ್ಣ ಹುಳುಗಳನ್ನು ಹೆಕ್ಕಿ ತಿನ್ನುವುದರಲ್ಲಿ ನಿರತರಾಗಿದ್ದ ಹಕ್ಕಿಗಳು.

ಅಂದು ನಾವು ಇಲ್ಲಿಂದ ಸುಮಾರು 60 ಮೈಲು ದೂರದಲ್ಲಿರುವ ಮ್ಯಾಡಿಸನ್‌ಗೆ ತಿರುಗಾಡಲು ಹೊರಟೆವು. ಕಾರು ಸಾಗಿದಂತೆ ಎರಡೂ ಬದಿಯಲ್ಲಿ ಹಚ್ಚ ಹಸಿರಿನ ನಡುವೆ ನೇರ ರಸ್ತೆ ಓಡುತ್ತಿತ್ತು. ನಡುನಡುವೆ ಚಿಕ್ಕಚಿಕ್ಕ ಊರುಗಳು. ಅವುಗಳಿಗೆ ಎಂದೋ ಇಲ್ಲಿದ್ದು ಈಗ ಹೆಸರಿಲ್ಲದ ಜನರು ಇಟ್ಟ ಹೆಸರುಗಳು. ಪ್ರತಿ ಊರಿನಲ್ಲಿ ಮೆಕ್ಡೊನಾಲ್ಡ್‌ಗಳೂ. ಟ್ಯಾಕೋ ಬೆಲ್‌ಗಳು, ಪೀಜಾ ಹಟ್‌ಗಳು, ಪಿಕ್‌ಎನ್ ಸೇವ್‌ಗಳು.

ಮ್ಯಾಡಿಸನ್ ಒಂದು ಚೆಂದಾದ ಯೂನಿವರ್ಸಿಟಿ ಟೌನ್, ಎಲ್ಲೆಲ್ಲೂ ಸ್ಕೇಟ್ ಮಾಡುತ್ತಾ, ಸೈಕಲ್ ಹೊಡೆಯುತ್ತಾ ತಿರುಗಾಡುವ ಯುವಕ ಯುವತಿಯರು. ಇದಕ್ಕೆ ವಿಸ್ಕಾನ್ಸಿನ್‌ನ ಬೈಕಿಂಗ್ ಕ್ಯಾಪಿಟಲ್ ಎಂಬ ಬಿರುದನ್ನೂ ತಂದುಕೊಟ್ಟಿದ್ದಾರೆ. ಊರು ತುಂಬಾ ಚೊಕ್ಕ ಚೌಕ ಬಡಾವಣೆಗಳು. ಸುತ್ತ ಹೊದೋಟ ಹುಲ್ಲು ಹಾಸು ಹೊಂದಿದ ಚಂದದ ಮನೆಗಳು. ಅವುಗಳಿಂದ ಹೊರಬರುವ ಹಸುವಿನಂಥಾ ನಾಯಿಗಳು. ಅವುಗಳು ರಸ್ತೆಗೆ ಬರದಂತೆ ಹಾಕಿರುವ ಕಣ್ಣಿಗೆ ಕಾಣದ ಬೇಲಿಗಳು. ಉಗುರಿಲ್ಲದ ಬೆಕ್ಕುಗಳು. ಪುಕ್ಕ ಕತ್ತರಿಸಿದ ಗಿಣಿಗಳು. ಅವು ಕುಕ್ಕಿ ಕುಕ್ಕಿ ಕೊಕ್ಕು ಹರಿತ ಮಾಡಿಕೊಳ್ಳುತ್ತಾ ಬದುಕು ಸವೆಸಲು ಚಚೌಕದ ಮರದ ತುಂಡುಗಳು. ಐಸ್‌ಕ್ರೀಮ್ ಅಂಗಡಿಗಳಲ್ಲಿ ಆನೆಯಂಥಾ ಜನ. ಹಚ್ಚೆಯಂಗಡಿಗಳಲ್ಲಿ ಉದ್ದಕೂದಲಿನವರ ಕ್ಯೂ. ಭೂತಾಕಾರದ ಬೈಕುಗಳ ಮೇಲೆ ಕಪ್ಪು ಲೆದರ್ ಜ್ಯಾಕೆಟ್ಟಿನ ಧಾಂಡಿಗರ ಮೆರವಣಿಗೆ. ಸರೋವರದ ಮುಂದೆ ಈಜುಡುಗೆಯ ಚೆಲುವೆಯರ ಸಂತೆ. ನಮ್ಮೂರಿನಲ್ಲಿ ಮಕ್ಕಳು ಓಡಿಸುವ ಸ್ಕೂಟರುಗಳ ದೊಡ್ಡ ರೂಪಗಳಂತೆ ಕಾಣುವ ಸೆಗ್ವೇಗಳ ಮೇಲೆ ಮತ್ತೊಂದು ಜಾತ್ರೆ, ಎಲ್ಲೆಲ್ಲೂ ಬೇಸಗೆಯನ್ನು ಸಂಭ್ರಮಿಸುವ ಜನ.

ಹಿಮವರ್ಷ ವಿದಾಯ ಹೇಳುವುದನ್ನೇ ಕಾದಿದ್ದು ಈಗ ಮನೆ ರಿಪೇರಿ, ಮರಗೆಲಸ, ಪೇಟಿಂಗ್, ಲಾನ್ ಮೋಯಿಂಗ್‌ಗಳಲ್ಲಿ ನಿರತರಾಗಿರುವ ಕುಟುಂಬಗಳು.

ಇಲ್ಲಿರುವ ಓಲ್ ಬ್ರಿಚ್ ಬೊಟ್ಯಾನಿಕಲ್ ಗಾರ್ಡನ್ಸ್ ಉತ್ತರ ಅಮೇರಿಕಾದಲ್ಲಿ ಹತ್ತು ಅತ್ಯಂತ ಸ್ಫೂರ್ತಿದಾಯಕ ತೋಟಗಳಲ್ಲಿ ಒಂದೆಂದು ಹೆಸರು ಪಡೆದಿದೆ. 16 ಎಕರೆಗಳಷ್ಟು ಹರಡಿರುವ ಈ ತೋಟಕಾಡು ಹೂಗಳು, ಅಲಂಕಾರಿಕ ಹೂಗಳು, ಚೆರ್ರಿ ಗಿಡಗಳ ತೋಪು, ಕಲ್ಲು ಬಂಡೆಗಳ ಕಲಾತ್ಮಕ

ಉದ್ಯಾನವನ, ಔಷಧೀಯ ಸಸ್ಯಗಳು, ಗುಲಾಬಿ ಗಿಡಗಳು, ಬಟರ್ ಫ್ಲೈಗಾರ್ಡನ್. ..ಹೀಗೆ ಬೇರೆ ಬೇರೆ ರೀತಿಯ ಹಲವಾರು ವಿಭಾಗಗಳನ್ನು ಹೊಂದಿವೆ. ಇದರಲ್ಲಿ ಎದ್ದು ಕಾಣುವುದು ಥಾಯ್ ಪೆವಿಲಿಯನ್ ಮತ್ತು ಅದನ್ನು ಸುತ್ತುವರಿದಿರುವ ಥಾಯ್ ಶೈಲಿಯ ತೋಟ. ಅಮೆರಿಕಾದಲ್ಲಿ ಈ ರೀತಿಯ ಏಕೈಕ ತೋಟವಾಗಿರುವ ಇದು, ಥಾಯ್ ಸರ್ಕಾರ ಇಲ್ಲಿನವರಿಗೆ ಕೊಟ್ಟಿರುವ ಕೊಡುಗೆ.

ಇಲ್ಲಿ ಹಣ್ಣು ಹಣ್ಣು ಮುದುಕರಿಂದ ಪುಟಾಣಿ ಮಕ್ಕಳವರೆಗೂ ಎಲ್ಲರು ತುಂಬಿದ್ದರೂ ಎಲ್ಲೆಲ್ಲೂ ಒಂದು ಶಿಸ್ತು, ಶಾಂತಿ ಆವರಿಸಿತ್ತು. ಮಕ್ಕಳನ್ನು ಹೆಚ್ಚು ಆಕರ್ಷಿಸಿದ್ದು ಬಟರ್ ಫ್ಲಯ್ ಪಾರ್ಕ್. ಟ್ರಾಪಿಕಲ್ ಶೈಲಿ ಗಿಡಮರಗಳನ್ನು ದೊಡ್ಡಗಾಜಿನ ಡೋಮ್ ಒಂದರಲ್ಲಿ ಬೆಳೆಸಿ ಅದರಲ್ಲಿ ತರ ಹೆವಾರಿ ಚಿಟ್ಟೆಗಳನ್ನೂ ಸಾಕಿದ್ದರು. ಎಲ್ಲೆಲ್ಲೂ ತಮ್ಮ ಬಣ್ಣ ಬಣ್ಣ ಪ್ರದರ್ಶಿಸುತ್ತಾ, ಕೈ ಮೈ ಮೇಲೆ ಕೂಡುತ್ತಾ, ಮಕ್ಕಳನ್ನು ಆಟವಾಡಿಸುತ್ತಿದ್ದ ಚಿಟ್ಟೆಗಳನ್ನು ಕಂಡ ನಮ್ಮ ಪುಟಾಣಿಗಳೂ ಮೈ ಮರೆತರು. ಮಕ್ಕಳು ಕೇಳಿದ ಪ್ರಶ್ನೆಗಳಿಗೆಲ್ಲಾ ವಾಲಂಟಿಯರ್‌ಗಳೂ ಸಮಾಧಾನವಾಗಿ ಉತ್ತರಿಸುತ್ತಿದ್ದರು. ನಮಗೋ ಎಷ್ಟೋ ದಿನಗಳ ನಂತರ ಅಲ್ಲಿ ಇದ್ದಕ್ಕಿದ್ದಂತೆ ಎದುರಾದ ಶುಂಠಿ, ಏಲಕ್ಕಿ, ಬಾಳೆ, ದಾಸವಾಳದ ಗಿಡಗಳು, ಸುತ್ತುವರಿದ ಮಲ್ಲಿಗೆ ಹೂವಿನ ಗಂಧ ನಮ್ಮನ್ನು ಆ ಕ್ಷಣ ನಮ್ಮ ಮಣ್ಣಿಗೆ ಸೆಳೆದು ಹೋಮ್ ಸಿಕ್‌ನೆಸ್ ತುಂಬಿತು.

ಸುತ್ತಾಡಿ ಹೊರಗೆ ಬಂದು ಕಾಫಿ ಕುಡಿಯುತ್ತಾ ಕುಳಿತೆವು. ಇಲ್ಲಿ ಮಕ್ಕಳು ಹಾಯಾಗಿ, ಖುಷಿಯಾಗಿ ಬೆಳೆಯುವ ರೀತಿಯೇ ಹೀಗೆ. ಇಷ್ಟವಾದ ಕ್ರೀಡೆ, ಮನಸ್ಸಿಗೆ ಹೊಂದುವ ವಿಷಯಗಳ ಅಭ್ಯಾಸ, ಸಂಗೀತ, ನೃತ್ಯ, ಕಲೆ, ನಿಸರ್ಗದಲ್ಲಿ ಒಂದಾಗಿರಲು ಸಾಕಷ್ಟು ಸಮಯ..., ಇನ್ನೇನು ಬೇಕು. ನಮ್ಮಲ್ಲೋ, ನರ್ಸರಿಯಿಂದ ಸೀಟಿಗಾಗಿ ಕ್ಯೂ ನಿಂತು, ಡೊನೇಶನ್ ಕೊಟ್ಟೂ, ಕಾಲೇಜುಗಳಿಗಾಗಿ ಕ್ಯೂ ನಿಂತು ಡೋನೇಷನ್ ಕೊಟ್ಟು ಮತ್ತೆ ಪ್ರೊಫೆಶನಲ್ ಕೋರ್ಸುಗಳಿಗಾಗಿ ಕ್ಯೂ ನಿಂತು, ಸಾಲ ಡೊನೇಶನ್ ಕೊಟ್ಟು ಸಿಇಟಿಯಲ್ಲಿ ಬ್ಲಡ್ ಪ್ರೆಶರ್ ಹೆಚ್ಚು ಮಾಡಿಕೊಂಡು... ಕೊನೆಗೂ ಆರ್ಟ್ಸ್ ತೆಗೆದುಕೊಳ್ಳಲು ಹಂಬಲಿಸುತ್ತಿರುವ ಮಗಳಿಗೆ 'ನಿನಗೆ ಆಮೇಲೆ ಕೆಲಸ ಯಾರು ಕೊಡುತ್ತಾರೆ' ಎಂದು ಜಬರಿಸಿ ಇಂಜಿನಿಯರಿಂಗ್‌ಗೆ ತಳ್ಳಿ... ಎಷ್ಟೆಲ್ಲಾ ವಿಷಯಗಳು ಒಮ್ಮೆಗೇ ಕಾಡಿದವು. ಇಲ್ಲಿ ಮಕ್ಕಳು ಎಷ್ಟು ಅದೃಷ್ಟವಂತರು...

ಆಗ ಕೆಲವೇ ದಿನಗಳ ಹಿಂದೆ ನಡೆದ ಘಟನೆಯೊಂದು ನೆನಪಾಗಿ ನಗುವೂ ಬಂತು. ಅಂದು ನನ್ನ 6 ವರ್ಷದ ಮೊಮ್ಮಗ ಧ್ರುವ ಸ್ಕೂಲ್ ಬಸ್ಸಿನಿಂದ ಇಳಿಯುತ್ತಲೇ ಓಡಿ ಬಂದು ತನಗೆ ಅಂದು ಸಿಕ್ಕಿದ್ದ ಸ್ಪೆಶಲ್ ಸರ್ಟಿಫಿಕೇಟ್ ತೋರಿಸಿದ. ಇಡೀ ಸ್ಕೂಲಿಗೆ ಈ ಪುಟಾಣಿ ಅಮೆರಿಕನ್ ಬಾವುಟಕ್ಕೆ ತಮ್ಮ ನಿಷ್ಠೆಯ ಪ್ಲೆಜ್ ಹೇಳಿಸುವುದರಲ್ಲಿ ಮುಂದಾಳಾಗಿದ್ದ.

ಟೀಚರ್‌ಗಳು 'ವಿ ಆರ್ ಪ್ರೌಡ್ ಅಫ್ ಯು' ಎಂದು ಬೆನ್ನು ತಟ್ಟಿ ಸರ್ಟಿಫಿಕೇಟ್ ಕೊಟ್ಟು ಕಳಿಸಿದ್ದರು. ಆ ಕ್ಷಣ ನನ್ನೊಳಗೆ ಹಾದು ಹೋದ ವಿಚಿತ್ರ ನೋವನ್ನು ಮರೆ ಮಾಚುತ್ತಲೇ ನಾನೂ ಅವನ ಬೆನ್ನುತಟ್ಟಿದ್ದೆ. ●


*With best compliments from:*

**R. M. Hegde**

Mob :**99306 37027**

Email :rhegde92@gmail.com

# JYOTHI CATERERS

Specialist in: **PUNJABI & SOUTH INDIAN DISHES**

**Let us be your personal chef for your SPECIAL EVENT**
**Buffets set ups for Breakfast, Lunch and Dinner**

Bhau Daji Road, Matunga, Mumbai - 400 019.

# ಸುಪ್ರೀಂಕೋರ್ಟಿನ ಆದೇಶದ ಮೇರೆಗೆ ನಡೆಯುವ ಮಧ್ಯಸ್ಥಿಕೆಯಿಂದ ಜಗಳ ಬಗೆ ಹರಿಯುವುದೇ?



✍ ಡಾ. ಬಿ.ಆರ್.ಮಂಜುನಾಥ್

ಈಗ ತಾನೇ ಸುಪ್ರೀಂಕೋರ್ಟ್, ಮೂರು ಮಂದಿಯ ಮಧ್ಯಸ್ಥಿಕೆಯ ತಂಡವನ್ನು ನೇಮಿಸಿ, ರಾಮ ಜನ್ಮಭೂಮಿ–ಬಾಬರಿ ಮಸೀದಿಯ ಜಗಳವನ್ನು 8 ವಾರಗಳೊಳಗಾಗಿ ಬಗೆ ಹರಿಸಬೇಕೆಂದು ಆಣತಿಯನ್ನು ನೀಡಿದೆ. ಇದರಲ್ಲಿ ಮಾಜಿ ನ್ಯಾಯಾಧೀಶ ಕಲೀಫುಲ್ಲಾ, ಶ್ರೀ ಶ್ರೀ ರವಿಶಂಕರ್, ಶ್ರೀ ಶ್ರೀರಾಮ್ ಪಂಚು ಸೇರಿದ್ದಾರೆ. ಮೂವರೂ ತಮಿಳುನಾಡಿನ ಚೆನ್ನೈನವರು. ಶ್ರೀ ಶ್ರೀ ರವಿಶಂಕರ್ ಅವರು ತಂಜಾವೂರಿನ ಪಾಪನಾಶನಂನವರು ಶ್ರೀರಾಮ್ ಪಂಚು ಅವರು ವೃತ್ತಿಯಿಂದ ವಕೀಲರು. ಅವರು ಕಳೆದ 15 ವರ್ಷಗಳಿಂದ ಮೀಡಿಯೇಷ್ ಛೇಂಬರ್ಸ್ ಒಂದನ್ನು ಕಟ್ಟಿ, ಕೋರ್ಟಿನ ಆಣತಿಯ ಮೇರೆಗೆ ಹಲವಾರು ಬಗೆ ಹರಿಸಲಾಗದ ಜಗಳಗಳನ್ನು ಬಗೆ ಹರಿಸಿದ್ದಾರೆ. ಅಸ್ಸಾಂ–ನಾಗಾಲ್ಯಾಂಡ್‌ನ ನಡುವೆ 500 ಚ.ಕಿ. ಮೀಟರ್‌ಗಳ ಗಡಿ ಜಗಳವನ್ನು ಬಗೆ ಹರಿಸಿದ್ದಾರೆ. ಹಲವಾರು ಕಂಪೆನಿಗಳ ವಿವಾದ, ಮನೆತನದ ವಿವಾದ ಹಾಗೂ ಅಂತರರಾಷ್ಟ್ರೀಯ ವಿವಾದಗಳನ್ನು ಬಗೆಹರಿಸಿದ್ದಾರೆ. ಅವರು ಸಿಂಗಪೂರಿನ ಅಂತರರಾಷ್ಟ್ರೀಯ ವಿವಾದ ಬಗೆ ಹರಿಸುವ ಹಲಗೆಯ ಮೇಲಿರುವ ಒಬ್ಬರಾಗಿದ್ದಾರೆ. ಅವರು ಎರಡು ಹೊತ್ತಿಗೆಗಳನ್ನು ಬರೆದಿದ್ದಾರೆ. Settle for More, Mediation; Practice & law. ಅವರು ಒಬ್ಬ ಪ್ರಕಾಂಡ ಮಧ್ಯಸ್ಥಿಕೆಗಾರರು ಎಂದು ಹೆಸರು ಪಡೆದಿದ್ದಾರೆ.

ಶ್ರೀ ಶ್ರೀ ರವಿಶಂಕರ್ ಅವರು 2017 ರಲ್ಲಿ ಇದೇ ವಿವಾದವನ್ನು ಬಗೆಹರಿಸುವುದರಲ್ಲಿ ತೊಡಗಿದ್ದರು. ಆದರೆ ಆ ಬಾರಿ, ಈ ಜಗಳ ಬಗೆ ಹರಿಯಲಿಲ್ಲ. ಆದರೆ ಅವರು ಹಿಂದೆ ಹಲವಾರು ಬಣಗಳ, ಮಂದಿಯೊಡನೆ ಆಡಿದ ಮಾತುಕತೆಗಳು ಈಗ ನೆರವಾಗಬಹುದು.

ಶ್ರೀ ಕಲೀಫುಲ್ಲಾ ಅವರು ಚೆನ್ನೈನ ಗೋಪಾಲನ್ & ಕಂಪೆನಿಯಲ್ಲಿ ಅಡ್ವೋಕೇಟ್‌ರಾಗಿ, ನಂತರ ಮದರಾಸಿನ ಮೇಲು ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿ, ಆಮೇಲೆ ಜಮ್ಮು – ಕಾಶ್ಮೀರದ ಮೇಲ್ ನ್ಯಾಯಾಲಯಕ್ಕೆ ನ್ಯಾಯಾಧೀಶರಾಗಿ, ಆಮೇಲೆ ಎಲ್ಲದಕ್ಕಿಂತ ಮೇಲು ನ್ಯಾಯಾಲಯಕ್ಕೆ ನೇಮಕವಾಗಿ 2016 ರಲ್ಲಿ ಕೆಳಗಿಳಿದರು. BCCI ಗೆ ಕೋರ್ಟು ನೇಮಿಸಿದ ಕಮಿಟಿ ಆಫ್ ಅಡ್‌ಮಿನಿಸ್ಟ್ರೇಷನ್, ಇವರದ್ದೇ ಯೋಚನೆ ಎಂದು ವರದಿಯಾಗಿದೆ.

ಹಿಂದೂ ಮಹಾಸಭಾ, ನಿರ್ಮೋಹಿ ಅಖಾಡಾ ಬಾಬ್ರಿ ಮಸೀದಿ ಸಮಿತಿ, ತಮ್ಮತಮ್ಮದೇ ಮಧ್ಯಸ್ಥಿಕೆಗಾರರ ಹೆಸರನ್ನು ನೀಡಿದ್ದರೂ ಕೂಡ ಮೇಲ್–ಮೇಲ್ ನ್ಯಾಯಾಲಯ ತಮ್ಮದೇ ಆಯ್ಕೆಯನ್ನು ತೀರ್ಮಾನಿಸಿದ್ದಾರೆ. ಈ ಸಮಿತಿಯ ಕೆಲಸದ ಮೇಲೆ, ಮೇಲ್–ಮೇಲ್ ನ್ಯಾಯಾಲಯದ ಕಣ್ಣು ಇಟ್ಟಿರುತ್ತದೆ. ನಾಲ್ಕು ವಾರಗಳ ನಂತರ ಒಂದು ವರದಿ ಮೇಲ್–ಮೇಲ್ ನ್ಯಾಯಾಲಯಕ್ಕೆ ಸಲ್ಲಿಸಿ, ಕಟ್ಟಕಡೆಯ ಬಗೆಯ ಹರಿಸುವ ವರದಿಯನ್ನು 8 ವಾರದೊಳಗೆ ನೀಡಬೇಕೆಂದು ಅಣತಿಯಾಗಿದೆ. ಎಲ್ಲಾ ಮಧ್ಯಸ್ಥಿಕೆಯ ಮಾತುಕತೆಗಳು ಗುಟ್ಟಿನಲ್ಲಿಯೇ ನಡೆಯಬೇಕು, ಯಾವ ಪತ್ರಿಕೆ, ಚಾನೆಲ್‌ಗಳು ಇದನ್ನು ವರದಿ ಮಾಡ ಕೂಡದೆಂದು ಕಟ್ಟಾಣತಿಯಾಗಿದೆ.

ಆದರೆ ಮೇಲ್–ಮೇಲ್ ನ್ಯಾಯಾಲಯ ಈಗಾಗಲೇ "ಬಾಬರ್ ಏನು ಮಾಡಿದನೆಂಬುದು ತಾನು ಎಣಿಕೆಗೆ ತೆಗೆದುಕೊಳ್ಳುವುದಿಲ್ಲ" ಎಂದಿರುವುದರಿಂದ ಹಿಂದೆ ದೇವಾಲಯ ಇತ್ತೇ–ಇಲ್ಲವೇ ಎನ್ನುವುದು ಎಣಿಕೆಗೆ ಬಾರದು ಎಂದಾಗಿದೆ. ಇದನ್ನು ಹಿಂದೂ ಬಣಗಳು ಒಪ್ಪುತ್ತವೆಯೇ?

1982ರಲ್ಲಿ ಮೇಲ್ ಮೇಲ್ ನ್ಯಾಯಾಲಯ "ಮಸೀದಿ ಒಂದೇ ತಾವಿನಲ್ಲಿ ಇದ್ದೇ ಇರಬೇಕಾಗಿಲ್ಲ. ಇದರಲ್ಲಿ ಇಸ್ಲಾಂನ ಯಾವ ಕಟ್ಟುಪಾಡೂ ಇಲ್ಲ" ಎಂದಿರುವುದನ್ನು ಮುಸ್ಲಿಂ ಬಣಗಳು ಒಪ್ಪುತ್ತವೆಯೇ? ಎಲ್ಲಾ ಜಮೀನನ್ನು ಶ್ರೀರಾಮ ಲಲ್ಲಾನಿಗೇ ಬಿಟ್ಟು ಕೊಡುವುದಕ್ಕೆ ನಿರ್ಮೋಹಿ ಅಖಾಡಾ ಒಪ್ಪುತ್ತದೆಯೇ?

ಈ ಎಲ್ಲಾ ತೊಡಕುಗಳೂ, ಈ ಮಧ್ಯಸ್ಥಿಕೆಯನ್ನು ಇನ್ನೂ ಬಗ್ಗಡ ಮಾಡುತ್ತವೆ. ಈಗ ತಾನೇ ಓವೈಸಿಯವರು ಆಗಲೇ ಅಪಸ್ವರ ಹಾಡಿ ಶ್ರೀ ಶ್ರೀ ರವಿಶಂಕರ್ ಅವರು ಹಿಂದೂ ಬಣಕ್ಕೆ ಸೇರಿದವರು, ಆದ್ದರಿಂದ ಅವರಿಂದ ಯಾವ ನ್ಯಾಯವೂ ದೊರಕುವುದಿಲ್ಲ ಎಂದಿದ್ದಾರೆ.

ಹಿಂದೂ ಮಹಾಸಭಾ, ವಿಶ್ವ ಹಿಂದೂ ಪರಿಷತ್‌ಗಳು ಈ ಮಧ್ಯಸ್ಥಿಕೆಯಿಂದ ಯಾವ ಜಗಳವೂ ಬಗೆ ಹರಿಯುವುದಿಲ್ಲ ಎಂದಾಗಲೇ ಹಾಡಿದ್ದಾರೆ. ಎಲ್ಲಾ ಮಹಂತ ಸಭೆಗಳೂ ಆಗಲೇ ತಮ್ಮ"ಇಲ್ಲ" ವನ್ನು ಹಾಡಿದ್ದಾರೆ. ಹೀಗಿರುವಾಗ ಈ ಮಧ್ಯಸ್ಥಿಕೆಯ ಮೇಲ್–ಮೇಲು ನ್ಯಾಯಾಲಯ ಏಕೆ ತಾನೆ ಮುಂದುವರೆಸುತ್ತಿದೆ? ಮೊದಲು ನ್ಯಾ. ರಂಜನ್ ಗೋಗೈ ಅವರು ಇದು ಕೇವಲ ಆಸ್ತಿಯ ಪ್ರಕರಣವಾದುದರಿಂದ ಅದನ್ನು ಕಾನೂನಿನ ನೋಟದಿಂದ ಮಾತ್ರ ನೋಡುತ್ತೇವೆ, ಇನ್ನಾವ್ಯರ ನಂಬಿಕೆಯೂ ಇದರ ಮೇಲೆ ಒತ್ತಡ ಹಾಕುವುದಿಲ್ಲ, ಎಂದವರು ಈಗ ಇದು ಕೇವಲ ಆಸ್ತಿ ಪ್ರಕರಣವಾಗಿಲ್ಲದೆ, ಜನರ ಮನ – ನಂಬಿಕೆಯನ್ನೂ ಒಳಗೊಂಡಿರುವುದರಿಂದ ಎರಡೂ ಮತದವರು ತಾವೇ ಬಗೆ ಹರಿಸಿದರೆ ಒಳ್ಳೆಯದು ಎಂದಿದ್ದಾರೆ.

ಈ ಬಗೆಯ ಮೇಲ್–ಮೇಲು ನ್ಯಾಯಾಲಯದ ಹಿಂಜರಿಕೆ ಹೊಸದೇನೂ ಅಲ್ಲ. ಹಿಂದೂ ಕೂಡ ರಾಷ್ಟ್ರಪತಿಯವರೇ ಈ ಜಗಳವನ್ನು ಮೇಲ್–ಮೇಲು ನ್ಯಾಯಾಲಕ್ಕೆ ಕಳಿಸಿದಾಗ, ಅದನ್ನು ಯಾವ ಅಭಿಪ್ರಾಯವನ್ನೂ ಕೊಡದೆ, ರಾಷ್ಟ್ರಪತಿಯವರಿಗೆ ಹಿಂದಿರುಗಿಸಿದ್ದು ಸಾರ್ವಜನಿಕವಾಗಿ ತಿಳಿದಿದೆ. ಮೇಲ್–ಮೇಲು ನ್ಯಾಯಾಲಯದ ನ್ಯಾಯಾಧೀಶರಿಗೆ ದಿಗಿಲು: "ತಮ್ಮ ಮೇಲೆ ಜನರ ಸಿಟ್ಟು ತಿರುಗುವುದೇನೋ?"ಎಂದು. ಇದಕ್ಕಾಗಿಯೇ ನ್ಯಾ. ದೀಪಕ್

ಮಿಶ್ರಾರವರು, ಕೂಡಲೇ ಈ ರಾಮಜನ್ಮ ಭೂಮಿಯ ಜಗಳವನ್ನು ಪ್ರತಿದಿನ ಕೇಳಿ ಬಗೆಹರಿಸಬೇಕೆಂದು ಮುಂದಾದಾಗ, ಮೇಲ್ ಮೇಲು ನ್ಯಾಯಾಲಯದ ನಾಲ್ಕು ನ್ಯಾಯಾಧೀಶರು, ಪತ್ರಿಕಾ ಗೋಷ್ಠಿಯೊಂದನ್ನು ಕರೆದು, ಮುಖ್ಯ ನ್ಯಾಯಾಧೀಶರು, ಮುಖ್ಯ ಮೊಕದ್ದಮೆಗಳನ್ನು ತೀರ್ಮಾನ ಮಾಡಲು, ಹಿರಿಯ ನ್ಯಾಯಾಧೀಶರಿಗೆ ಅವಕಾಶ ನೀಡುತ್ತಿಲ್ಲವೆಂದು ಆಪಾದನೆ ಮಾಡಿದ್ದರು. ಇದಕ್ಕೆ ರಾಜಕೀಯ ಬಣಗಳ ಬೆಂಬಲವೂ ಇತ್ತೆಂಬುದು ಎಲ್ಲರಿಗೂ ತಿಳಿದ ವಿಷಯ. ಅಂತೆಯೇ ಕಾಂಗ್ರೆಸ್ ಪಕ್ಷ, ಮುಖ್ಯ ನ್ಯಾಯಾಧೀಶ ದೀಪಕ್ ಮಿಶ್ರಾರವರ ಮೇಲೆ ಆಪಾದನೆಯನ್ನು ರಾಜ್ಯ ಸಭೆಯಲ್ಲಿ ತಂದಿದ್ದುದು ಗೊತ್ತಿದೆ.

ಈ ದೀಪಕ್ ಮಿಶ್ರಾರವರು ತೆರಳಿದ ನಂತರ ರಂಜನ್ ಗೊಗ್ಯೆ ಅವರು, ಮೊಕದ್ದಮೆಯನ್ನು ಕೇಳುತ್ತಿದ್ದ, ನ್ಯಾಯಾಧೀಶರನ್ನೇ ಬದಲಿಸಿದ್ದುದು ಗೊತ್ತಿರುವ ವಿಷಯ. ಹೀಗಾಗಿ ಮೇಲ್-ಮೇಲು ನ್ಯಾಯಾಲಯದ ನಡೆವಳಿಕೆಯೂ ಕೂಡ ಸಂದಿಗ್ಧವಾಗಿ ಉಳಿದಿದೆ.


ಈಗ ಎರಡು ತಿಂಗಳಿನಲ್ಲಿ ಹೊಸ ಸರ್ಕಾರ ಬರುವವರೆಗೂ ಯಾವ ನಿರ್ಧಾರವನ್ನೂ ಮೇಲ್ ಮೇಲು ನ್ಯಾಯಾಲಯ ತೆಗೆದುಕೊಳ್ಳುವುದಿಲ್ಲವೆಂಬುದನ್ನು ಅತಿ ದಡ್ಡರೂ ತಿಳಿದಿರುವ ವಿಷಯ.

ಹೀಗಾಗಿ ಈ ಮಧ್ಯಸ್ಥಿಕೆಯ ನಾಟಕ ನಡೆದ ಮೇಲೂ ಈ ಜಗಳ ಬಗೆ ಹರಿಯುವಂತೆ ಕಾಣುವುದಿಲ್ಲ. ಆಗಸ್ಟ್ ತಿಂಗಳಿನಲ್ಲಿ ರಂಜನ್ ಗೋಗ್ಯೆ ಅವರು ಪಟ್ಟ ಬಿಟು ತೆರೆಳಿದಾಗ, ಹೊಸ ಮುಖ್ಯ ನ್ಯಾಯಾಧೀಶರು, ಇನ್ನೊಂದು ವರ್ಷ ಮುಂದೆ ಸರಿಸುತ್ತಾರೆ. ಅವರಿಗೂ ಕೇವಲ ಒಂದೇ ವರ್ಷ ಹೊತ್ತು ಇರುವುದರಿಂದ, ಈ ಜಗಳ ಇಂತೆಯೇ ಪ್ರತಿವರ್ಷವೂ ಮುಂದುವರೆಯುವುದರಲ್ಲಿ ಯಾವ ಸಂಶಯವೂ ಇಲ್ಲ.

ನ್ಯಾಯಾಲಯಗಳಿಂದ ನ್ಯಾಯ ದೊರೆಯುತ್ತದೆ ಎಂಬುದನ್ನು ನಂಬಿದವರು ದಡ್ಡರು. ಕೋಟಿಗಟ್ಟಲೆ ಹಣವಿದ್ದವರು, ನೂರು ವರ್ಷ ಹೊತ್ತಿರುವವರು ಮಾತ್ರ ಕೋರ್ಟು ಕಟ್ಟಲೆ ಹತ್ತಬಹುದು ಅಷ್ಟೇ.

*****

## ಸಂತಾಪ – ಬಿ. ಎ. ಸನದಿ



3 ದಶಕಗಳ ಕಾಲ ಮುಂಬೈ ಕನ್ನಡ ಸಾಹಿತ್ಯ, ಸಾಂಸ್ಕೃತಿಕ ವಲಯದೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದ ಬಿ. ಎ. ಸನದಿಯವರು ಮುಂಬೈ ಕನ್ನಡಿಗರ ಅಚ್ಚುಮೆಚ್ಚಿನ ಕವಿ ಹಾಗೂ ಕನ್ನಡ ಚಳುವಳಿಯ ಒಂದು ಮುಖ್ಯಕೊಂಡಿಯಾಗಿದ್ದರು. ಶ್ರೀ. ಬಿ. ಎ. ಸನದಿಯವರು ಮಾರ್ಚ್ 31 ರವಿವಾರದಂದು ಮುಂಜಾನೆ ತಮ್ಮ ಊರು ಕುಮಟಾದಲ್ಲಿ, ಹೃದಯಾಘಾತದಿಂದ ಕೊನೆಯುಸಿರೆಳೆದರೆಂದು ತಿಳಿದು ಮುಂಬೈ ಕನ್ನಡಿಗರೆಲ್ಲರಿಗೂ ಅತಿಯಾದ ನೋವಾಗಿದೆ. ಮುಂಬೈಯ ಹೆಚ್ಚಿನ ಎಲ್ಲ ಸಂಘ ಸಂಸ್ಥೆಗಳೊಂದಿಗೆ ಸಂಪರ್ಕ ಹೊಂದಿದ್ದ ಶ್ರೀ ಸನದಿಯವರು ಹೆಚ್ಚಾಗಿ ತಮ್ಮನ್ನು ಮುಂಬೈಯ ಮಾಹಿಮ್ ಬಡಾವಣೆಯಲ್ಲಿರುವ ಕರ್ನಾಟಕ ಸಂಘದೊಂದಿಗೆ ಗುರುತಿಸಿಕೊಂಡಿದ್ದರು ಹಾಗೂ ಕೆಲಕಾಲ ಅದರ ಉಪಾಧ್ಯಕ್ಷ ಪದವಿಯನ್ನಲಂಕರಿಸಿದ್ದರು. ಸದಾ ತಮ್ಮ ನಗುಮೊಗದ, ಮೃದುನುಡಿಯ ಸುಸಂಸ್ಕೃತ ನಡಾವಳಿಯಿಂದ ಮುಂಬೈ ಕನ್ನಡಿಗರ ಪ್ರೀತಿಪಾತ್ರರಾಗಿದ್ದರು. ಆಕಾಶವಾಣಿಯ ಅಧಿಕಾರಿಗಳಾಗಿದ್ದಾಗ ಆಕಾಶವಾಣಿಯಲ್ಲಿ ಕನ್ನಡ ಪ್ರಚಾರಕ್ಕೆ ಸಾಕಷ್ಟು ಪ್ರೋತ್ಸಾಹ ನೀಡಿದ್ದರು. ಮುಂಬೈಯ ಕನ್ನಡ ಕವಿ ಗೋಷ್ಠಿಗಳಲ್ಲಿ, ಸಾಹಿತ್ಯ ಸಂವಾದಗಳಲ್ಲಿ ಪಾಲ್ಗೊಂಡು ಎಲ್ಲರ ಮೆಚ್ಚುಗೆಗೆ, ಪ್ರೀತಿಗೆ ಪಾತ್ರರಾಗಿದ್ದರು. ಕೆಲಕಾಲ ವಡಾಲಾದಲ್ಲಿರುವ ಮುಂಬೈಯ ಅತಿ ಹಳೆಯ ಕನ್ನಡ ವಿದ್ಯಾಸಂಸ್ಥೆ. ರಾಷ್ಟ್ರೀಯಕನ್ನಡ ಶಿಕ್ಷಣ ಸಂಸ್ಥೆ (National Kannada Education Society) ಯ ಆಡಳಿತ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿದರು. ಕಿರು ವಯಸ್ಸಿನಿಂದಲೇ ಕವಿತೆಗಳನ್ನು ಬರೆಯುತ್ತಾ ಕರ್ನಾಟಕದ ಬೇರೆ ಬೇರೆ ಊರುಗಳಲ್ಲಿ ಕೆಲಸ ಮಾಡಿದ್ದರೂ, ಅವರ 3 ದಶಕಗಳ ಮುಂಬೈ ವಾಸ ಅವರನ್ನು ಮುಂಬೈ ಕವಿ ಎಂದೇ ಗುರುತಿಸುತ್ತಿದ್ದುದು ಮುಂಬೈ ಕನ್ನಡ ಸಾಹಿತ್ಯ ವಲಯದೊಡನೆ ಅವರಿಗಿದ್ದ ಸಂಬಂಧವನ್ನು ಎತ್ತಿ ಹೇಳುತ್ತದೆ. ಅವರ ಅಗಲಿಕೆ ಕನ್ನಡ ಸಾಹಿತ್ಯ ವಲಯಕ್ಕೆ ಹಾಗೂ ಮುಂಬೈ ಕನ್ನಡಿಗರಿಗೆ ತುಂಬಲಾರದ ನೋವನ್ನು ತಂದಿದೆ. ಅವರ ಕುಟುಂಬಕ್ಕೆ ದೇವರು ಅವರ ಅಗಲಿಕೆಯಿಂದಾದ ನೋವನ್ನು ತಡೆದುಕೊಳ್ಳುವ ಶಕ್ತಿಯನ್ನು ನೀಡಲೆಂದು ಪ್ರಾರ್ಥಿಸುತ್ತೇವೆ.

# ಭೂತ, ಪ್ರೇತ, ದೈವ, ಆತ್ಮ

**– ಹಲವಾರು ವಿಜ್ಞಾನಿಗಳ ಹುಡುಕಾಟ**

ಹಿಂದಿನ ಎಲ್ಲಾ ನಾಗರೀಕತೆಗಳು, ಕಾಡಿನ ಬುಡಕಟ್ಟುಗಳು, ಇಂದಿನ ಹಲವಾರು ಮಂದಿ, ಭೂತ, ಪ್ರೇತ, ದೈವಗಳನ್ನು ನಂಬುತ್ತಾರೆ. "ಭೂತ"ವೆಂದರೆ ಸಂಸ್ಕೃತದಲ್ಲಿ "ಹಿಂದಿದ್ದದ್ದು", ಎಂದೇ ತಿಳಿವು. "ಪ್ರೇತ"ವೆಂದರೆ ಸಾವಿನ ನಂತರ ಮೈಯನ್ನು ಕಳೆದುಕೊಂಡ "ಆತ್ಮ" ಬೇರೆ"ಗತಿ" ಸಿಕ್ಕದೆ ಪರೆದಾಡುತ್ತಿರುವು ಎಂದು ತಿಳಿವು. ಇನ್ನು "ದೈವ"ಗಳು ಉಗ್ರ ಶಕ್ತಿಗಳಾಗಿ ಸದಾ ಎಲ್ಲರನ್ನೂ ಕಾಡುತ್ತಿರುವ ಪ್ರೇತಗಳೆಂದೇ ತಿಳಿವು.

ಹೀಗಾಗಿ ಇವೆಲ್ಲದರ ಹಿಂದೆ ಮೈಯಲ್ಲಿ, ಬೇರೆ ಒಂದು ಶಕ್ತಿ ನೆಲೆಸಿದ್ದು, ಮೈಗೆ ಸಾವು ಸಂದ ನಂತರ, ಅದನ್ನು ತೊರೆದು ಬೇರೆ ಮೈಗಳನ್ನು ಸೇರುತ್ತದೆ. ಅದಕ್ಕೆ"ಆತ್ಮ"ಎಂದು ವೇದಾಂತಿಗಳು ನಂಬಿರುತ್ತಾರೆ. ಬೇರೆ ಮೈ ಆ ಆತ್ಮಕ್ಕೆ ಸಿಗದೆ ಹೋದಾಗ ಅದು ಭೂತ, ಪ್ರೇತವಾಗಿ ಅಲೆದಾಡುತ್ತಿರುತ್ತದೆ ಎಂದು ಈ ಮಂದಿಯ ನಂಬಿಕೆ.

2013ರಲ್ಲಿ ಅಮೆರಿಕಾದಲ್ಲಿ ನಡೆದ ಹ್ಯಾರಿಸ್ ಪೋಲ್‌ನಲ್ಲಿ, ನೂರರಲ್ಲಿ 48 ಮಂದಿ ಅಮೇರಿಕನ್ನರು ಈ ಭೂತ–ಪ್ರೇತಗಳನ್ನು ನಂಬುತ್ತಾರೆ ಎಂದು ಕಂಡು ಬಂದಿದೆ. ಕ್ರೈಸ್ತಮತ, ಇಸ್ಲಾಂಮತ, ಹಿಂದೂ ಮತಗಳಲ್ಲಿ ಈ ನಂಬಿಕೆ ಬಲವಾಗಿದೆ. ಕ್ರೈಸ್ತ–ಇಸ್ಲಾಂ ಗಳಲ್ಲಿ ಪುನರ್ಜನ್ಮವಿಲ್ಲದಿದ್ದರೂ ಕೂಡ, ಕಡೆಯ ತೀರ್ಮಾನ ದಿನಕ್ಕಾಗಿ ಕಾಯುತ್ತಿರುವ ಕೆಲವು ಆತ್ಮಗಳು "ಕಾಂತಿ"ಇಲ್ಲದೆ ನೆಲದಡಿಯಿಂದ ಮತ್ತೆ ಮೇಲೆದ್ದು ಕಾಣಿಸಿಕೊಳ್ಳುತ್ತದೆ ಎಂಬ ನಂಬಿಕೆ ಇದೆ. ಅದರಲ್ಲೂ, ಕೊಲೆಯಾದ ಹಿಂಸೆಗಳಿಗೆ ಒಳಗಾದ ಆತ್ಮಗಳು ಈ ಅಶಾಂತಿಗೆ ಒಳಗಾಗುತ್ತದೆ ಎಂಬ ನಂಬಿಕೆ ಇದೆ. ಹಿಂದೂ ಧರ್ಮಗಳಲ್ಲಿ ಪುನರ್ಜನ್ಮವಿದ್ದರೂ ಕೂಡ, ಮತ್ತೊಮ್ಮೆ ಜನ್ಮ ತಳೆಯುವ ಮುನ್ನ ಕೆಲವು ಆತ್ಮಗಳು ಪರದಾಡುತ್ತಾ ಇದ್ದು, ಅವುಗಳಿಗೆ ಶಾಂತಿ ಮಾಡಿ ಸದ್ಗತಿಯನ್ನು ಒದಗಿಸುವ ಬಗೆಗಳೂ ಇವೆ. ಆತ್ಮವನ್ನೇ ನಂಬದ ಬುದ್ಧನ ನಂತರದ ಬೌದ್ಧ ಧರ್ಮಕೂಡ ಈ ನಂಬಿಕೆಗಳನ್ನು ಹೊಂದಿದೆ.

ಎಷ್ಟೋ ಮಾಟಗಾರ – ಮಾಟಗಾತಿಯರು, ತಮಗೆ ಈ ಭೂತ–ಪ್ರೇತಗಳೊಡನೆ ಮಾತನಾಡುವ ಶಕ್ತಿ ಇದೆ ಎಂದು ಹೇಳಿಕೊಂಡು, ಸತ್ತವರ ಬಳಗವರ ನಂಬಿಕೆಯನ್ನೇ ಆಧಾರವಾಗಿಟ್ಟುಕೊಂಡು ವ್ಯಾಪಾರವನ್ನು ಸಾಗಿಸುತ್ತಿದ್ದಾರೆ. ಮಂತ್ರ ತಂತ್ರಗಳು ಎಲ್ಲಾ ಬುಡಕಟ್ಟುಗಳಲ್ಲೂ ಇವೆ.

ಆದರೆ ಇಂತಹ ನಂಬಿಕೆಗೆ ಯಾವುದಾದರೂ ವಿಜ್ಞಾನದ ಆಧಾರವಿದೆಯೇ? ವಿಜ್ಞಾನಿಗಳು ಈ ಬಗ್ಗೆ ಯಾವುದಾದರೂ ಸಾಕ್ಷ್ಯವನ್ನು ಹುಡುಕಿದ್ದಾರೆಯೇ? ಇಂತಹ ವೈಜ್ಞಾನಿಕ ಹುಡುಕಾಟಕ್ಕೆ ಇರುವ ಒಂದು ತೊಡಕೆಂದರೆ, ಎಲ್ಲಾ ಬಗೆಯ ಈ ಭೂತಗಳೇ ಕಾರಣವೆನ್ನುವುದು ಕಂಡುಬರುತ್ತದೆ.

"ಏನೂ ಕಾರಣವಿಲ್ಲದೆ, ಬಾಗಿಲು ತಾನೇ ಮುಚ್ಚಿಕೊಳ್ಳುವುದು", "ತಣ್ಣ ಗಾಳಿ ಕಿಟಕಿಯಿಂದ ಬೀಸಿ ಬರುವುದು", "ಯಾವುದೋ ಬೆಳಕು ಕಂಡುಬರುವುದು ಇಲ್ಲವೇ ಕತ್ತಲಿನಲ್ಲಿ ತೇಲಿ ಹೋಗುವುದು", "ಸತ್ತ ಹಿರಿಯರು ಕಣ್ಣ ಮುಂದೆ ಬರುವುದು".

ಈ ಎಲ್ಲಾ ಅನಿಸಿಕೆಗಳಿಗೂ, ಭೂತ–ಪ್ರೇತವೇ ಕಾರಣ ಎನ್ನುವದರಿಂದ, ಭಾರತಕ್ಕೆ ಯಾವ ಸಾಕ್ಷ್ಯವನ್ನು ಒದಗಿಸಬೇಕೋ ಅನ್ನುವುದು ಗೊಂದಲಕ್ಕೆ ಈಡಾಗುತ್ತದೆ. ವಿಜ್ಞಾನಿಗಳಾದ ಡೆನಿಸ್ ಮತ್ತು ಮಿಶೆಲ್ ವಾಕುಲ್ ಅವರುಗಳು ಭೂತಗಳ ಅನುಭವವನ್ನು ಪಡೆದ ಸುಮಾರು 500 ಮಂದಿಯನ್ನು ವಿಚಾರಿಸಿದ ಆಗ ನೋಡಿದವರೆಲ್ಲಾರಿಗೆ ತಾವೇನು ನೋಡಿದೆವೆಯೆಂದು ಸರಿಯಾದ ಅನಿಸಿಕೆಗಳೇ ಇರಲಿಲ್ಲ. ಅಂತೆಯೇ ಭೂತಗಳು ಹೇಗಿದ್ದವೆಂದು ವಿವರಿಸುವುದರಲ್ಲೂ ಅವರುಗಳು ಶಕ್ತರಾಗಿರಲಿಲ್ಲ. ಆದ್ದರಿಂದ ಅವರುಗಳು, ತಾವು ಯಾವುದೋ ಅಸ್ವಾಭಾವಿಕ ಸಂಗತಿಯನ್ನು ಅನುಭವಿಸಿದ್ದೇವೆ ಎಂದು ಹೇಳಿದರು.

ವೈಯಕ್ತಿಕ ಅನುಭವಗಳು ಬೇರೆ, ಆದರೆ ವೈಜ್ಞಾನಿಕ ಶೋಧನೆಯೇ ಬೇರೆ. ತೊಡಕೆಂದರೆ ಹಿಂದೆ ಹೇಳಿದ ಹಾಗೆ, "ಭೂತ"ವೆಂದರೆ ಏನು ಅನ್ನುವುದರ ಬಗ್ಗೆಯೇ ಒಮ್ಮತವಿಲ್ಲ. ಕೆಲವರು, ಸಾವಿನ ನಂತರ, ಕೆಲವು ಆತ್ಮಗಳು ದಾಟಿ ಪರಲೋಕವನ್ನು ಸೇರದೇ ಇರುವುದರಿಂದ, ಇಲ್ಲಿಯೇ ಅಲೆದಾಡುತ್ತವೆ ಎಂದರೆ, ಇನ್ನು ಕೆಲವರು, ಈ "ಭೂತಗಳೂ" ಕೇವಲ ನಮ್ಮ ಮನಸ್ಸಿನ 'ಅನಿಸಿಕೆಗಳೇ ಈ ಬಗೆಯಾಗಿ ಪ್ರಕಟವಾಗುತ್ತವೆ, ಆದ್ದರಿಂದ ದಿಟವಾಗಿಯೂ ಏನೂ ಇಲ್ಲ ಎನ್ನುತ್ತಾರೆ. ಇನ್ನು ಕೆಲವರು, ಪಂಜುರ್ಲಿ, ಕೊಳ್ಳಿದೈವ, ತುಂಟತನದ ದೆವ್ವಗಳನ್ನೂ ಸೃಷ್ಟಿ ಮಾಡಿದ್ದಾರೆ. ಶಬರಿಮಲೆಯಲ್ಲಿ ಸಂಕ್ರಾಂತಿಯಂದು ಬೆಟ್ಟದ ಮೇಲೆ ತೇಲಿ ಹೋಗುವ ಕೊಳ್ಳಿಯೂ ಇದೆ. ನಮ್ಮಲ್ಲಿ ಕರಾವಳಿಯಲ್ಲಿ, ಮಲೆಯಾಳದಲ್ಲಿ ಇರುವಷ್ಟು ಭೂತ–ಪ್ರೇತಗಳು ನಾಡಿನಲ್ಲಿಯೇ ಇಲ್ಲ. ಇಲ್ಲಿಯೇ ಮಾಂತ್ರಿಕರೂ ಹೆಚ್ಚಾಗಿದ್ದಾರೆ. ಎಲ್ಲಿ ವ್ಯಾಪಾರವೂ ಅಲ್ಲಿಯೇ ತಾನೇ ವ್ಯಾಪಾರಿ.

ಭೂತಗಳಲ್ಲಿ ನಂಬಿಕೆ ಇರುವವರಿಗೆ ತಾವು ಭೂತಗಳೆಂದು ಹೇಳುವುದು, ಶಕ್ತಿಯೇ, ವಸ್ತುವೋ, ಏನೆಂದು ಹೇಳಲು ತಿಳಿಯುವುದಿಲ್ಲ. ಅವುಗಳು ವಸ್ತುವಾಗಿದ್ದರೆ, ಬಾಗಿಲು–ಗೋಡೆಗಳನ್ನು ತೂರಿ ಹೋಗುವುದೆಂತು? ಈ ಭೂತಗಳು ಪಂಚೆಯೇ, ಸೀರೆಯೇ ತೊಟ್ಟಿರುವುದೇಕೆ? ಇನ್ನೆಷ್ಟೋ ಬಾರಿ, ಈ ಭೂತಗಳೂ ರಥಗಳನ್ನು ಏರಿ ಬರುವುದೆಂತು?

ಭೂತಗಳು, ಕೊಲೆಯಾದವರ, ಪರೆದಾಡುತ್ತಿರುವ ಆತ್ಮಗಳಾಗಿದ್ದರೆ, ಅವರೊಡನೆ ಮಾತನಾಡಲು ಬಲ್ಲ ಈ ಮಾಂತ್ರಿಕರು ಅವರನ್ನು ಕೊಂದದ್ದು ಯಾರು ಎಂದು, ಏಕೆ ಗುರುತಿಸುವುದಿಲ್ಲ? ಈ ಎಲ್ಲಾ ಮಾಂತ್ರಿಕರೂ ಕೂಡ ತಾವು ಮಾಡುತ್ತಿರುವುದೆಲ್ಲಾ ವೈಜ್ಞಾನಿಕವೇ ಎಂದು ಸಾರುತ್ತಾರೆ. ಕೆಲವರಂತೂ ಆಧುನಿಕ ಸಾಧನೆಗಳನ್ನೇ ಬಳಸುತ್ತಾರೆ. ಗೈಗರ್ ಕೌಂಟರ್, ಎಲೆಕ್ಟ್ರೋ –ಮ್ಯಾಗ್ನೆಟಿಕ್ ಡಿಟೆಕ್ಟರ್ಸ್, ಅಯಾನ್ ಡಿಟೆಕ್ಟರ್ಸ್, ಇನ್‌ಫ್ರಾರೆಡ್ ಕ್ಯಾಮೆರಾಗಳು,

ಮೈಕ್ರೋಫೋನ್‌ಗಳು ಎಲ್ಲವನ್ನೂ ಸಾಧನವಾಗಿ ಬಳಸುತ್ತಾರೆ. ಆದರೆ ಈವರೆಗೆ ಈ ಯಾವ ಸಾಧನಗಳೂ ಕೂಡ ಭೂತಗಳು ಇವೆ ಎಂಬುದರ ಬಗ್ಗೆ ಯಾವ ಸಾಕ್ಷ್ಯವನ್ನೂ ಒದಗಿಸಿಲ್ಲ.

ಇನ್ನು ಕೆಲವರು, ನಮಗೆ ಸರಿಯಾದ ಸಾಧನಗಳು ಇದುವರೆಗೆ ಒದಗಿ ಬಂದಿಲ್ಲ. ಆದ್ದರಿಂದ ಸರಿಯಾದ ಸಾಕ್ಷ್ಯ ಈವರೆಗೆ ದೊರಕಿಲ್ಲ ಎಂದು ವಾದಿಸುತ್ತಾರೆ. ಇರಬಹುದು, ಆದರೆ ಮಾನವನ ಇಂದ್ರಿಯಗಳಿಗೆ ಗೋಚರವಾಗುವ ಈ ಭೂತಗಳು ಈ ಇಂದ್ರಿಯ–ಇಂದ್ರಿಯಾತೀತ ಸಾಧನಗಳಿಗೂ ಕೂಡ ಏಕೆ ಸಿಕ್ಕಿ ಬಂದಿಲ್ವ?

ಈಗ ಬೆಳೆದು ಬಂದಿರುವ "Ghost App"ಗಳು ಸೋಷಿಯಲ್ ಮಿಡಿಯಾದಲ್ಲಿ ಮನರಂಜನೆಯನ್ನು ಒದಗಿಸುತ್ತಿದ್ದಾವೆ.

ಇನ್ನು ಕೆಲವರು, ಅಲ್‌ಬರ್ಟ್ ಐನ್‌ಸ್ಟೈನ್ "ಶಕ್ತಿಗೆ ಹುಟ್ಟಿಲ್ಲ, ಅಳಿವಿಲ್ಲ"ಎಂದು, ಒಂದು ವೈಜ್ಞಾನಿಕ ನೆಲೆಯನ್ನು ಹಾಕಿ, "ಮೈಯಿನ ಶಕ್ತಿ ಅಥವಾ ಚೈತನ್ಯ ನಶಿಸದೇ, ಮತ್ತೆ ತೋರಿ ಬರುತ್ತಿದೆ" ಎಂದಿದ್ದಾರೆ, ಎನ್ನುತ್ತಾರೆ. ಶಕ್ತಿ ಅಥವಾ ಚೈತನ್ಯ ತನ್ನ ರೂಪವನ್ನು ಕ್ಷಣ–ಕ್ಷಣದಲ್ಲಿ ಮಾರ್ಪಾಡು ಮಾಡುವುದರಿಂದ, ಈ ಚೈತನ್ಯ ಮತ್ತೆ ಹೀಗೆ ಹಿಂದಿನ ದೇಹದ ರೂಪದಲ್ಲಿಯೇ ತೋರಿಬರುತ್ತಿದೆ? ಎನ್ನುವುದಕ್ಕೆ ಉತ್ತರವಿಲ್ಲ.

ಮೈ, ಸಾವಿನ ನಂತರ, ಕ್ರಿಮಿ–ಕೀಟಗಳಿಂದ ತಿಂದು, ಕೊಳೆತು, ನಶಿಸುತ್ತಾ, ಅದರ ಚೈತನ್ಯ, ಈ ಕ್ರಿಮಿ–ಕೀಟಗಳು ಹೆಚ್ಚು ಬೆಳೆಯುವುದು, ಇತರ ಗಿಡ–ಮರ ಪಕ್ಷಿಗಳ ರೂಪದಲ್ಲಿ ತೋರುವುದರಿಂದ, ಆ ಮೈ ಮತ್ತೆ ಅದೇ ರೂಪದಲ್ಲಿ ತೋರಿ ಬರುವುದೇ ಇಲ್ಲ.

ಸತ್ತ ನಂತರ"ಮೈ –ಶಕ್ತಿ" ಅದೇ ರೂಪದಲ್ಲಿ ಇರುವುದು ಸಾಧ್ಯವೇ ಇಲ್ಲ. ಅದು ಗಾಳಿಯಾಗಿ, ನೀರಾಗಿ"ಪಂಚ–ಭೂತ"ಗಳಲ್ಲಿ ಸೇರುವುದೇ ಹೊರತು "ಭೂತ" ರೂಪವಾಗಿ ತೋರಿ ಬರುವುದೇ ಇಲ್ಲ.

ಮೈ ಮತ್ತು ಆತ್ಮ ಬೇರೆಯೇ?

ಮೈ ಒಂದು ಪಾತ್ರೆ ಅದರಲ್ಲಿ ಬೇರೊಂದು ಮೈ ಒಂದು ಪಾತ್ರೆ ಅದರಲ್ಲಿ ಬೇರೊಂದು ಶಕ್ತಿ ತುಂಬಿದ್ದು, ಆ ಶಕ್ತಿ ಬೇರೆಡೆಗೆ ಹೋದಾಗ ಈ ಮೈಗೆ ಶಕ್ತಿ ಕಳೆದು ಹೋಗುತ್ತದೆಯೇ?

*(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುತ್ತಿದೆ)*

# 'ಅವನಿ'ಯ ಕಥೆ-ವ್ಯಥೆ



ಕಳೆದ ವರ್ಷ (2018) ನವೆಂಬರ್ ತಿಂಗಳಲ್ಲಿ 'ಅವನಿ' ಹೆಸರಿನ ಒಂದು ಹುಲಿ'ಯ ಕಥೆ–ವ್ಯಥೆ, ದುರಂತದಲ್ಲಿ ಕೊನೆಗೊಂಡಿತ್ತು ಎಂಬ ಸಮಾಚಾರ, ದಿನ ಪತ್ರಿಕೆಯೊಂದರಲ್ಲಿ ಓದಿ ಕಣ್ಣೀರಟ್ಟೆನು. 'ಕಣ್ಣೀರು' ಇಂಗುವ ಮೊದಲೇ ಮತ್ತೆ–ಮತ್ತೆ ಹುಲಿ (ಇತ್ತೀಚೆಗೆ)ಯೊಂದನ್ನು ಹೊಡೆದು ಕೊಂದು ಬಿಡಬೇಕೆಂದು, ಅದು 'ನರಹಂತಕ ಹುಲಿ' ಎಂದು ಹೆಸರಿಸಿ, ಅದರ ಬೆನ್ನು ಹಿಂದೆ ಬಿದ್ದಿದ್ದರು ಹಲವು ನಿಷ್ಕರುಣಿಗಳು. ಗಾಯಗೊಂಡ ಹುಲಿಯನ್ನು ಮೈಸೂರು ಮೃಗಾಲಯದಲ್ಲಿ ಚಿಕಿತ್ಸೆ ನೀಡುತ್ತಿದ್ದಾರೆ ಎಂಬ ಇಂದಿನ (ಫೆಬ್ರವರಿ 2ನೆಯ ದಿನಾಂಕ) ಪತ್ರಿಕೆಯಲ್ಲಿ ಓದಿ ಸ್ವಲ್ಪ ಸಮಾಧಾನವಾಯಿತು. 'ಹುಲಿಗಳು', ಚಿರತೆಗಳು; ಕಾಡಿನಿಂದ, ನಾಡಿಗೆ, ನುಗಿ ಬರುತ್ತಲೇ ಇರುವ 'ಗಜ ಪಡೆ'; ಕಾರಣವೇನಾಗಿರಬಹುದು? ಯೋಚಿಸಲೇಬೇಕಾಗಿದೆ. ಇವುಗಳ ಆವಾಸದ ಪರಿಸರ ಸತತವಾಗಿ ಕಿರಿದಾಗಿತ್ತಲೇ ಬರುತ್ತಿರುವುದು ಅತ್ಯಂತ ಖೇದಕರ ಸಂಗತಿ ! 'ಕಾಡುಗಳು' ಬೆಂಗಾಡು ಆಗುತ್ತಿರುವುದನ್ನು ಕಂಡೂ ಕಾಣದಂತೆ 'ಮಾನವ' ಅತಿಕ್ರಮಣ ಮುಂದುವರಿಸುತ್ತಲೇ ಇದ್ದಾನೆ. ಪಾಪ ! ಕಾಡು ಪ್ರಾಣಿಗಳ ಅರಣ್ಯ ರೋಧನ ಕೇಳುವವರು ಯಾರು? 'ಕಾಡನ್ನು ಬೆಳೆಸಿರಿ, ಕಾಡನ್ನು ಉಳಿಸಿರಿ, ಹುಲಿ–ಜಿಂಕೆಯಲ್ಲಿ ಭೇದವನ್ನೆಣಿಸದೆ ಪೊರೆಯುವ ಕಾಡುಗಳೇ ಸಮತೋಲನದ ಬೀಡುಗಳು" ಎಂಬುದಾಗಿ ಕವಿ ಬಿ. ಆರ್. ಲಕ್ಷ್ಮಣ ರಾವ್ ಹಾಡಿದರು. ಆದರೆ ಹಾಡು ಎಷ್ಟು ಮಂದಿಯ 'ಕಿವಿ' ಮುಟ್ಟಿದೆ? ಗೊತ್ತಿಲ್ಲ "ರಾಷ್ಟ್ರೀಯ ವ್ಯಾಘ್ರ ಸಂರಕ್ಷಣ ಪ್ರಾಧಿಕಾರದ ನಿಯಮಾವಳಿ'ಗಳನ್ನು ಗಾಳಿಗೆ ತೂರಿ ಹಾಕಿರುವುದು" ಸರಿ ಎನಿಸುವುದಿಲ್ಲ. 'ಅವನಿ'ಯ ಮರಿಗಳಿಗೆ ಹತ್ತು ತಿಂಗಳು. ಹುಟ್ಟಿದಾಗ, ಪಾಪ !, ಅವುಗಳ ಕಣ್ಣು ರೆಪ್ಪೆ ಮುಚ್ಚಿಕೊಂಡಿರುತ್ತವೆ. ತಾಯಿಯನ್ನೇ ಅವಲಂಭಿಸಿರುವ ಆ ಮರಿಗಳನ್ನು ಅನಾಥವಾಗಿ ಮಾಡಿದುದು ಸರಿಯೇ? ಈ ಸಂದರ್ಭದಲ್ಲಿ ಒಂದು ಅತ್ಯಂತ ಮುಖ್ಯವಾದ ಸಂಗತಿ ಎಂದರೆ (ಪ್ರಾಯಶಃ ಬಹಳ ಮಂದಿಗೆ ತಿಳಿದಿಲ್ಲ ಎಂದೇ ಸಂಗತಿ ಭಾವಿಸುತ್ತೇನೆ) ಹುಲಿಯ ಸಂತತಿ ಕಡಿಮೆ ಆದರೆ, ನಮಗೆ ಮುಂದೆ ಕುಡಿಯುವ ನೀರಿಗೂ ಕಷ್ಟ ಆಗಬಹುದು! ಯೋಚಿಸಿ ನೋಡಿ ! ಪ್ರಕೃತಿ'ಯಲ್ಲಿ ಎಲ್ಲಾ ಜೀವಿಗಳ ಬದುಕು ಒಂದು ಸಂಕೋಲೆಯಿಂದ ಬಿಗಿದುಕೊಂಡಿದೆ. 'ಕೊಂಡಿ' ಕಳಚಿದಂತೆ ನೋಡಿಕೊಳ್ಳುವ ಜವಾಬ್ದಾರಿ ಮಾನವನ ಹೆಗಲ ಮೇಲಿದೆ.

ಲೇಖನದೊಂದಿಗೆ ಮರಿ, ಕಣ್ಣಲ್ಲಿ ಭಯ, ಕಾತುರ ದೃಷ್ಟಿ, ಅಮ್ಮನನ್ನು ಕಟ್ಟಿ ಹಿಡಿದಿರುವ ಭಾವಚಿತ್ರವನ್ನು ಹಾಕಿದ್ದೇನೆ. ಈ ಮುದ್ದಾದ ಬೊಂಬೆ, ನೋಡಿದ ಕೂಡಲೇ ಇಷ್ಟವಾಯಿತು. ಕೂಡಲೇ, ಕೊಂಡು ತಂದೆನು, ಸಿಂಗಾಪೂರ್‌ನಿಂದ 30 ವರ್ಷಗಳ ಹಿಂದೇ ಇಂದಿಗೂ ಜೋಪಾನ ಮಾಡಿರಿಸಿದ್ದೇನೆ. ನಮ್ಮ ಮನೆಯಲ್ಲಿರುವ 'ಉಯ್ಯಾಲೆ'ಯಲ್ಲಿ ಅಮ್ಮ–ಮಗು, ಇಬ್ಬರೂ ಕುಳಿತಿದ್ದಾರೆ, ಸದ್ದಿಲ್ಲದೆ ! ಪ್ರತಿದಿನ ಎತ್ತಿ ಮುದ್ದಾಡುತ್ತೇನೆ. ಭಾವನಾ ಜೀವಿ ಎಂದಾದರೂ ಭಾವಿಸಿ, ಪರವಾಗಿಲ್ಲ (Emotional Fool ಎಂದಾದರೂ ಹೆಸರಿಸಿ, ಅಡ್ಡಿಯಿಲ್ಲ) 'ಅವನಿ' 'ಕಥೆ ಓದಿ ಅತ್ತಿದ್ದಂತೂ ನಿಜ, ನೂರಕ್ಕೆ ನೂರು, –

✍ **ವನಜರಾಜನ್**

# ನಗೆಹನಿ

ಹೆಂಡತಿ: ಮನೆಗೆ ಏಕೆ ಇಷ್ಟು ಬೇಗ ಬಂದ್ರಿ?

ಗಂಡ: Go to hell ಅಂತ ಬಾಸ್ ಕೂಗಿದ ಅದಕ್ಕೆ.

*****

ಊಟ ಮಾಡ್ತಾ ಇದ್ದ ಗಂಡ, ಜೋರಾಗಿ ಹೆಂಡತೀನ ಕೂಗಿದ

"ಏನೇ... ನೀನೀಗ ಬಡಿಸಿದ ಈ ಪಲ್ಯದ ಹೆಸರೇನು?

(ಅಡಿಗೆ ಮನೆಯಿಂದ)

ಗಂಡ: "ಏನಿಲ್ಲಾ... ನಾನು ಸ್ವರ್ಗಕ್ಕೆ ಹೋದ್ಮೇಲೆ ಕೇಳ್ತಾರಲ್ಲ, ಏನ್‌ತಿಂದ್ ಸತ್ತೇ ಅಂತ. . . .

ಆವಾಗ ಇದರ ಹೆಸರು ಹೇಳ್ಬೇಕಲ್ಲ. ..ಅದಕ್ಕೇ ಕೇಳ್ದೆ ಅಷ್ಟೇ"

******

ಹುಡುಗೀಗೆ ಕೆಲಸ ಇಲ್ಲದೇ ಇದ್ರೂ ಅವಳ್ನ ಮದುವೆ ಆಗೋಕೆ, ಎಲ್ಲಾ ಹುಡುಗ್ರೂ ಅಣಿಯಾಗಿರ್ತಾರೆ. ಆದ್ರೆ ಹುಡುಗಂಗೆ ಕೆಲಸ ಇಲ್ಲದೇ ಇದ್ರೆ ಯಾವ ಹುಡುಗೀನ ಅವನ ಕಡ 'ಕಣ್ಣು ಹಾಯಿಸೋಲ್ಲ.

ಅದಕ್ಕೇ, ಹುಡುಗರ ಮನಸ್ಸು ವಿಶಾಲ ಅನ್ನೋದು.

****

ಈಗಷ್ಟೇ ಓದಿದ್ದು

ಅದೊಂದು ಪುಟ್ಟ ಊರು. ಕೋರ್ಟ್‌ನಲ್ಲಿ ಒಂದು ಕೇಸ್‌ನ ವಿಚಾರಣೆ ನಡೀತಾ ಇದೆ. ಆ ಕೇಸ್‌ನಲ್ಲಿ ನಮ್ಮ ಗುಂಡ ಮ್ಮಜ್ಜಿಯನ್ನು ಸಾಕ್ಷಿಯಾಗಿ ಕರೆದಿದ್ದಾರೆ.

ಅಷ್ಟೊಂದು ವಯಸ್ಸಾಗಿದೆ ಅಂದ ಮೇಲೆ mental stability, memory ಎಲ್ಲಾ ಚೆನ್ನಾಗಿದೆ ಅಂತ ಸಿದ್ಧಪಡಿಸ್ಬೇಕಲ್ಲ. ಆಮೇಲೆ, ಎದುರು ಕಡೆಯವರು ಇವರಿಗೆ ಬುದ್ದೀನೇ ನೆಟ್ಟಗಿಲ್ಲ ಎಂದು ಬಿಟ್ರೆ? ಅವರು ಹುಷಾರಾಗಿದ್ದಾರೆ, ಅವರಿಗೆ ಎಲ್ಲಾ ವಿಷಯ ಗೊತ್ತು ಅಂತ ಕೋರ್ಟ್‌ಗೆ ಮನವರಿಕೆ ಮಾಡಿಕೊಡ್ಬೇಕು ಅಲ್ವಾ?

ಹಾಗಾಗಿ ಅಜ್ಜಿಯನ್ನು, ವಕೀಲರು ಕಟಕಟೇಯಲ್ಲಿ ನಿಲ್ಲಿಸಿ ಕೇಳಿದರು. "ಅಜ್ಜಿ, ನಿಮಗೆ ನಾನ್ಯಾರೂಂತ ಗೊತ್ತಾ?"

ಗುಂಡಮ್ಮಜ್ಜಿ ಕೂಲಾಗಿ, "ಗೊತ್ತಿಲ್ದೆ ಏನು? ನೀನು ಮೂರ್ತಿ ಅಲ್ವಾ? ಮುಂಡೇದೇ. .. ನೀನು ಕೂಸಾಗಿದ್ದಾಗ್ಲಿಂದ ನೋಡಿದೀನಿ. ಹೇತು ಕೊಳೀತಾ ಇದ್ದ ನಿನ್ನ ನಾನು ಎಷ್ಟು ಸಲ ತೊಳೆದಿಲ್ಲ. ದೊಡ್ಡವನಾದ್ಮೇಲೇನು ಕಮ್ಮೀನಾ? ಬರೀ ಸುಳ್ಳೂ ಹೇಳೋದು. ಹೆಂಡತೀಗೆ ಮೋಸ ಮಾಡೋದು ಜನರ ಹಿಂದೆ ಮಾತಾಡೋದು. ನಿನ್ನ ಬಗ್ಗೆ ನನಗೆ ಗೊತ್ತಿಲ್ವಾ, ಪಾಪಿ ಮುಂಡೇದೇ" ಅಂದ್ರು

ಮೂರ್ತಿ ತಬ್ಬಿಬ್ಬಾದ. ಏನು ಮಾಡ್ಬೇಕೂಂತ ತಿಳೀಲಿಲ್ಲ ಸರಿ, ಅಲ್ಲಿಯೇ ಇದ್ದ ಎದುರು ವಕೀಲರ್ನ ಕಡೆ ಕೈ ತೋರಿಸಿ ಕೇಳಿದ.

ಹೋಗ್ಲಿ ಅಜ್ಜಿ,... ಇವರು ಯಾರೂಂತ ಗೊತ್ತಾ?"

"ಅಯ್ಯೋ ಇವನು ನಮ್ಮ ಕೃಷ್ಣಸ್ವಾಮಿ ಅಲ್ವೇ... ಕಿಟ್ಟೂಂತಕ ರೀತಿದ್ದೇ... ಈ ಮುಂಡೇದು ಗೊತ್ತಿಲ್ಲಾಂದ್ರೆ, ಏನು? ಇವನ್ನೂ ಕೂಶಿದ್ದಾಗ್ನಿಂದ ನೋಡಿದ್ದೀನಿ, ನಮ್ಮ ವಠಾರದಲ್ಲೇ ಇತ್ತು ಮುಂಡೇದು.. ಬರೀ ಸೊಂಬೇರಿ... ಇನ್ನೊಬ್ಬರು ಹೇಳಿದ್ದು ಕೇಳೊಲ್ಲ, ತನ್ನದೇ ತನಗೆ... ಕೆಟ್ಟಕುಡುಕ ಬೇರೆ. ಯಾರ ಹತ್ತಿರಾನೂ ಸಂಬಂಧ ನೆಟ್ಟಗಿರೋಲ್ಲ. ಇಡೀ ಊರಲ್ಲಿರೋದರಿದ್ರ ವಕೀಲ ಅಂದ್ರೆ ಇವನೇ... ಹೆಂಡತೀಗೆ ಮೋಸ ಮಾಡಿ 3 ಜನ ಹೆಂಗಸರ ಜೊತೆ ಸಂಬಂದ ಇಟ್ಕೊಂಡಿದಾನೆ. ಅದರಲ್ಲಿ ಒಬ್ಬಳು ನಿನ್ನ ಹೆಂಡತಿ... ಈ ಮುಂಡೇದು ಗೊತ್ತಿಲ್ದೆ ಏನು? ಅಂದರು.

ವಕೀಲರು ಇಬ್ಬರೂ ಮೂರ್ಛೆ ಬೀಳೋದೊಂದು ಬಾಕಿ

ಕೂತಿದ್ದ ಜಡ್ಜ್, ಇಬ್ಬರು ವಕೀಲರನ್ನು ಬಳಿಗೆ ಕರೆದ.

"ನೀವಿಬ್ರೂ ಈಡಿಯಟ್‌ಗಳು ಈ ಅಜ್ಜೀನೇನಾದ್ರೂ ಈ ಜಡ್ಜ್‌ಗೊತ್ತಾಂತ ನನ್ನ ಬಗ್ಗೆ ಕೇಳಿದ್ರೆ... ನಿಮ್ಮಿಬ್ಬರನೂ ಎಲೆಕ್ಟ್ರಿಕ್‌ಛೇರ್ ಮೇಲೆ ಕೂರಿಸ್ಬಿಡ್ತೀನಿ, ಹುಷಾರ್, ಕೇಸ್ dismissed !!!

# An Afternoon with Dr. Subramanian Swamy

On Sunday, 31st March 2019, Dr. Subramanian Swamy, an eminent Economist, Proactivist against Corruption, was in the Mysore Association to share his thoughts with the members.



This interaction titled "Dharmakshetra Kurukshetra -Impact of Social Media in 2019 Election" was organized in association with the Maharashtra Wingof Virat Hindustan Sangam, an organization founded by Dr. Subramanian Swamy.

As scheduled, Dr. Swamy was received by the Mysore Association President, Smt. Kamala and the Hon. Secretary, Dr. Ganapati Shankarlingwith Porna Kumbha Swagata and he thereafter did his Namana to Lord Shree Siddhivinayak and then had discussions with the Managing Committee members of the Association over a cup of coffee.

Exactly at 3.30 pm Smt. Rajalakshmi Joshi (compere) began the proceedings, which began with an invocation composed by the Maha Acharya Chandrasekhara Saraswati Swamigal of Kanchi "win over all hearts by Friendship". It was sung by Vidushi (Smt.) Shyamala Radhesh.

After lighting of the lamp, The Mysore Association, honoured the Guests, Dr. Swamy, Dr. Sankhe, President of VHS, Maharashtra, Dr. Jagdish Shetty, National Sec. VHS, and Mr. Mahesh Joshi.




Smt. Kamala, welcomed Dr. Swamy and other guests, and elaborated on the character of the Mysore Association build over 93 years, to propagate, Indian Culture, through Music, Dance, Painting, Theology, Philosophy, so as to pass on the greatness of our culture to the young generations.

Dr. Manjunath then spoke on Indian ancient intellectual heritage, innovations, and mind shaping, by our culture and the pride and strength he has derived from it. As a Quantum physicist, he found that the same had been enunciated by Adwaitawhich said everything in this universe is God. Indians worship snakes, apes, birds, sun and planets. This is what is taught by Quantum physics as well when it says E=MC2. Indians gave the World the numerals, zero, calculus & Yoga, which deals with Mind travel and telepathy. How is it our ancients were so perceptive and outdated modern science by thousands of years? He recalled his own training by his elders, who schooled him themselves, rather than outsourcing to some schools like in the current system. Mind shaping is the prime objective of any education system, and if we outsource it to some others, then our young would not remain as our own, as they are conditioned by someone else's thoughts. He recalled how after the second World War the Americans realized how to conquer the world. Rather than conquer the land, they set upon to conquer the minds and shape them to their own thinking. Thus came Internet, Google, Facebook, Twitter and WhatsApp where our young ones laid bare their hearts and minds. This is the new universe which we have to capture to retain Indian Culture. He sought Dr. Swamy's strategy in this battle.

Dr. Sankhe recalled the battle to regain the mind and space of Indians, and how VHS was set up with the vision

of Dr. Swamy. Indian ethos was of prime importance than any political ideology.

Dr. Jagdish Shetty, elaborated on the purpose of VHS in detail. VHS has been conducting interactions with many all across India with a view to bring around everyone in the nation, to be proud of our nation, irrespective of Religion, Caste, Language and work towards building our nation into a super power.




Dr. Swamy took over the stage and held the audience spell bound for one hour. He said as elaborated by the earlier speakers, India was super power in the ancient days - be it Astronomy, Mathematics, Quantum physics or Mind Science like Yoga. But foreign domination of more than 800 years has diverted our minds and the sheen of achievements of India has been lost.

UNESCO has listed some 45 civilizations of ancient times. Be it Egyptian, Greek, Roman, Mayan, Mesopotamian, Persian, each of these civilizations today have vanished. It is only the Indian civilization that has remained in spite of the onslaught. Each and every civilization, when it was attacked by either Christian or Islamic forces, succumbed within a short time and converted to either Christianity or Islam. He cited the case of Spain and Turkey which when conquered by Islamists, all the Churches were demolished by and again when Spain was conquered by Christians, Mosques were demolished. Their the religion was dictated by the King or Sultan, whereas in India, it is the ordinary people who practiced and owned Religion and culture.

Lord Macaulay, who studied Indians, sent a message to the British Government, "how this, intelligent, innovative and independent minded civilization can be converted to be English in everything but skin complexion and be used to serve the Empire." An education system was devised by the British to subject the Indian mind to think that all that is British is superior to their own system. Thus, Indian thoughts, Law and Judiciary, Engineering, Science, Philosophy, Theology, emanating from Britain were considered superior to our own and started embracing them.

History was rewritten, so that an Empire which extended to a smaller landscape and existed for only 180 years was given space of three chapters and an Empire like Vijayanagar which extended from South to the borders of Bengal and existed for 300 years was given just one paragraph.

From Prithviraj and Jayachand till date, internal divisions and strife's have plagued our country. In the South, they think that Aryans and Dravidians come from different origins. This is disproved by DNA tests. All of us have the same DNA. But a seed of division is made for political reasons Sanskrit binds all languages. Mr. Karunanidhi claimed that Tamil did not come from Sanskrit, but a deeper study shows more than 40 percent words have Sanskrit origins. If one knows Sanskrit, one can follow 20 to 25 percent of all Indian Languages. Infact, NASA while studying languages suitable for computersdecided that Sanskrit occupied that eminent space.

Today Rama Janma Bhumi has been caught in a political web. When I attempted to intervene in the cause, the parties objected saying that I did not have any claim or stake in the property dispute. Then I had to devise a way to buttress my claim. I laid claimthat it is my fundamental right to practice my faith and pray at the palace where Ram was born. Al we are asking are just 3 places of worship from the 48,000 places of worship which were destroyed by Islamists. Supreme Court here already ruled that Mosque is not necessary for worship. Similarly, Saudi Arabia has demonstrated that Mosques can be demolished or built anywhere.

Mr. Narasimha Rao nationalized 70 acres of Land, including the 2.72 acres where Babri-Masjid stood, and filed an affidavit in the Supreme Court, that if any evidence is produced that there was earlier a Hindi Temple under the Masjid, the Govt. would give the land to build a Ram Temple. Today Such evidence has been produced under Court Supervision. There was no need for the BJP Govt to seek Court's approval to give the land back to Rambhumi Nyas.

The economy of India can be fixed in just 3 months, once the present Finance Minister who does not understand economics is replace. Hardly 2 percent of national income comes form Income Tax. Abolition of Income Tax would reduce a great deal of burden on the National Exchequer and corruption. I advocate against GST as it has brought misery.

My allegiance is to the nation and not to any party. Currently I believe BJP should form the next Government as it is fighting corruption and fights for nationalism.

This is a fight which required each and every hand in our nation. It is not a fight, where one single person can fight done.

I am against corruption and as such I spend all my time and might against corruption which has been nurtured in the last 60 years.

It was unfortunate that Jawaharlaal Nehru became the Prime Minister after Independence Gandhi was thinking of splitting Congress into two wings, one lead by Nehru, the other lead by Patel. This did not materialize and then the power was captured by one family. It is I who recommended Vallabbhai Patel's name for Bharata Ratna, during Narasimha Rao's time. Narasimha Rao was a good person and a good Hindu and a great Economist. That is why he is not included in the memory of the family.

I invite all of you to join in my fight for Justice and India.

Dr. Ganapati Shankarling thanked Dr. Swamy for sharing this afternoon and his thoughts with us. A Lion does not need to be crowned and enthroned. He becomes a King by his own merit and strength. Dr. Subramanian Swamy does not need anyone's recognition. We are thankful to him and VHS to have spared their time for us. He also thanked the audience.

The full house, dispersed after singing Vandemataram in Josh.

ಸಂಸ್ಕೃತಿ

# ಮೊರಾದಾಬಾದಿನ ಹಿತ್ತಾಳೆಯ ಕಲಾಕೃತಿಗಳು

*Culture*



✍ ಎಂ.ಪಿ.ಎಸ್.ಪ್ರಸಾದ್

ಭಾರತವು ವಿಶ್ವದಲ್ಲಿಯೇ ಅತಿದೊಡ್ಡ ಹಿತ್ತಾಳೆಯ ಕಲಾಕೃತಿಗಳನ್ನು ಉತ್ಪಾದಿಸುವ ದೇಶ. ಹಿತ್ತಾಳೆಯ ಉಪಯೋಗವು ಭಾರತದಲ್ಲಿ ಎರಡು ಸಾವಿರ ವರ್ಷಗಳಿಗೂ ಹಿಂದಿನದು ಎಂದು ಇತಿಹಾಸ ಹೇಳುತ್ತದೆ. ಉತ್ತರ ಪ್ರದೇಶದಲ್ಲಿರುವ ವಾರಣಾಸಿ ಮತ್ತು ಮೊರಾದಾಬಾದ್ ಹಿತ್ತಾಳೆಯ ಕಲಾಕೃತಿಗಳ ತಯಾರಿಕೆಗೆ ಹೆಸರು ವಾಸಿಯಾದ ಸ್ಥಳಗಳು. ಇವಲ್ಲಿ ವಾರಣಾಸಿಯು ಹಿತ್ತಾಳೆಯ ಪಾತ್ರೆ ಪಡಗಗಳನ್ನು ಹೆಚ್ಚಾಗಿ ತಯಾರಿಸಿದರೆ, ಮೊರಾದಾಬಾದ್‌ನಲ್ಲಿ ಅಲಂಕಾರಿಕ ವಸ್ತುಗಳನ್ನು ತಯಾರಿಸುತ್ತಾರೆ. ಈ ಅಲಂಕಾರಿಕ ವಸ್ತುಗಳಿಗೆ ವಿಶ್ವಾದ್ಯಂತ ಬೇಡಿಕೆ ಇರುವುದರಿಂದ, ಮೊರಾದಾಬಾದ್ ವಿಶ್ವಖ್ಯಾತಿ ಗಳಿಸಿದೆ.



ಮೊರಾದಾಬಾದ್ ದಿಲ್ಲಿಯಿಂದ ಸುಮಾರು 100 ಮೈಲಿ ದೂರದಲ್ಲಿರುವ, ರಾಮ್ ಗಂಗಾ ನದಿಯ ತೀರದಲ್ಲಿರುವ 'ಒಂದು ಸಣ್ಣ ಊರು. ಷಹಜಹಾನನ ಮಗ ಮುರಾದನು ಈ ಊರನ್ನು ಸ್ಥಾಪಿಸಿದರಿಂದ ಇದಕ್ಕೆ ಮುರಾದಾಬಾದ್ ಎಂಬ ಹೆಸರಾಯಿತು. ಇಲ್ಲಿನ ಮುಖ್ಯ ಉದ್ಯೋಗ ಹಿತ್ತಾಳೆಯ ಕಲಾಕೃತಿಗಳ ತಯಾರಿಕೆ. ಅದಕ್ಕೇ ಈ ಊರಿಗೆ 'ಬ್ರಾಸ್ ಸಿಟಿ 'ಅಥವಾ 'ಪೀತಲ್ ನಗರಿ' ಎಂದು ಕರೆಯುತ್ತಾರೆ. ಇಲ್ಲಿ ಹಿತ್ತಾಳೆಯ ಕೆಲಸವು ಹೇಗೆ, ಅಥವಾ ಯಾಕೆ ಪ್ರಾರಂಭವಾಯಿತು ಎಂಬುದರ ಬಗ್ಗೆ ಖಚಿತ ಮಾಹಿತಿಯು ಇಲ್ಲದಿದ್ದರೂ, ಇಲ್ಲಿನ ಮಣ್ಣು ಹಿತ್ತಾಳೆಯ ಕಲಾಕೃತಿಗಳನ್ನು ಮಾಡಲು ಉಪಯೋಗಿಸುವ ಅಚ್ಚುಗಳನ್ನು ತಯಾರಿಸಲು

ಸೂಕ್ತವಾಗಿರುವುದೇ ಕಾರಣ ಇರಬಹುದೆಂದು ಊಹಿಸಲಾಗಿದೆ. ಇಲ್ಲಿನ ಹಿತ್ತಾಳೆ ಉದ್ಯೋಗವು ಹೆಚ್ಚು ಪಾಲು ಸಣ್ಣ ಪುಟ್ಟ ಕಲಾಕಾರರು ನಡೆಸುವುದೇ ಆಗಿವೆ. ಇಂದು ಹೆಚ್ಚಿನ ರಫ್ತು ಇರುವುದರಿಂದ ಕೆಲವು ದೊಡ್ಡ ಕಾರ್ಖಾನೆಗಳು ಬಂದಿದ್ದರೂ, ಈ ಕಲೆಗೆ ಹೆಚ್ಚಾಗಿ ನಮ್ಮ ಸಾಂಪ್ರದಾಯಿಕ ಪದ್ಧತಿಯನ್ನೇ ಉಪಯೋಗಿಸುತ್ತಿದ್ದಾರೆ.

ಅಚ್ಚುತ ಎರಕ ಹುಯ್ಯುವುದಕ್ಕೆ 'ಪಾರಾ' ಮತ್ತು 'ದರ್ಜಾ' ಪದ್ಧತಿಯನ್ನೇ ಅನುಸರಿಸುತ್ತಿದ್ದಾರೆ. ಈ ವಿಧದಲ್ಲಿ ತ0ಯಾರಿಸಿದ ಕಲಾಕೃತಿಯಲ್ಲಿ joint ಗಳಿರುವುದಿಲ್ಲ. ಮೊಘಲರ ಕಾಲದಲ್ಲಿ ಈ ಕಲೆಗೆ ಉತ್ತೇಜನ ದೊರಕಿ, ಹುಕ್ಕಾ, ಸುರಾಹಿ, ದೀಪಗಳು, ಆಭರಣದ ಪೆಟ್ಟಿಗೆಗಳು, ಇತ್ಯಾದಿಯ ಅಲಂಕಾರಿಕ ವಸ್ತುಗಳಿಗೆ 'ಷಿಯಾ ಕಲಾಮ್' ರೀತಿಯ ಅಲಂಕಾರ ಉಪಯೋಗಿಸಲಾಯಿತು. ಇದು ಮೊರಾದಾಬಾದಿನ ಒಂದು ಪ್ರತ್ಯೇಕ ಶೈಲಿಯಾಗಿ ಬೆಳೆದು ಬಂದಿತು.

1801ರಲ್ಲಿ ಈ ಪ್ರದೇಶದ ಕಲೆಕ್ಟರ್ ಈ ಕಲೆಯಿಂದ ಆಕರ್ಷಿತನಾಗಿ ಈ ಕಲೆಯನ್ನು ಪ್ರೋತ್ಸಾಹಿಸ ತೊಡಗಿದನು. ಇದರಿಂದ ಭಾರತದೊಳಗಿನ ಮತ್ತು ಹೊರಗಿನ ಬ್ರಿಟೀಷರು ಈ ಕಲಾಕೃತಿಗಳನ್ನು ಉಪಯೋಗಿಸತೊಡಗಿದರು. 1857ರಲ್ಲಿ ಮೊದಲ ಬಾರಿಗೆ ಈ ವಸ್ತುಗಳು ಇಂಗ್ಲೆಂಡಿಗೆ ರಫ್ತು ಮಾಡಲ್ಪಟ್ಟವು.

ಈ ಕಲಾಕೃತಿಗಳ ತಯಾರಿಕೆಯಲ್ಲಿ ಅನೇಕ ಹಂತಗಳಿವೆ. ಅಚ್ಚನ್ನು ತಯಾರಿಸು ವುದು, ಅದರಲ್ಲಿ ಚಿತ್ರವನ್ನು ಕೆತ್ತುವುದು ಅಥವಾ ನಕಾಶೆಯನ್ನು ಬಿಡಿಸುವುದು, ಎರಕ ಹುಯ್ದನಂತರ ಕಲಾಕೃತಿಯನ್ನು ಉಜ್ಜಿ ನುಣ್ಣಗೆ ಮಾಡುವುದು, powder coating ಮೂಲಕ ಬಣ್ಣಕಟ್ಟುವುದು, ಮೆರಗುಕೊಡಲು lacquer ಹಚ್ಚುವುದು, ಪಾಲೀಶು ಮಾಡುವುದು ಇತ್ಯಾದಿ. ಈ ಕೆಲಸಗಳನ್ನು ಎರಡು ವಿಧವಾಗಿ ವಿಂಗಡಿಸಬಹುದು. ಒಂದು ಬೇಕಾದ ಅಚ್ಚನ್ನು ತಯಾರಿಸುವುದು, ಮತ್ತು ಅದರಲ್ಲಿ ಬೇಕಾದ ಕೆತ್ತನೆ ಅಥವಾ ನಕಾಶೆಯನ್ನು ಬಿಡಿಸುವುದು. ಇದಕ್ಕೆ ಕಲಾಕಾರನ ಅವಶ್ಯಕತೆ ಇದೆ. ಎರಡನೆಯದು, ಗ್ರಾಹಕನು ಬೇಡುವ ಮಾದರಿಯಂತೆ ಒಂದು ನಮೂನೆಯನ್ನು ತಯಾರಿಸಿ ಅದರ ಅಚ್ಚು ಮತ್ತು ನಕಾಶೆ ತಯಾರಿ ಮಾಡಿಕೊಳ್ಳುವುದು. ಅದರಿಂದ ತಯಾರಿ ಪ್ರಾರಂಭವಾದಾಗ ಅವನ್ನು ಯಂತ್ರದಲ್ಲಿ grind, polish, powder coat, lacquering, and packaging, ಇತ್ಯಾದಿ ಕೆಲಸಗಳನ್ನು ನೋಡಿಕೊಳ್ಳುವುದು.




ಈ ಕೆಲಸಗಳನ್ನು ಕಲಾಕಾರರಲ್ಲದೆ ಬೇರೆಯವರೂ, ಸ್ವಲ್ಪ ತರಬೇತಿಯೊಡನೆ ಮಾಡಬಹುದು. ಈ ರೀತಿಯ ಕೆಲಸಗಳನ್ನು ಮಾಡುವ ಸಣ್ಣ ಸಣ್ಣ ಸಂಸ್ಥೆಗಳೇ ಬಹಳಷ್ಟು ಇವೆ. ಮೊರಾಬಾದಿನಲ್ಲಿ ತಯಾರಾಗುವ ಕಲಾಕೃತಿಗಳು ಯಾವವು? ಪೂಜೆಗೆ ಉಪಯೋಗಿಸುವ ವಿಗ್ರಹಗಳು, ಲೋಟಗಳು, ತಾಮ್ರಪತ್ರಗಳು (ಚೊಂಬುಗಳು), ಪಂಚಪಾತ್ರೆಗಳು, ಆಸನಗಳು, ಹೂಬುಟ್ಟಿಗಳು ಮತ್ತು ಹೂತಟ್ಟೆಗಳು. ಗೃಹವಸ್ತುಗಳಲ್ಲಿ ನೀರಿನ ಬಿಂದಿಗೆಗಳು, ಊಟದತಟ್ಟೆ, ಲೋಟ, ಬಟ್ಟಲುಗಳು ಇತ್ಯಾದಿ. ಅಲಂಕಾರಿಕ ವಸ್ತುಗಳಲ್ಲಿ Ash Tray, ದೀಪಗಳು, ಮೊಂಬತ್ತಿಯ ಸ್ಟಾಂಡ್, ಹುಕ್ಕಾಗಳು, ಪನ್ನೀರ್‌ದಾನಿ, ಅತ್ತರ್‌ದಾನಿ, ಅಫ್ತಾಬ್ – ದ್ರಾಕ್ಷಾರಸದ ಹೂಜಿಗಳು, ಸ್ಮರಣಿಕೆಗಳು, ಇತ್ಯಾದಿ.

ಹಿತ್ತಾಳೆಯ ಬೆಲೆಯು ಹೆಚ್ಚುತ್ತಿರುವುದರಿಂದ, ಈ ಕಲೆಗೆ ಇತರ ಲೋಹಗಳನ್ನು ಉಪಯೋಗಿಸಲು ಪ್ರಯತ್ನಗಳು ನಡೆಯುತ್ತಿವೆ. ಅದೂ ಅಲ್ಲದೆ, ಚಿತ್ರಗಳು, ನಕಾಶೆ ಆಕರ್ಶಕವಾಗಿ ಕಾಣಲು ವಿವಿಧ ಬಣ್ಣದ enamel ಕೂಡ ಉಪಯೋಗಿಸಲಾಗುತ್ತದೆ.



ಭಾರತದಲ್ಲಿ ಹಿತ್ತಾಳೆಯ ಉಪಯೋಗವು ಬಹಳ ಪುರಾತನವಾದದ್ದು ಎಂದ ಮೇಲೆ, ಈ ರೀತಿಯ ಹಿತ್ತಾಳೆ ಉದ್ಯೋಗವು ಇತರ ಸ್ಥಳಗಳಲ್ಲಿ ಇಲ್ಲವೇ? ಇದೆ. ರಾಜಸ್ಥಾನದ ಜೋಧಪುರ ಮತ್ತು ಜಯಪುರದಲ್ಲಿ, ಕಾಶ್ಮೀರದ ಉಧಮಪುರ ಮತ್ತು ಬನ್ಸಾಲಿಯಲ್ಲಿ, ಹರಿಯಾಣದ ರೇವಾರಿ ಮತ್ತು ಜಗಧಾರಿಯಲ್ಲಿ, ಅಸ್ಸಾಮಿನ ಹಾಜೋ ಮತ್ತು ಸರ್ತೇಬಾರಿಯಲ್ಲಿ ಮತ್ತು ಬಂಗಾಳದ ಪರುಲಿಯಾ, ಬೀರ್ಭೂಮ್ ಮತ್ತು ಬಂಕುರಾದಲ್ಲಿ ಈ ಉದ್ಯೋಗವನ್ನು ನಾವು ಕಾಣಬಹುದು. ದಕ್ಷಿಣ ಭಾರತದಲ್ಲಿ ಹೈದರಾಬಾದ್, ಕರ್ನಾಟಕದ ಬೀದರ್, ನಾಗಮಂಗಲ, ಮೈಸೂರು ಮತ್ತು ಗದಗದಲ್ಲಿ, ತಮಿಳುನಾಡಿನ ಮದುರೈ, ಕುಂಭಕೋಣಂ, ತಂಜಾವೂರ್ ಮತ್ತು ಸ್ವಾಮಿ ಮಲೈ, ಕೇರಳದ ತ್ರಿಶೂರ್, ಮಹಾರಾಷ್ಟ್ರದ ಅಂಬರನಾಥ್, ಥಾಣಾ, ನಾಶಿಕ್ ಮತ್ತು ಕಲ್ಯಾಣ್‌ದಲ್ಲಿ, ಮತ್ತು ಗುಜರಾತಿನ ಜಾಮನಗರಿನಲ್ಲಿ ಈ ಉದ್ಯೋಗವನ್ನು ಕಾಣಬಹುದು. ಈ ಎಲ್ಲಾ ಸ್ಥಳಗಳಿಗಿಂತಲೂ ಮೊರಾದಾಬಾದಿನಲ್ಲಿ ಈ ಉದ್ಯೋಗವು ಹೆಚ್ಚು ಪ್ರಾಧಾನ್ಯ ವಾಗಿರುವುದರಿಂದ ಹಿತ್ತಾಳೆಯ ಕಲಾಕೃತಿಗಳೆಂದರೆ, ಅದರೊಡನೆ ಮೊರಾದಾಬಾದಿನ ಹೆಸರು ಜೋಡಿಸಲ್ಪಡುತ್ತದೆ.

# ಮುಂಜಾಗ್ರತೆ (Precaution)



✍ ಜಿ.ವಿ.ರಾವ್

ಸಾಮಾನ್ಯವಾಗಿ ಜನರು, ಬೇಗ ಏಳುವುದಕ್ಕೆ Alarm ಗಡಿಯಾರ ಉಪಯೋಗಿಸುತ್ತಾರೆ. ಅದೇ ರೀತಿ ರಸ್ತೆಯಲ್ಲಿ ಚಲಿಸುವಾಗ

1) Ambulance ವಾಹನದ ಶಬ್ದ ಬಂದಾಗ ಆ ವಾಹನಕ್ಕೆ ಜಾಗ ಬಿಟ್ಟುಕೊಡುತ್ತಾರೆ.

2) Traffic Signalನಲ್ಲಿ ಬರುವ ಕೆಂಪು ಅಥವಾ ಹಳದಿ ಅಥವಾ ಹಸಿರು ದೀಪವನ್ನು ಗಮನಿಸಿ ತಮ್ಮ ಚಲನೆ ಮುಂದುವರಿಸುತ್ತಾರೆ.

ಅದೇರೀತಿ, ಆರೋಗ್ಯ ಕಾಪಾಡಿಕೊಳ್ಳುವುದಕ್ಕೆ (1) ಮಳೆಗಾಲದಲ್ಲಿ ಮನೆಯಿಂದ ಹೊರಡುವಾಗ ಛತ್ರಿತೆಗೆದುಕೊಂಡು ಹೋಗುವುದು, (2) ಅಂಟು ಜಾಡ್ಯಗಳು ಬಾರದಿರುವುದಕ್ಕೆ vaccination, inoculation ತೆಗೆದುಕೊಳ್ಳುವುದು ಮತ್ತು (3) ಎರಡು ದಿನ ಮುಜಿಗರ ಬಂದಾಗಕೂಡಲೇ ವೈದ್ಯರನ್ನು ಕಾಣುವುದು ಎಲ್ಲವೂ ಎಲ್ಲರೂ ನಡೆದುಕೊಳ್ಳುವ ರೀತಿ ಆಗಿರುತ್ತದೆ.

**ಕಠಿಣ ಮುಂಜಾಗ್ರತೆಗಳು:** ಪ್ರತಿಯೊಬ್ಬರೂ, ತಮ್ಮ ಪರಿಸರದಲ್ಲಿ, ಅಂದರೆ ಅಕ್ಕ ಪಕ್ಕದ ಮನೆಗಳಲ್ಲಿ ಆಗುವ ಸಾವು, ಸೋಲು, ಸಂಕಟ, ಜಗಳ ಇತ್ಯಾದಿಗಳನ್ನು ಗಮನಿಸಿ; ಅವು ಯಾಕೆ ಆಗುತ್ತವೆ; ತನಗೂ ಆ ಕಷ್ಟಗಳು ಬರಬಹುದು ಎನ್ನುವ ವಿಚಾರವನ್ನು ಗಮನಿಸಿ; ಪರಿಹಾರ ಪಡೆಯಬೇಕು.

ಪರಿಹಾರದ ಅರಿವು ಮನೆಯಲ್ಲಿ ಹಿರಿಯರಿಗೆ ಇದ್ದರೆ, ಆ ಸಂಸಾರದಲ್ಲಿ ಕಷ್ಟ ಸನ್ನಿವೇಶಗಳು ಕಡಿಮೆ ಇರುತ್ತವೆ. ಅಲ್ಲದೆ ಮನೆಯ ಕಿರಿಯರಿಗೂ ತಿಳುವಳಿಕೆ ಪಡೆಯುವ ಸಾಧ್ಯತೆ ಇರುತ್ತದೆ. ಹಿರಿಯರಿಗೆ ತಿಳಿವಳಿಕೆ ಇಲ್ಲದಿದ್ದರೆ ಮಕ್ಕಳೂ ಪದೇ ಪದೇ ಕಷ್ಟಗಳನ್ನು ಅನುಭವಿಸುವ ಪರಿಸ್ಥಿತಿ ಬರಬಹುದು.

**ಮುಂಜಾಗ್ರತೆ ಪಡೆಯುವುದು ಹೇಗೆ?** : ಪ್ರತಿಯೊಬ್ಬರೂ ಸ್ವಪ್ರಯತ್ನದಿಂದಲೇ, ತಿಳಿವಳಿಕಸ್ಥರಾಗಬೇಕು. ಚರ್ಚನೆ, ಪ್ರವಚನ, ಹರಿಕಥೆ, ಸಂಗೀತ ಕಚೇರಿ ಇತ್ಯಾದಿಗಳ ಏನಿದ್ದರೂ ನಮ್ಮ ಪ್ರವಚನಕಾರರು ತಮ್ಮ ಅನುಭವ ಸೂಚಿಸಬಹುದು. ಶ್ರೋತೃಗಳ ಮನಸ್ಸಿನಲ್ಲಿ ಅವರ ಅನುಮಾನಗಳಿಗೆ ಪರಿಹಾರ ಕಂಡರೂ ಕಾಣಬಹುದು. ಸ್ವಾಧ್ಯಾಯದಿಂದ ಅವರಿಗೆ ಅನುಕೂಲವಾದ ಮಾರ್ಗಕಾಣುತ್ತಾರೆ.

ಈ ಕಾರ್ಯವನ್ನು ಪ್ರತಿದಿನ ಸ್ವಲ್ಪ ಸಮಯ ಮಾಡಲೇಬೇಕು. ಅವರು ಸರ್ವಜ್ಞ ಪದಗಳು, ಗಾದೆಗಳು, ಪಂಚತಂತ್ರದಂತಹ ನೀತಿಯುಳ್ಳ ಜಾನಪದ ಕಥೆಗಳು.

ಇತ್ಯಾದಿಗಳಲ್ಲಿ ತಮಗೆ ಸುಲಭವಾದುದನ್ನು ಓದಿ, ಚಿಂತಿಸಿ ಬುದ್ಧಿವಂತರಾಗಬೇಕು.

ರಾಜಕುಮಾರ ಸಿದ್ಧಾರ್ಥನು ಪರಿಸರದ ಕಷ್ಟಗಳನ್ನು ಕಂಡು ಚಿಂತಿಸಿ, ಗೌತಮಬುದ್ಧನಾದನು. ಅವನಂತೆಯೇ ಎಲ್ಲರೂ ಚಿಂತಿಸಿ ತಿಳಿವಳಿಕಸ್ಥರಾಗಬಹುದು. ಅಲ್ಲದೆ ಬಾಲಕ ಧ್ರುವ, ನಚಿಕೇತ ಹಾಗೂ ಏಕಲವ್ಯ ಸ್ವಪ್ರಯತ್ನದಿಂದ ಜೀವನ್ಮುಕ್ತರಾಗಿದ್ದಾರೆ.

ಪ್ರತಿಯೊಂದು ಮನೆಯಲ್ಲಿಯೂ ಮೊದಲು ಹಿರಿಯರು ಮುಂಜಾಗ್ರತೆ ಪಡೆದುಕೊಳ್ಳಬೇಕು. ನಂತರ ಕಿರಿಯರಿಗೆ ದಂಡಿಸದೆ, ಸಲಹೆ ಕೊಡುವುದು ಒಳ್ಳೆಯದು.

**ಮುಂಜಾಗ್ರತೆಯಿಂದ ಏನು ಲಾಭ?** : ಪ್ರಕೃತಿಯಲ್ಲಾಗುವ ಅನಾಹುತಗಳು (ಬಿರುಗಾಳಿ, ಭೂಕಂಪ, ಪವಾಹ ಇತ್ಯಾದಿ) ಖಂಡಿತವಾಗಿಯೂ, ತಪ್ಪುವುದಿಲ್ಲ. ಅದೇ ರೀತಿ ಮನುಷ್ಯರಿಗೆ ಖಾಯಿಲೆ ಬರುವುದು, ರಸ್ತೆಯಲ್ಲಿ ನಾಯಿ, ಹಸು ಅಡ್ಡಬರುವುದು, ವಾಹನದ ಚಕ್ರದ Tyre burst ಆಗುವುದು, ಪಕ್ಕದ ಮನೆಯವರಿಗೆ ಅನಿರೀಕ್ಷಿತ ಸಾವು ಇತ್ಯಾದಿ ತೊಂದರೆಗಳು ಇದ್ದೇ ಇರುತ್ತದೆ. ಹೀಗಿರುವಾಗ ಮುಂಜಾಗ್ರತೆ ಪಡೆಯುವ ಜನರಿಗೆ ಕಷ್ಟಗಳು ಬಂದಾಗ, ಪರಿಹಾರದ ಮಾರ್ಗ ಕಾಣಿಸಿಕೊಳ್ಳುತ್ತದೆ.

ಅಂದರೆ ಮುಂಜಾಗ್ರತೆಯು, ವಿಮಾನ (Aeroplane) ನಲ್ಲಿರುವ Radar ನಂತೆ ಕೆಲಸ ಮಾಡುತ್ತದೆ. ಪ್ರತಿಯೊಬ್ಬರೂ ಅಂತಹ ಅಮೂಲ್ಯವಾದ ರಕ್ಷಾ ನಿಯಂತ್ರಣ (safety control)ವನ್ನು ಬೆಳೆಸಿಕೊಳ್ಳುವುದು ಒಳ್ಳೆಯದು. Prevention (of problem) is better than cure.

ಕೆಲವು ಗಾದೆಗಳು ಕಲಿಸುವ ಪಾಠ
ಪಾಲಿಗೆ ಬಂದಿದ್ದುದು ಪಂಚಾಮೃತ
ಹಾಸಿಗೆ ಇದ್ದಷ್ಟು ಕಾಲು ಚಾಚು
ಬಡವ ಮಡಗಿದಂಗೆ ಇರು. – ದುರಾಸೆ ಪಡಬಾರದು
ಮಾಡಿದ್ದುಣ್ಣು ಮಹರಾಯ....
ಕಾಸಿನ ಕಡಳೆಯು ಬೇಡ
ಹೂಸಿನ ನಾಕವೂ ಬೇಡ – ಪಕ್ಕದ ಮನೆಗೆ ನಿನ್ನ ಮನೆ ಕಸ ಹಾಕಬೇಡ

ದುಡ್ಡೂ ಹಾಳು, ತಲೆಯೂ ಬೋಳು
ನವಿಲು ಆಡುತ್ತೆ ಅಂತಕೆಂಬೂತ
ರಕ್ಕೆಕೆದರಿಗೆ ಆಸಕ್ತಿ
ಹೊಗದೂರಿಗೆದಾರಿ ಕೇಳಬೇಡ – ಕೈಯಲ್ಲಾಗದ ಕೆಲಸ ಮಾಡಬಾರದು
ರಾತ್ರಿ ಕಂಡ ಬಾವಿಗೆ ಬೆಳಗ್ಗೆ ಹೋಗಿ ಬೀಳಬಾರದು – ಮುಂಜಾಗ್ರತೆ ವಹಿಸಿಕೊಂಡು ಕೆಲಸ ಹಿಡಿಯಬೇಕು.

ಸರ್ವೇಜನಾಃ ಸುಖಿನೋ ಭವಂತು

# ಭೃಂಗದ ಬೆನ್ನೇರಿ...

– ನಿರ್ಮಲಾ ಸುರತ್ಕಲ್

ಕಿವಿಗಳಲ್ಲಿ ಇಯರ್‌ಫೋನ್, ಕೈಯಲ್ಲಿ ಮೊಬೈಲ್, ರಾಜಹಂಸ ಬಸ್ಸಿನ ಸಿಂಗಲ್ ಸ್ಲೀಪರಲ್ಲಿ ಬಿದ್ದುಕೊಂಡಿದ್ದಾಳೆ ಸಹನಾ. ತುಟಿಗಳಲ್ಲಿ ಮುಗಿಯದ ಮಂದಹಾಸ, ನಿರೀಕ್ಷೆ.  ವಾಟ್ಸಪ್ ಪುಟ ತೆರೆದುಕೊಂಡಿದೆ. ಸಂದೇಶಗಳು ಬರುತ್ತಿದ್ದಂತೆ ನಗುತ್ತಾ ಉತ್ತರ ಕಳುಹಿಸುತ್ತಿದ್ದಾಳೆ. ಆಗಾಗ ಕರೆಗಳು ಕೂಡಾ ಬರುತ್ತವೆ. "ಯಾರಿಗಾದ್ರೂ ಗೊತ್ತಾಯ್ತೇನೇ ಪುಟ್ಟಾ?" ಆ ಕಡೆಯಿಂದ ಪ್ರಶ್ನೆ. ಆ 'ಪುಟ್ಟಾ'ಕರೆಗೆ ಪ್ರತಿ ಸಾರಿಯೂ ರೋಮಾಂಚನಗೊಳ್ಳುತ್ತಾಳೆ ಅವಳು. "ಪಿಜಿಯಲ್ಲಿ ಮನೆಗೆ ಹೋಗ್ತಿದ್ದೇನೆ ಅಂತ ಹೇಳಿ ಹೊರಟಿದ್ದೇನೆ" ಅವಳ ಮೆಲು ಧ್ವನಿಯ ಉತ್ತರಕ್ಕೆ 'ವೆರೀಗುಡ್!' ಅಂತ ಆ ಕಡೆಯಿಂದ ಮೆಚ್ಚುಗೆ!.

ಗಂಟೆ ಹತ್ತಾಗಿದೆ. ಅವಳ ವಾಟ್ಸಪ್ ಪುಟಗಳು ಮುಚ್ಚುತ್ತಲೇ ಇಲ್ಲ!. 'ನೀ ಬರ್ತಿ ಅಂತ ನನಗೆ ನಿದ್ದೆ ಬರ್ತಿಲ್ಲ!' ಅಂದಿದ್ದಾನೆ ಅವನು!. ತಿಂಗಳಿಗೆ ಲಕ್ಷ ಲಕ್ಷ ದುಡಿಯುವ, ಭಾರೀ ಮನೆ, ಕಾರುಗಳನ್ನು ಹೊಂದಿರುವ ಹುಡುಗನಿಗೆ ತಾನು ಮೆಚ್ಚಿಗೆಯಾಗಿದ್ದೇನೆ ಎನ್ನುವ ಭಾವನೆಯೇ ಅವಳ ಸಂತೋಷ, ಧೈರ್ಯವನ್ನು ಹೆಚ್ಚಿಸಿದೆ. ಫೇಸ್ ಬುಕ್ಕಲ್ಲಿ ಪರಿಚಯವಾಗಿ, ಅವನು ಕಳುಹಸಿದ ಚಿತ್ರಗಳಿಗೆ ಇವಳಿಂದಲೂ, ಇವಳು ಕಳುಹಿಸಿದ ಚಿತ್ರಗಳಿಗೆ, ವೀಡಿಯೋಗಳಿಗೆ ಅವನಿಂದಲೂ ಲೈಕ್ಸುಗಳು ರವಾನೆಯಾಗಿ, ಫ್ರೆಂಡ್ ರಿಕ್ವೆಸ್ಟಿಗೆ ಓಕೆ ಎಂದು ಹೇಳಿ, ಪರಸ್ಪರರ ಅಭಿರುಚಿಗಳನ್ನು ಹೇಳಿಕೊಂಡು ಹತ್ತಿರವಾದವರು ಅವರು. ಫೋಟೋ ನೋಡಿಯೇ, "ವಾವ್! ಇದೇ ಮುಖ ನಾನು ಹುಡುಕಿದ್ದು!" ಅಂತ ಪಿಸುಗುಟ್ಟಿದ್ದು ಅವನು!

ಅವನ ಪರಿಚಯವಾದ ಮೇಲೆ ಅಲಂಕಾರದ ಮೇಲೆ ಹೆಚ್ಚು ಗಮನ ಕೊಡಲಾರಂಭಿಸಿದ್ದಾಳೆ. ಧ್ವನಿಯನ್ನು ಮಾತ್ರ ಕೇಳಿರುವ ಅವಳೀಗ ಅವನ ತೆಕ್ಕೆಗಳಿಗೇನೇ ಹೋಗಲಿದ್ದಾಳೆ!. ಆತ ಎಷ್ಟು ಸಂಯಮಿ!. 'ನಿನ್ನ ಅನುಮತಿಯಿಲ್ಲದೆ ನಿನ್ನ ಬೆರಳನ್ನೂ ಮುಟ್ಟಲಾರೆ ಪುಟ್ಟಾ. ಮದುವೇನೂ ಅಷ್ಟೇ. ಹೆತ್ತವರ ಒಪ್ಪಿಗೆಯಿಂದಲೇ ನಡೆಯುವ ಹಾಗೆ ಮಾಡೋಣ. ನಮ್ಮದು ಬರಿಯದೇ ಆಕರ್ಷಣೆಯ ಪ್ರೀತಿಯಲ್ಲ ಅಲ್ವಾ?' ಅಂದಾಗ ಅವನ ಮೇಲಿನ ಗೌರವ ಇನ್ನಷ್ಟು ಹೆಚ್ಚಾಗಿದೆ. ತನಗಿಂತಲೂ ಅವನೇ ತನ್ನನ್ನು ಕಾಣಲು ಉತ್ಸುಕನಾಗಿರುವುದು ಅವಳ ಉತ್ಸಾಹವನ್ನು ಇನ್ನಷ್ಟು ಹೆಚ್ಚಿಸಿದೆ.

ಎದುರಿನ ಸೀಟಲ್ಲಿ, ಬಹುಶಃ ನವ ವಿವಾಹಿತರಿರಬೇಕು, ಕುಳಿತಿದ್ದಾರೆ. ಹುಡುಗಿಯ ಮುಖದಲ್ಲಿ ಲಜ್ಜೆ ಎದ್ದು ಕಾಣುತ್ತಿದೆ. ಸಹನಾಳ ಕಣ್ಣುಗಳು ಅಪ್ರಯತ್ನವಾಗಿ ಅವರತ್ತಲೂ ಹೋಗುತ್ತವೆ. ಸಾರ್ವಜನಿಕ ಸ್ಥಳಗಳಲ್ಲಿ ರೊಮಾನ್ಸ್ ಮಾಡುವ ಗೀಳಿಗೆ ಸಹನಾ ವಿರೋಧಿಯೇ. ಅದನ್ನು ಅವನಲ್ಲೂ ಹೇಳಿದ್ದಳು. ಅವನೂ "ಥೂ! ಸಂಯಮವಿಲ್ಲದ ಪಶುಗಳು!. ನನಗೂ ಅದೆಲ್ಲ ಕಂಡರೆ ವಾಕರಿಕೆ!" ಅಂದಿದ್ದ. ಈ ಜೋಡಿ ಅತಿರೇಕವಾಗಿಯೇನೂ ನಡೆದುಕೊಳ್ಳುತ್ತಿಲ್ಲ. ಅವನು ಕೇವಲ ಅವಳ ಭುಜ ಬಳಸಿದ್ದಾನೆ ಅಷ್ಟೇ. ಅವರ ಸ್ಥಳದಲ್ಲಿ ತನ್ನನ್ನೂ, ತನ್ನ ಹುಡುಗನನ್ನೂ ಕಲ್ಪಿಸಿಕೊಂಡು ನಸು ನಕ್ಕಳು ಸಹನಾ.

"ಪುಟ್ಟಾ, ಈ ತರಹ ನಾವು ಭೇಟಿಯಾಗುತ್ತಿರುವುದು ಸರಿಯೇ ಅಂತ ಅಳುಕೂ ಆಗುತ್ತಿದೆ. ಆದರೆ, ಒಮ್ಮೆ ನಿನ್ನನ್ನು ಕಾಣುವ ಹಂಬಲದಲ್ಲಿ, ಮಾತಾಡಿಕೊಳ್ಳುವ ಸಂಭ್ರಮದಲ್ಲಿ ಆ ಭಯ ಹಿಂದೆ ಸರಿಯುತ್ತಿದೆ. ಅಣ್ಣ, ತಂಗಿಜತೆಗಿದ್ದರೂ ಆಡಿಕೊಳ್ಳುವವರಿದ್ದಾರೆ. ಕೇವಲ ನನ್ನ ಹುಚ್ಚಿಗಾಗಿ ನೀನು ಬರಬೇಡ ಪುಟ್ಟಾ. ನೀನು ಜಾಣೆ. ಸಹಜವಾಗಿ ಹೆಣ್ಣು ಮಕ್ಕಳಿಗೆ ಗಂಡು ಮಕ್ಕಳಿಗಿಂತ ಹೆಚ್ಚಾಗಿ ದೂರಾಲೋಚನೆ ಇರುತ್ತದೆ. ಮದುವೆಯಾಗಲಿರುವ ನಾವು ಹೆದರಬೇಕಾಗಿಲ್ಲ ನಿಜ, ಆದರೂ ಗುಸುಗುಸು ಹರಡಿದರೆ ನಮ್ಮನ್ನು ಪ್ರೀತಿಸುವ ಜೀವಗಳಿಗೂ ನೋವಾಗುತ್ತದಲ್ಲ?" ಅಂದಿದ್ದ.

ಯಾರಿಗಿದೆ ಇಂಥ ಹುಡುಗನನ್ನು ಪಡೆಯುವ ಅದೃಷ್ಟ?. ಅವನ ಭಯಕ್ಕೆ ಅವಳೇ, "ಯಾರಿಗೂ ಗೊತ್ತಾಗದಿದ್ದರೆ ಆಯ್ತಲ್ಲ?. ಬರಬೇಡ ಅಂದರೆ ಬರಲ್ಲ, ನಿಮಗೆ ಸಮಸ್ಯೆಯಾಗಬಾರದು" ಅಂದಿದ್ದಳು. ಅದಕ್ಕಾತ, "ಏ! ನಾನು ತುಂಬಾ ಮೂಡೀ. ಹಾಗಾಗಿ ಫ್ರೆಂಡ್ಸ್ ಅಂತ ತಿರುಗಾಟ ಇಲ್ಲವೇಇಲ್ಲ. ನನ್ನ ಅಭಿರುಚಿ, ನನ್ನ ಸ್ವಭಾವಗಳೇ ನಿನ್ನಲ್ಲಿರುವುದು ನನಗೊಂದು ತರಹ ತೃಪ್ತಿ. ನಾವು ಯಾರಿಗಾಗಿಯೋ ಬದುಕು ನಡೆಸುವುದು ಬೇಡ, ನಮಗಾಗಿಯೇ, ನಮ್ಮಿಷ್ಟದಂತೆ ಬಾಳೋಣ. ದುಡ್ಡಿನ ಕೊರತೆಯಂತೂ ಎಂದೂ ಬರದು. ಮದುವೆಯಾದ ಮೇಲೆ ನಾನು ನಿನ್ನ ಗಂಡ ಅಲ್ಲ, ಆತ್ಮೀಯ ಗೆಳೆಯ...." ಅವನು ಮಾತಾಡುತ್ತಿದ್ದರೆ ಸಹನಾ ಅದರಲ್ಲೇ ಮುಳುಗಿ ಹೋಗುತ್ತಾಳೆ.

"ನಾವು ತಪ್ಪು ಮಾಡ್ತಿಲ್ವಲ್ಲ ಪುಟ್ಟಾ?. ನೀನು ಲೋಕ ನಿಂದೆಗೆ ಗುರಿಯಾದರೆ ನಾನು ಜೀವಮಾನ ತನಕ ಕೊರಗಬೇಕಾದೀತು. ನಾವು ತಪ್ಪು ಮಾಡದಿದ್ದರೂ ಹೊರಗಿನ ಸಮಾಜಕ್ಕೆ ಅದು ಅರ್ಥವಾಗುವುದಿಲ್ಲವಲ್ಲ?" ಅಂತ ಅವನು ಇಂದು ಚಿಂತೆ ತೋಡಿಕೊಂಡಾಗ ಇವಳೇ ಅವನಿಗೆ ಧೈರ್ಯ ಹೇಳಿದ್ದಳು. ಅವನಿಗೆ ಇಷ್ಟವಾದ ನೀಲಿ ಡ್ರೆಸ್ಸನ್ನೇ ಹಾಕಿಕೊಂಡಿದ್ದಾಳೆ.

ಅವಳ ಕೀಟಲೆಯ ಬುದ್ಧಿ ಇನ್ನೊಂದು ಐಡಿಯಾ ಹಾಕಿಕೊಂಡಿದೆ. ಬೆಂಗಳೂರು ನೆಲದಲ್ಲಿ ಹೆಜ್ಜೆಯಿಡುವ ಮೊದಲು ಬುರ್ಖಾ ಹಾಕಿಕೊಂಡು ಅವನು ತನ್ನನ್ನು ನೋಡುವ ಮೊದಲು ತಾನು ಅವನು ತನ್ನನ್ನು ಕಾಣಲು ಎಷ್ಟು ಕಾತರನಾಗಿದ್ದಾನೆ ಅಂತ ನೋಡಿ ಆನಂದಿಸಬೇಕು. ಅವನ ಶ್ರೀಮತಿ ಯಾಗುವವಳು ಹಣದ ಲೆಕ್ಕ ಹಾಕಿದರೆ ಹೇಗೆ ಅಂತ ಸಾವಿರದ ಐನೂರು ಕೊಟ್ಟು ಬುರ್ಖಾ ಖರೀದಿಸಿದ್ದಾಳೆ.

"ನೀನು ನಿನ್ನ ಅರಮನೆಯನ್ನು ಒಮ್ಮೆ ನೋಡಿ ಹೋಗು ಪುಟ್ಟಾ. ಆಮೇಲೆ ಹೇಗೂ ಕೈ ಹಿಡಿದು ಕರೆದುಕೊಂಡು ಬರುತ್ತೇನಲ್ಲ?. ಕನ್ಯಾರ್ಥಿಯಾಗಿ ಬಂದು ನನ್ನ ಹುಡುಗಿಯನ್ನು ವರಿಸುತ್ತೇನಲ್ಲ?" ಅಂದವನ ಬಗ್ಗೆ ಅಪಾರಗೌರವ ಉಕ್ಕಿ ಹರಿಯುತ್ತಿದೆ. ಕದ್ದು ಅವನನ್ನು ಭೇಟಿಯಾಗಲು ಹೋಗುತ್ತಿರುವ ಥ್ರಿಲ್ ಅನುಭವಿಸುತ್ತಿದ್ದಾಳೆ ಅವಳು. ತಾನು ತಪ್ಪು ಮಾಡುತ್ತಿಲ್ಲ ಅಂತ ಅವಳ ಬಗ್ಗೆ ಅವಳಿಗೆ ನಂಬಿಕೆಯಿದೆ.

"ಮೆಜೆಸ್ಟಿಕ್ಕಲ್ಲಿ ಇಳಿಪುಟ್ಟಾ, ಕಾರು ತೆಗೆದುಕೊಂಡು ಬರುತ್ತೇನೆ, ನನ್ನ ಮಹಾರಾಣಿಯಾಗುವವರಿಗಾಗಿ. ನಮ್ಮ ಮುಂದಿನ ಭವಿಷ್ಯದ ಬಗ್ಗೆ ಮಾತಾಡಿಕೊಳ್ಳೋಣ" ಅಂದಿದ್ದಾನೆ. "ಮಹಾರಾಜರುಗಳು ಹಲವಾರು ಪತ್ನಿಯರನ್ನು ಅಂತಃಪುರದಲ್ಲಿ ಇಟ್ಟುಕೊಳ್ಳುತ್ತಿದ್ದರಂತೆ!" ಅಂತ ಮೊಬೈಲಲ್ಲೇ ಅವನಿಗೆ ಕೀಟಲೆ ಮಾಡ್ತಾ, 'ಬೇಜಾರಾಯ್ತಾ?' ಅಂತ ಕೇಳಿದಾಗ, "ಏ! ಕೀಟಲೆ, ತಂಟೆ, ತುಂಟ ತನಗೆ ಬಹಳ ಇಷ್ಟ. ನಾನೂ ಅಂಥವನೇ!" ಅಂದ.

ಬುರ್ಖಾದೊಳಗಿಂದ ಹತ್ತು ನಿಮಿಷಗಳಾದರೂ ಅವನನ್ನು ಆಟವಾಡಿಸಿ ಮತ್ತೆಎದುರು ನಿಂತು ಖುಷಿ ಕೊಡಬೇಕು!.

ಮೊಬೈಲ್ ಸ್ಕ್ರೀನ್ ಮೇಲೆ 'ಬೆಂಗಳೂರು' ಅಂತ ಕಾಣಿಸುತ್ತಿದೆ. ವಾಹ್! ಬಂದೇ ಬಿಡ್ತಾ ಬೆಂಗಳೂರು?. ಅವನ ನೆನಪಲ್ಲಿ ಗಂಟೆಗಳು ನಿಮಿಷಗಳೇ ಆದವೇನೋ!. ಥಟ್ಟನೆದ್ದು ಬುರ್ಖಾ ಧರಿಸಿಕೊಂಡು ಸಿದ್ಧಳಾದಳು ಸಹನಾ. 'ಮೆಜೆಸ್ಟಿಕ್ ಸ್ಟಾಪಲ್ಲೇ ಮೆಟ್ರೋ ನಿಲ್ದಾಣವಿದೆ, ಅಲ್ಲಿಗೇನೇ ಬಾಪುಟ್ಟಾ' ಅಂದಿದ್ದಾನೆ. ಕಂಡಕ್ಟರ್ 'ಮೆಜೆಸ್ಟಿಕ್' 'ಮೆಜೆಸ್ಟಿಕ್'ಎಂದೊಡನೆ ಉದ್ವೇಗ, ಕಾತರ ತುಂಬಿಕೊಂಡು ಕೆಳಗಿಳಿದಳು. ಹೌದು, ಮೆಟ್ರೋಬೋರ್ಡ್ರು ಕಾಣಿಸ್ತಿದೆ!. ಇಷ್ಟೊಂದು ಜನರಲ್ಲಿ ಆತ ಯಾರೋ?. ಆತನೂ ತಾನು ಯಾರು ಅಂತ ಹುಡುಕುತ್ತಿರಬಹುದು!. ಇಲ್ಲ, "ಎಲ್ಲಿಯ ತನಕ ಬಂದಿದ್ದಿ ಪುಟ್ಟಾ?" ಅಂತ ಆತ ಕೇಳಿದಾಗ ''ಹೊಳೆನರಸಿಪುರ' ಅಂತ  ಸುಳ್ಳು ಹೇಳಿದ್ದಾಳೆ!. "ಓಹ್! ಬೇಗಬಾಪುಟ್ಟಾ, ಕಾಯ್ತಿರ್ತೇನೆ" ಅಂದಿದ್ದಾನೆ.

ಮೆಲ್ಲನೆ ಒಂದು ಮೂಲೆಗೆ ಸರಿದು ಅವನಿಗೆ ಕಾಲ್ ಮಾಡಿದಳು, ಓರೆಗಣ್ಣಿಂದ ಕಾಲ್ ರಿಸೀವ್ ಯಾರು ಮಾಡುತ್ತಿದ್ದಾರೆ ಅಂತ ನೋಡ್ತಾ. ನೀಲಿ ಟೀ ಶರ್ಟ್ ಧರಿಸಿದ ವ್ಯಕ್ತಿಯೊಬ್ಬ ಕಾಲ್ ರಿಸೀವ್ ಮಾಡಿದ್ದು ಕಾಣಿಸಿತು. ಅವನಾ? ಅವನ ಹಾಗೆ ಕಾಣ್ತಿಲ್ಲವಲ್ಲ?. "ಹಲೋಪುಟ್ಟಾ.. "ಓಹ್! ಅವನೇ!. 'ಹೂಂ' ಅಂದಳು ಅವಳು. 'ಎಲ್ಲಿದ್ದಿಯಾ?'. 'ಇಲ್ಲೇ ಇದ್ದೇನೆ' ಅನ್ನಲೇ? ಬೇಡ!. 'ಬೆಂಗಳೂರಿನ ಹೆಸರುಗಳು ಕಾಣ್ತಿವೆ' ಅಂದಳು. "ಹುಶಾರಾಗಿ ಬಾ ಪುಟ್ಟಾ!" "ಹೂಂ".

ಅವನೇ!. ಬುರ್ಖಾದೊಳಗಿಂದ ಅವನನ್ನೇ ಗಮನಿಸುತ್ತಾ ನಿಂತಳು. ಅವನ ಜತೆಇನ್ನೊಬ್ಬನಿದ್ದಾನೆ. ಅವರಿಬ್ಬರೂ ಮಾತಾಡಿಕೊಳ್ತಾ ಇವಳಿದ್ದ ಕಡೆಗೇನೇ ಬಂದರು. ಬಿಗಿಯಾದಟೀ ಶರ್ಟ್ ಮತ್ತು ಬಿಗಿ ಜೀನ್ಸ್ ಧರಿಸಿದ್ದ ಧಡೂತಿ ಹುಡುಗಿಯೊಬ್ಬಳನ್ನು ನೋಡ್ತಾ ಏನೋ ಮಾತಾಡಿಕೊಂಡು ನಕ್ಕರು. ಇದ್ಯಾಕೋ ಹಿಡಿಸಲಿಲ್ಲ ಸಹನಾಗೆ. ಹೆಂಗಸರ ಬಗ್ಗೆ ಅಪಾರ ಗೌರವ ತೋರಿಸುವ ಅವನು ಇವನೇನಾ?. ಆ ಹುಡುಗಿ ಕಣ್ಮರೆಯಾಗುವವರೆಗೂ ನೋಡ್ತಾ ನಿಂತಿದ್ದರು ಅವರಿಬ್ಬರೂ!. ಗುಸುಗುಸು ಮಾತಾಡಿಕೊಂಡು ನಗು ಬೇರೆ!

ಅವನು ತಾನೊಬ್ಬನೇ ಬರುವುದು ಅಂದಿದ್ದನಲ್ಲ?. ಇವನು ಅವನಲ್ಲವೇ ಹಾಗಾದರೆ?. ಹುಡುಗಿಯೊಬ್ಬಳನ್ನು ಈ ತರಹ ಅಸಹ್ಯಕರವಾಗಿ ನೋಡುವ, ಆಡುವ ಇವರು ಯಾರೋ ಬೇರೆಯೇ ಇರಬಹುದು. ಇವಳು ಮತ್ತೆ ಬದಿಗೆ ಸರಿದು ಇಬ್ಬರು ಗಂಡಸರ ಹಿಂದೆ ನಿಂತು ಮತ್ತೆ ಅವನಿಗೆ ಕರೆ ಮಾಡಿದಳು, ನೀಲಿ ಟೀ ಶರ್ಟಿನವನನ್ನೇ ನೋಡ್ತಾ. ರಿಂಗಾಯಿತು, ಅವನೇ ರಿಸೀವ್ ಮಾಡಿದ್ದಾನೆ!. ಹತ್ತಿರವೇ ಇದ್ದಾನೆ!."ಪುಟ್ಟಾ, ತಲುಪಿದ್ಯಾ?" ಅವನು ಮಾತಾಡುವುದು ಹತ್ತಿರವೇ ಇರುವ ಅವಳಿಗೆ ಕೇಳಿಸುತ್ತಿದೆ!. ಅವಳು ಉತ್ತರಿಸಲಿಲ್ಲ. "ಹಲೋಪುಟ್ಟಾ..." ಅಂತ ಮತ್ತೊಮ್ಮೆ ಹೇಳ್ತಾ ಪಕ್ಕದವನಿಗೆ ಕಣ್ಣು ಹೊಡೆದದ್ದನ್ನೂ ನೋಡಿದಳು  ಅವಳು!

ಪಕ್ಕದವನು 'ಮಾತಾಡು' ಅನ್ನುವಂತೆ ನಗ್ತಾಸನ್ನೆ ಮಾಡಿದ. 'ಪುಟ್ಟಾ.... ಬಂದ್ಯಾಪುಟ್ಟಾ?" ಮಾತಾಡುತ್ತಲೇ ಪಕ್ಕದವನನ್ನು ನೋಡಿ ಮತ್ತೆ ಕಣ್ಣು ಹೊಡೆದ. 'ಹೂಂ' ಅಂದಳು ಅವಳು, ಬಹಳ ಮೆಲ್ಲನೆ. ಅವನು ಪಕ್ಕದವನ ಕಿವಿಯಲ್ಲಿ ಏನೋ ಹೇಳಿದ್ದು, ಇಬ್ಬರೂ ಕೆಟ್ಟದಾಗಿ ನಕ್ಕದ್ದು ಎದುರಿಗೇನೇ ಕಾಣಿಸುತ್ತಿದೆ ಅವಳಿಗೆ. ಮುಂದೆ?. ಅವಳು ಬೆವೆತುಬಿಟ್ಟಳು! ಇಬ್ಬರೂ ಹೊರಗಿನಿಂದ ಒಳಗೆ ಬರುತ್ತಿರುವವರನ್ನು ಗಮನಿಸುತ್ತಿರುವುದನ್ನೂ ನೋಡಿದಳು.

ಯೋಚಿಸುವುದನ್ನೇ ಬಿಟ್ಟ ಅವಳು ಬುರ್ಖಾ ಸರಿ ಮಾಡಿಕೊಳ್ಳುತ್ತಾ ಧಡಧಡನೆ ದೌಡಾಯಿಸಿ ರಸ್ತೆಗೆ ಬಂದಳು. ಆಟೋ ಒಂದನ್ನು ಏರಿ, 'ಬಸ್‌ಸ್ಟೇಂಡ್' ಅಂದಳು. ರೊಂಯ್ಯನೆ ಬಂದು ಬಸ್ ನಿಲ್ದಾಣಕ್ಕೆ ತಲುಪಿಸಿ ತೊಂಭತ್ತು ರೂಪಾಯಿ ಅಂದವನಿಗೆ ನೂರರ ನೋಟನ್ನೇ ಕೊಟ್ಟು ಮಂಗಳೂರು ಅಂತ ಬರೆದಿದ್ದ ಬಸ್ಸನ್ನೇರಿ ಕುಳಿತಳು. ಬಸ್ ಐದು ನಿಮಿಷದಲ್ಲಿ ಹೊರಡುತ್ತದೆ ಅಂತ ಗೊತ್ತಾಯ್ತು. ಸಮಯ ಎಷ್ಟು ನಿಧಾನವಾಗಿ ಹೋಗ್ತಿದೆಯಪ್ಪಾ!. ಒಮ್ಮೆ ಬಸ್ಸು ಹೊರಟರೆ ಸಾಕಿತ್ತು.

ಮೊಬೈಲ್ ರಿಂಗಾಯ್ತು. 'ಹಲೋ' ಅಂತ ಇವಳು ಹೇಳುವಮೊದಲೇ, 'ಎಲ್ಲಿದ್ದಿಪುಟ್ಟಾ?" ಅದೇ ಜೇನುಧ್ವನಿ!. 'ಒಳಗಿದ್ದೇನೆ' ಅಂತಮಾತ್ರ ಹೇಳಿ ಅವನ ನಂಬರನ್ನು ಬ್ಲೋಕ್‌ಮಾಡಿದಳು. ಬಸ್ಸು ಹೊರಟಿತು. ಮತ್ತೆಕರೆ!.ಅಮ್ಮ!."ಹಲೋಅಮ್ಮಾ!". "ಹಲೋಪುಟ್ಟಾ!,ರಜೆಯಂತಲ್ಲ?. ಯಾವಾಗ ಬರ್ತಿ?"ಅಮ್ಮನ ಅಕ್ಕರೆಯ ಸ್ವರ!. ಆಹಾ! ಈ ಪ್ರೀತಿಗೆ ಮೋಸ ಮಾಡಿ ತಾನು ಏನಾಗಲಿದ್ದೆ!? .ಭಾರವಾದ ಉಸಿರು ಬಿಟ್ಟಳು ಸಹನಾ.

"ಬರ್ತೇನಮ್ಮ. ನಮ್ಮ ಪಿಜಿಯಲ್ಲಿ ಅನಿತಾ ಅಂತೊಬ್ಬಳು ಹುಡುಗಿ ಇದ್ದಾಳೆ, ನನ್ನ ಬೆಸ್ಟ್ ಫ್ರೆಂಡ್ ಅವಳು. ಅವಳಿಗೆ ಅಮ್ಮ ಇಲ್ಲ. ಅವಳು ಮನೆಗೆ ಹೋಗುವುದಿಲ್ಲವಂತೆ, ನಮ್ಮನೆಗೆ ಕರೆದುಕೊಂಡು ಬರಲಾಮ್ಮ?". "ಕರ್ಕೊಂಡು ಬಾಪುಟ್ಟಾ. ಯಾರಿಗೆ ಯಾರೂ ಇಲ್ಲ. ಇರುವಷ್ಟು ದಿನ ಎಲ್ಲರ ಜತೆ ಚೆನ್ನಾಗಿರೋಣ. ಪ್ರೀತಿ, ವಿಶ್ವಾಸ ಇದ್ದ ಕಡೆ ಎಲ್ಲರೂ ನಮ್ಮವರೇ!" ಅಂದರು ಅಮ್ಮ!.

ತನ್ನ ಬಗ್ಗೆ ಎಲ್ಲವನ್ನೂ ತಿಳಿದಿರುವ ಅನಿತಾಳಿಗೆ ಕರೆ ಮಾಡಿ, "ಅನಿ, ಮಂಗಳೂರಿನತ್ತ ಹೊರಟಿದ್ದೇನೆ. ಯಾಕೆ, ಏನಾಯ್ತು ಅಂತೆಲ್ಲ ಬಂದ 'ಕೂಡಲೇ ತಿಳಿಸುತ್ತೇನೆ ನಿನಗೆ. ಹಾಂ! ನಾನು ಬರುವಷ್ಟರಲ್ಲಿ ನೀನು ರೆಡಿಯಾಗಿರು. ಪಿಜಿ ಆಂಟಿಗೂ ಹೇಳು. ನಾವು ನಮ್ಮ ಮನೆಗೆ ಹೋಗೋಣ. ಅಮ್ಮ ನಿನ್ನನ್ನು ಕರೆದುಕೊಂಡು ಬರಲು ಹೇಳಿದ್ದಾಳೆ..." ಅಂದಳು.

ಅಬ್ಬಾ! ಈ ಅಮ್ಮ ಎಷ್ಟು ಒಳ್ಳೆಯವರು!. "ಯಾವಾಗ ನೋಡು, ಮೊಬೈಲಲ್ಲಿ ಮುಳುಗಿರುತ್ತಿ ನೀನು!. ನಾವು ಯಾರೂ ಕಾಣುತ್ತಿಲ್ಲ ನಿನಗೆ! . ಒಳ್ಳೆಯದಲ್ಲ ಅದು. ಎಲ್ಲಕ್ಕೂ ಮಿತಿಬೇಕು.."ಅಂತ ಅಮ್ಮ ಗದರಿದಾಗ, "ನಿಂಗೇನು ಗೊತ್ತಮ್ಮ?. ನಾನೇನು ಮಗೂನಾ?" ಅಂತರೇಗುತ್ತಿದ್ದೆನಲ್ಲ?. ಈಗ?. "ಅಮ್ಮಾ, ನೀನನ್ನ ಮುದ್ದು ಅಮ್ಮ! ಚಂದದ ಅಮ್ಮ!" ಅಂತಲಲ್ಲೆಗರೆದಳು ಫೋನಲ್ಲೇ. "ಏನೇ ಪುಟ್ಟಾ ,ಅದು? ಭಾರೀ ಖುಷಿಯಲ್ಲಿರುವ ಹಾಗಿದೆ?" ಅಮ್ಮನ ಅದೇ ಸಮಾಧಾನದ ಮಾತುಗಳು. ಬೆವರುತ್ತಿದೆ ಅಂತ ತೆಗೆದಿರಿಸಿದ್ದ ಬುರ್ಖಾವನ್ನೇ ತಬ್ಬಿಕೊಂಡು "ನನ್ನಮ್ಮ ಅಲ್ವಾ?" ಅಂತಮುದ್ದು ಗರೆದಳು ಸಹನಾ.

●

# ಮುಟ್ಟಿನ ಅವಧಿಯಲ್ಲಿ ಚೆನ್ನಾಗಿ ನಿದ್ರೆ ಮಾಡಬೇಕೇ? ಹಾಗಾದರೆ ಹೀಗೆ ಮಾಡಿ

✍ **ಡಾ. ಸುಮನಾ ರಾವ್**

ಋತುಚಕ್ರವೆನ್ನುವುದು ಮಹಿಳೆಯಲ್ಲಿ ಕಂಡು ಬರುವಂತಹ ಪ್ರಕೃತಿ ಸಹಜ ಕ್ರಿಯೆ ಆಗಿದೆ. ಋತು ಚಕ್ರದ ಸಂದರ್ಭದಲ್ಲಿ ಮಹಿಳೆಯ ದೇಹದಿಂದ ರಕ್ತವು ಹೊರಗೆ ಹೋಗುವುದು. ಋತುಚಕ್ರದ ವೇಳೆ ಹೆಚ್ಚಾಗಿ ಮಹಿಳೆಯರಿಗೆ ಹಲವಾರು ರೀತಿಯ ಸಮಸ್ಯೆಗಳು ಕಾಡುವುದು. ತಲೆನೋವು, ಸೆಳೆತ, ಸ್ತನಗಳ ನೋವು, ಅತಿಯಾದ ರಕ್ತಸ್ರಾವ ಹೀಗೆ ಇನ್ನು ಹಲವಾರು.

ಈ ಸಮಸ್ಯೆಗಳು ಒಬ್ಬರಿಂದ ಭಿನ್ನವಾಗಿರುವುದು. ಇದರಿಂದಾಗಿ ಋತುಚಕ್ರ ಎನುವುದು ತುಂಬಾ ನೋವಿನ ವಿಚಾರವಾಗಿದೆ. ಋತುಚಕ್ರದ 'ಐದು ದಿನಗಳಲ್ಲಿ ಸರಿಯಾಗಿ ನಿದ್ರೆ ಕೂಡ ಬರುವುದಿಲ್ಲ. ಹೀಗಾಗಿ ನಿದ್ರಾಹೀನತೆಯು ಕಾಡುವುದು ಮತ್ತು ಕಣ್ಣುಗಳ ಕೆಳಗಡೆ ಕಪ್ಪು ಕಲೆಗಳು ಮೂಡುವುದು. ಶೇ. 30ರಷ್ಟು ಅಮೇರಿಕಾದ ಮಹಿಳೆಯರು ಪ್ರತೀ ತಿಂಗಳು ಋತುಚಕ್ರದ ವೇಳೆ ನಿದ್ರಾಹೀನತೆಗೆ ಒಳಗಾಗುವರು ಎಂದು ಅಧ್ಯಯನಗಳು ಹೇಳಿವೆ. ಈ ಲೇಖನದಲ್ಲಿ ಋತುಚಕ್ರದ ವೇಳೆ ಕಂಡು ಬರುವಂತಹ ಕೆಲವೊಂದು ಸಮಸ್ಯೆಗಳ ನಿವಾರಣೆ ಮಾಡುವುದು ಹೇಗೆ ಮತ್ತು ಸರಿಯಾಗಿ ನಿದ್ರೆ ಮಾಡಲು ವಿಧಾನಗಳನ್ನು ಸೂಚಿಸಲಾಗಿದೆ.

ಋತುಚಕ್ರದ ವೇಳೆ ನಿಮ್ಮ ದೇಹಕ್ಕೆ ಏನಾಗುವುದು? 25-35 ದಿನಗಳಲ್ಲಿ ಪ್ರತೀ ಸಲ ಋತುಚಕ್ರವು ಸಂಭವಿಸುವುದು. ಅದೇ ಆರೋಗ್ಯವಂತ ಮಹಿಳೆಗೆ ಪ್ರತೀ 28 ದಿನಕ್ಕೆ ಸರಿಯಾಗಿ ಋತು ಚಕ್ರವು ಬರುವುದು. ಇದನ್ನು ನಾವು ಋತು ಚಕ್ರದ ಆವರ್ತನ ಎಂದು ಹೇಳಬಹುದು. ಪ್ರಮುಖ ನಾಲ್ಕು ಹಾರ್ಮೋನುಗಳಲ್ಲಿ ಆಗುವಂತಹ ವ್ಯತ್ಯಾಸದಿಂದಾಗಿ ಋತು ಚಕ್ರದ ಆವರ್ತನದಲ್ಲಿ ಬದಲಾವಣೆ ಮತ್ತು ಮಹಿಳೆಯು ಕೆಲವೊಂದು ಸಮಸ್ಯೆಗಳನ್ನು ಈ ಸಮಯದಲ್ಲಿ ಎದುರಿಸಬೇಕಾಗುತ್ತದೆ. ಈ ಆವರ್ತನವು ಋತುಚಕ್ರದ ಮೊದಲ ದಿನದಿಂದಲೇ ಆರಂಭವಾಗುವುದು. ಈ ವೇಳೆ ಈಸ್ಟ್ರೋಜನ್ ಮತ್ತು ಪ್ರೊಜೆಸ್ಟರಾನ್ ಮಟ್ಟವು ತುಂಬಾ ಕಡಿಮೆ ಇರುವುದು. ಫಾಲಿಕ್ಯುಲರ್ ಹಂತ (2-13ನೇ ದಿನ) ಈಸ್ಟ್ರೋಜನ್ ಏರಿಕೆ ಆಗುವುದು ಮತ್ತುಇದರಿಂದ ಅಂಡೋತ್ಪತ್ತಿಯು ಆಗುವುದು (14ನೇ ದಿನ), ಅಂಡೋತ್ಪತ್ತಿಯ ಬಳಿಕದ ಹಂತ ಲೂಟಿಯಲ್ ಹಂತ (15-28 ದಿನ)ದ ವೇಳೆಯಲ್ಲಿ ಪ್ರೊಜೆಸ್ಟರಾನ್ ಮಟ್ಟವು ಹೆಚ್ಚಾಗುವುದು. ಇದರಿಂದ ಹಾರ್ಮೋನು ಮಟ್ಟವು ಕಡಿಮೆಯಾಗುವುದು ಮತ್ತು ಮತ್ತೆ ಋತುಚಕ್ರದ ಹೊಸ ಆವರ್ತನಕ್ಕೆ ಇದು ತಯಾರಾಗುವುದು.

**ಬಳಲಿಕೆ ಉಂಟಾಗುವುದುಯಾಕೆ?**

ಪ್ರೊಜೆ ಸ್ಟರಾನ್‌ನಿಂದಾಗಿ ದೇಹದಲ್ಲಿ ತಾಪಮಾನ ಮಟ್ಟ ಮತ್ತು ನಿಶ್ಯಕ್ತಿಯು ಹೆಚ್ಚಾಗುವುದು. ಇದು ಋತುಚಕ್ರಕ್ಕೆ ಮೊದಲು ಕಂಡು ಬರುವಂತಹ ತುಂಬಾ ಸಾಮಾನ್ಯವಾಗಿರುವಂತಹ ಸಮಸ್ಯೆ ಆಗಿದೆ. ಇದರಿಂದಾಗಿ ನೀವು ತುಂಬಾ ಆಯಾಸಗೊಳ್ಳುವಿರಿ ಮತ್ತು ಋತುಚಕ್ರಕ್ಕೆ ಮೊದಲಿನ ಕೆಲವು ದಿನಗಳ ವೇಳೆ ನಿಮಗೆ ಸರಿಯಾಗಿ ನಿದ್ರೆ ಮಾಡಲು ಸಾಧ್ಯವಾಗದು. ದೇಹದಲ್ಲಿನ ತಾಪಮಾನವು ಕಡಿಮೆ ಆದರೆ ಆಗ ಇದು ನಿದ್ರಿಸಲು ನೀಡುವಂತಹ ಸೂಚನೆಯಾಗಿರುವುದು. ಹಾರ್ಮೋನುಗಳು ಸಾಮಾನ್ಯಕ್ಕಿಂತ ಹೆಚ್ಚಿನ ತಾಪಮಾನವನ್ನು ದೇಹದಲ್ಲಿ ಉಂಟು ಮಾಡಿದರೆ ಆಗ ನೈಸರ್ಗಿಕವಾಗಿ ಮಲಗುವುದು ತುಂಬಾ ಕಷ್ಟವಾಗುವುದು.

**ನಿದ್ರೆ ಮಾಡಲುತುಂಬಾ ಕಷ್ಟವಾಗುವುದು!**

ಋತುಚಕ್ರಕ್ಕೆ ಮೊದಲಿನ ಕೆಲವು ದಿನಗಳಲ್ಲಿ ಮಹಿಳೆಯರಿಗೆ ನಿದ್ರೆ ಮಾಡಲು ತುಂಬಾ ಕಷ್ಟವಾಗುವುದು. ತುಂಬಾ ಆಸಕ್ತಿದಾಯಕ ವಿಚಾರವೆಂದರೆ ಪ್ರಯೋಗಾಲಯಗಳು ಕಂಡುಕೊಂಡಿರುವಂತಹ ವಿಚಾರದ ಪ್ರಕಾರ ಋತುಚಕ್ರದ ಆವರ್ತನದ ವೇಳೆ ನಿದ್ರೆಯ ಸಂಯೋಜನೆಯು ಸ್ಥಿರವಾಗಿರುವುದು. ಅದಾಗ್ಯೂ ಗರ್ಭನಿರೋಧಕ ಮಾತ್ರೆಗಳನ್ನು ಸೇವಿಸುವುವಂತಹ ಮಹಿಳೆಯರು ಗಾಢನಿದ್ರೆ ಬರುವುದು ಕಡಿಮೆ. ಋತುಚಕ್ರದ ವೇಳೆ ಕಾಣಿಸಿಕೊಳ್ಳುವಂತಹ ಹಾರ್ಮೋನುಗಳಿಗಿಂತ ಕೃತಕ ಹಾರ್ಮೋನುಗಳು ನಿದ್ರೆಯ ಮೇಲೆ ತುಂಬಾ ಪ್ರಭಾವ ಬೀರುವುದು. ಗರ್ಭ ನಿರೋಧಕ ಮಾತ್ರೆಗಳನ್ನು ತೆಗೆದುಕೊಳ್ಳುವಂತಹ ಮಹಿಳೆಯರು ಬೇರೆ ಮಹಿಳೆಯರಷ್ಟು ನಿದ್ರೆಯ ಸಮಸ್ಯೆಗೆ ಒಳಗಾಗಿರುವುದು ಕಾಣಿಸುತ್ತಿಲ್ಲ.

ಪಿಎಂಎಸ್, ಪಿಎಂಡಿಡಿ ಮತ್ತು ನಿದ್ರೆ ಶೇ. 80ರಷ್ಟು ಮಹಿಳೆಯರಲ್ಲಿ ಋತುಚಕ್ರಕ್ಕೆ ಮೊದಲಿನ ಕೆಲವೊಂದು ಸಮಸ್ಯೆಗಳು ಕಾಣಿಸಿಕೊಳ್ಳುವುದು ಎಂದು ಹೇಳಲಾಗುತ್ತದೆ (ಎಲ್ಲವೂ ನಿದ್ರೆಯ ಮೇಲೆ ಪ್ರಭಾವ ಬೀರಿಲ್ಲ). ಶೇ. 3-8 ರಷ್ಟು ಆರೋಗ್ಯವಂತ ಮಹಿಳೆಯರು ತುಂಬಾ ತೀವ್ರವಾಗಿರುವಂತಹ ಸಮಸ್ಯೆಯಾಗಿರುವ ಋತುಚಕ್ರ ಪೂರ್ವ ಇರುಸು ಮುರುಸಿನ ಅಸ್ವಸ್ಥತೆ (ಪಿಎಂಡಿಡಿ)ಗೆ ಒಳಗಾಗುವರು. ಇದರ ಕೆಲವೊಂದು ಲಕ್ಷಣಗಳು ಏನೆಂದರೆ ಅದು ನಿದ್ರೆಗೆ ಭಂಗವಾಗುವುದು. ಅತಿ ನಿದ್ರೆ ಅಥವಾ ನಿದ್ರಾಹೀನತೆ, ರಾತ್ರಿ ವೇಳೆ ದೇಹದ ತಾಪಮಾನವು ಅಧಿಕವಾಗುವುದು. ಅದೇ ರೀತಿಯಾಗಿ ಚಳಿ ಮತ್ತು ಬೆವರು ಬರುವುದು. ಇಂತಹ ಸಮಸ್ಯೆಗಳು ಕೂಡ ಪಿಎಂಎಸ್ ಅಥವಾ ಪಿಎಂಡಿಡಿ ತೀವ್ರವಾಗಿ ಇರುವಂತಹ ಮಹಿಳೆಯರಲ್ಲಿ ಕಂಡುಬಂದಿದೆ. ಇದೆಲ್ಲಾ ಸಮಸ್ಯೆಗಳು ರಾತ್ರಿ ವೇಳೆ ಸರಿಯಾಗಿ ನಿದ್ರೆ ಮಾಡಲು ತುಂಬಾ ಸಮಸ್ಯೆಯನ್ನು ಉಂಟು ಮಾಡಲಿದೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ.

ಲಕ್ಷಣಗಳನ್ನು ನಿರ್ವಹಿಸಲು ಕೆಲವು ಸಲಹೆಗಳು ಮಧ್ಯಮದಿಂದ ತೀವ್ರ ರೀತಿಯ ಋತುಚಕ್ರದ ಸಮಸ್ಯೆಗಳನ್ನು ಎದುರಿಸುವಂತಹ ಮಹಿಳೆಯರಿಗೆ ಇಲ್ಲಿ ಪರಿಹಾರವನ್ನು ಕಂಡು ಹಿಡಿಯಲಾಗಿದೆ. ಋತುಚಕ್ರದ ವೇಳೆ ಉಂಟಾಗುವಂತಹ ಕೆಲವೊಂದು ಸಮಸ್ಯೆಗಳ ನಿರ್ವಹಣೆ ಮಾಡಲು ಇಲ್ಲಿ ಕೆಲವೊಂದು ಸಲಹೆಗಳನ್ನು ನೀಡಲಾಗಿದೆ.

**ಯೋಗ:** ಋತುಚಕ್ರದ ವೇಳೆ ಕಂಡು ಬರುವಂತಹ ಸ್ನಾಯು ಸೆಳೆತದ ನೋವಿಗೆ ಯೋಗದಿಂದ ಮುಕ್ತಿ ನೀಡಬಹುದು ಎಂದು ಅಧ್ಯಯನಗಳು ಹೇಳಿವೆ. ಮಲಗುವ ಮೊದಲು ಕೆಲವೊಂದು ಸಣ್ಣ ಮಟ್ಟದಯೋಗ ಮಾಡುವುದರಿಂದದೇ ಹಕ್ಕೆ ಆರಾಅಮದ ನಿದ್ರೆ ಸಿಗುವುದು ಎಂದು ಹೇಳಲಾಗುತ್ತದೆ.

**ಬಿಸಿ ಚಿಕಿತ್ಸೆ:** ನಿಮಗೆ ಸೆಳೆತ ಅಥವಾ ಬೆನ್ನಿನ ಕೆಳಭಾಗದಲ್ಲಿ ನೋವು ಕಾಣಿಸಿಕೊಳ್ಳುತ್ತಾರೆ ಇದ್ದರೆ ಆಗ ನೀವು ಬಿಸಿ ನೀರಿನ ಬಾಟಲಿಯಿಂದ ಮಸಾಜ್ ಮಾಡಿಕೊಂಡು ಸ್ವಲ್ಪ ಮಟ್ಟಿನ ಆರಾಮ ಪಡೆಯಿರಿ.

ಭ್ರೂಣದ ಭಂಗಿಯಲ್ಲಿ ಮಲಗಿ ನೀವು ಬೆನ್ನು ಅಥವಾ ಹೊಟ್ಟೆಯ ಮೇಳೆ ಮಲಗುತ್ತಿದ್ದರೆ ಆಗ ನೀವು ಭ್ರೂಣದ ರೀತಿಯಲ್ಲಿ ಮಲಗಿ. ನೀವು ಎರಡು ಕೈಗಳನ್ನು ಕಾಲುಗಳ ನಡುವೆ ಇಟ್ಟುಕೊಂಡು ಅಡ್ಡ ಮಲಗಿ. ಈ ರೀತಿ ಮಲಗುವುದರಿಂದ ಹೊಟ್ಟೆಯ ಸ್ನಾಯುಗಳ ಮೇಲಿನ ಒತ್ತಡ ಕಡಿಮೆ ಆಗುವುದು ಮತ್ತು ಸ್ನಾಯು ಸೆಳೆತದಿಂಡಾಗಿ ಆಗುವಂತಹ ಒತ್ತಡದಿಂದ ಆರಾಮ ನೀಡುವುದು.

ಮಲಗುವ ಕೋಣೆಯು ತಂಪಾಗಿರಲಿ, ಋತುಚಕ್ರದ ಸಮಯದಲ್ಲಿ ಕೆಲವು ಹಾರ್ಮೋನುಗಳಿಂಡಾಗಿ ದೇಹದಲ್ಲಿನ ತಾಪಮಾನವು ಹೆಚ್ಚಾಗುತ್ತ ಹೋಗುವುದು. ಇದರಿಂದ ನಿದ್ರೆ ಮಾಡಲು ನಿಮಗೆ ತುಂಬಾ ಕಷ್ಟವಾಗಬಹ್ದು. ಇದರಿಂದಾಗಿ ನೀವು ಮಲಗುವ ಕೋಣೆಯ ತಾಪಮಾನವನ್ನು 60–68 ಡಿಗ್ರಿ ತನಕ ಇಟ್ಟು, ಮಲಗಲು ತಣ್ಣಗಿನ ವಾತಾವರಣ ನಿರ್ಮಾಣ ಮಾಡಿ.

ಮಲಗುವ ಮೊದಲು ಒತ್ತಡ ನಿವಾರಿಸಿ ಋತುಚಕ್ರಕ್ಕೆ ಮೊದಲಿನ ಕೆಲವು ದಿನಗಳಲ್ಲಿ ಮಹಿಳೆಯರಲ್ಲಿ ಮನಸ್ಥಿತ್ ಬದಲಾವಣೆಯು ಕಂಡು ಬರುವುದು. ನೀವು ರಾತ್ರಿಯಿಡಿ ಒತ್ತಡದಲ್ಲೇ ಇದ್ದರೆ ಆಗ ನೀವು ತುಂಬಾ ಶಾಂತ ಸಂಗೀತ ಕೇಳಬಹುದು ಅಥವಾ ಬಿಸಿ ನೀರಿನ ಸ್ನಾನ ಮಾಡಬಹುದು ಅಥವ ಮಲಗುವ ಮೊದಲು ಆರಾಮ ನೀಡುವಂತಹ ಸ್ನಾನ ಮಾಡಬಹುದು.

ಸ್ವಚ್ಛ ನಿದ್ರೆಯ ಪರಿಪಾಠ ಬೆಳೆಸಿಕೊಳ್ಳಿ ಋತುಚಕ್ರದ ಸಮಯದಲ್ಲಿ ನಿಮಗೆ ನಿದ್ರಿಸಲು ತುಂಬಾ ಸಮಸ್ಯೆಯಾಗುತ್ತಿದ್ದರೆ ಆಗ ನೀವು ಸ್ವಚ್ಛ ನಿದ್ರೆಯನ್ನು ಅಭ್ಯಾಸ ಮಾಡಿಕೊಂಡರೆ ಅದರಿಂದ ನೆರವು ಸಿಗುವುದು. ನಿದ್ರೆಗೆ ಮೊದಲು ನೀವು ಮೊಬೈಲ್ ಅಥವಾ ಟಿವಿ ನೋಡಬೇಕು. ರಾತ್ರಿ ವೇಳೆ ನೀವು ಸರಿಯಾದ ಕ್ರಮ ಪಾಲಿಸಿ ಮತ್ತು ನಿದ್ರಿಸುವ ಸಮಯವು ಯಾವಾಗಲೂ ಒಂದೇ ಆಗಿರಲಿ.

ನಿದ್ರೆಯ ಡೈರಿ ರೂಪಿಸಿ: ಋತುಚಕ್ರದ ಸಮಯದಲ್ಲಿ ನಿಮ್ಮ ನಿದ್ರೆಯ ಮೇಲೆ ಯಾವರೀತಿಯ ಪರಿಣಾಮ ಬೀರುವುದು ಎಂದು ನಿಮಗೆ ದೊಡ್ಡ ಚಿಂತೆಯಾಗುತ್ತಲಿದ್ದರೆ ಆಗ ನೀವು ತಿಂಗಳ ಕಾಲ ಒಂದು ಡೈರಿ ಬರೆದುಕೊಳ್ಳಿ. ಕೆಲವೊಂದು ಲಕ್ಷಣಗಳಿಂದಾಗಿ ನಿಮ್ಮ ಗುಣಮಟ್ಟದ ನಿದ್ರೆಯ ಮೇಲೆ ಯಾವ ರೀತಿಯ ಪರಿಣಾಮ ಬೀರಿದೆ ಎಂದು ನೀವು ಈ ಡೈರಿ ನೋಡಿಕೊಂಡು ತಿಳಿಯಬಹುದು. ಋತುಚಕ್ರದ ವೇಳೆ ಕಾಣಿಸಿಕೊಳ್ಳುವ ಸಮಸ್ಯೆಯಿಂದಾಗಿ ನಿಮಗೆ ತುಂಬಾ ತೊಂದರೆಯಾಗುತ್ತಲಿದ್ದರೆ ಮತ್ತು ಇದು ನಿಮ್ಮ ಗುಣಮಟ್ಟದ ಜೀವನದ ಮೇಲೆ ಪರಿಣಾಮ ಬೀರುತ್ತಿದ್ದರೆ ಆಗ ನೀವು ವೈದ್ಯರನ್ನು ಭೇಟಿಯಾಗಿ ಅವರಿಂದ ಸರಿಯಾದ ಚಿಕಿತ್ಸೆ ಪಡೆದುಕೊಳ್ಳುವುದು ಮುಖ್ಯ. ●

ಒಂದು ಊರು ಇತ್ತು. ಅಲ್ಲೊಬ್ಬ ಜಮೀನುದಾರನಿದ್ದ. ವಾರ್ಷಿಕ ಪೌಂಡು ಉತ್ಪತ್ತಿ ಬರುವ ಭೂಮಿ ಅವನಿಗಿತ್ತು. ಬೇಸಾಯದ ಕೆಲಸಗಳನ್ನೆಲ್ಲ ಆಳುಗಳೇ ಮಾಡುತ್ತಿದ್ದರು. ಸ್ವತಃ ದುಡಿವ ಅಭ್ಯಾಸ ಅವನಿಗಿರಲಿಲ್ಲ.

'ಆಳು ಮಾಡಿದ್ದು ಹಾಳು' ಅನ್ನುತ್ತಾರಲ್ಲ? ಹಾಗೇ ಆಯಿತು. ಜಮೀನುದಾರನ ಬೇಸಾಯ ಸರಿಯಾಗಿ ನಡೆಯಲಿಲ್ಲ. ಒಳ್ಳೆಯ ಫಸಲು ಅವನಿಗೆ ಬರಲಿಲ್ಲ. ವೆಚ್ಚ ಹೆಚ್ಚುತ್ತ ಹೋಯಿತು. ಆದಾಯ ಕಡಿಮೆಯಾಯಿತು. ಜಮೀನುದಾರ ಸಾಲದಲ್ಲಿ ಬಿದ್ದ. ಕೊನೆಗೆ ಜಮೀನಿನ ಅರ್ಧಭಾಗವನ್ನು ಮಾರಿ, ಸಾಲ ಸಂದಾಯ ಮಾಡಿದ.

ಇನ್ನೂ ಅರ್ಧಭಾಗ ಉಳಿದಿದೆಯಲ್ಲ? ಅದರ ಬೇಸಾಯ ನಡೆಯಬೇಕಷ್ಟೇ? ಆಮೀನುದಾರ ಅದರ ಬಗೆಗೆ ಯೋಚಿಸಿದ. ಕಟ್ಟ ಕಡೆಗೆ ಅದನ್ನು 20 ವರುಷಗಳ ಅವಧಿಗೆಂದು ಗೇಣಿಗ ಕೊಟ್ಟ.

ಕೆಲವು ಕಾಲ ಕಳೆಯಿತು. ಒಂದು ದಿನ ಗೇಣಿದಾರ ಭೂಮಾಲಿಕನ ಮನೆಗೆ ಬಂದ. ಅವರೆಗಿನ ಗೇಣಿಯನ್ನೆಲ್ಲ ಸಂದಾಯ ಮಾಡಿದ ಮಾತುಕತೆಯ ಮಧ್ಯೆ ಧನಿಯು ಆ ಹೊಲಗಳನ್ನು ಮಾರಲಿರುವನೇ ಎಂದು ವಿಚಾರಿಸಿದ. ಭೂಮಾಲಿಕನಿಗೆ ಆಶ್ಚರ್ಯವಾಯಿತು. ಆ ಬಡರೈತನಲ್ಲಿ ಅಷ್ಟು ಹಣ ಹೇಗೆ ಬಂತು ಎಂದು ತಿಳಿಯದಾಯಿತು. ನನ್ನ ಎಲ್ಲ ಹೊಲಗಳ ಸಾಗುವಳಿ ನಡೆಸಿದರೂ ನನಗೆ ಲಾಭ ಸಿಗಲಿಲ್ಲ. ನನ್ನಲ್ಲಿ ಚಿಕ್ಕಾಸೂ ಉಳಿಯಲಿಲ್ಲ. ನಿನಗಿದ್ದ ಭೂಮಿಯ ಅರ್ಧಭಾಗದಷ್ಟು ಹೊಲಗಳಲ್ಲಿ ಮಾತ್ರ ನೀನು ಬೇಸಾಯ ಮಾಡಿದೆ. ಆದರೂ ನೀನಿಂದು ಗೇಣಿ ಸಂದಾಯ ಮಾಡಿದ್ದೀಯಾ. ಈಗ ಹೊಲಗಳನ್ನು ಕೊಳ್ಳಲಿಕ್ಕೂ ಸಿದ್ಧನಿದ್ದಿಯಾ. ನಿನ್ನಲ್ಲಿ ಅಷ್ಟು ಹಣ ಹೇಗೆ ಬಂತು ಹೇಳೂ?' ಎಂದು ಅವನು ರೈತನನ್ನು ಪ್ರಶ್ನಿಸಿದ.

ಆಮೀನುದಾರನ ಮಾತು ಕೇಳಿ ರೈತನಿಗೆ ನಗು ಬಂತು. ನಗುತ್ತಲೇ ಅವನು ಉತ್ತರ ಕೊಟ್ಟ, "ನೀವು ಸ್ವತಃ ಶ್ರಮಪಟ್ಟು ದುಡಿಯಲಿಲ್ಲ. ಕೆಲಸದಲ್ಲಿ ಸೋಮಾರಿತನ ತೋರಿಸಿದರಿ. ಹೋಗಿ ಕೆಲಸ ಮಾಡಿ' ಎಂದು ಆಳುಗಳನ್ನು ಅಟ್ಟಿದಿರಿ. ನೀವು ಮಾಡಬೇಕಾದ ಕೆಲಸಕ್ಕೆ ಬೇರೆಯವರನ್ನೇ ಕಳಿಸಿದರಿ. ಆದಕಾರಣ ನಿಮ್ಮ ಬಳಿಗೆ ಬರಬೇಕಾಗಿದ್ದ ಸಂಪತ್ತು ನಿಮ್ಮಿಂದ ದೂರ ಹೋಯಿತು. ನಾನು ನಿಮ್ಮ ಹಾಗೆ ಮಾಡಲಿಲ್ಲ. ಕೆಲಸಕ್ಕೆ ನಾನೇ ಬಂದೆ. ಬೆವರು ಸುರಿಸಿ ನಾನೇ ದುಡಿದೆ. ಅದರಿಂದಾಗಿ ಒಳ್ಳೆಯ ಫಸಲು ನನಗೆ ಬಂದಿತು ಸಮ್ಪತ್ತು ಕೈ ಸೇರಿತು. ನಿಮ್ಮ ಕೆಲಸ ಮಾಡಲು ಆಳನ್ನೇ ಹೋಗು ಅಂದಾಗ ಸಂಪತ್ತನೇ ಹೋಗು' ಅಂದಂತಾಯಿತು. ಕೆಲಸಕ್ಕೆ ನಾನೇ ಬಂದು ಶ್ರಮಪಟ್ಟಾಗ ಸಂಪತ್ತನ್ನೆ 'ಬಾ' ಎಂದು ಕರೆದಂತಾಯಿತು.

ರೈತನ ಮಾತು ಕೇಳಿದ ಜಮೀನುದಾರನಿಗೆ ತನ್ನ ತಪ್ಪಿನ ಅರಿವಾಯಿತು. ಇನ್ನೆಂದಿಗೂ ಅಂಥ ತಪ್ಪು ಮಾಡಬಾರದೆಂಬ ನಿರ್ಧಾರ ಮನದಲ್ಲಿ ಮೂಡಿತು.

*(ಸಂಗ್ರಹ)*

# ಸಾಧನೆಯಿಂದಲೇ ಸೇಡು ತೀರಿಸಿಕೊಂಡ ರತನ್ ಟಾಟಾ

ಭಾರಿ ನಿರೀಕ್ಷೆ ಇಟ್ಟುಕೊಂಡು ಬಿಡುಗಡೆ ಮಾಡಿದ್ದ ಇಂಡಿಕಾ ಕಾರಿಗೆ ಸೂಕ್ತ ಪ್ರತಿಕ್ರಿಯೆ ಕಂಡುಬಾರದ್ದರಿಂದ ಬೇಸರಗೊಂಡಿದ್ದ ಟಾಟಾ ಸಮೂಹ ಕಂಪನಿಗಳ ಮಾಲೀಕ ರತನ್ ಟಾಟಾ, ಕಾರು ಉದ್ದಿಮೆಯನ್ನು ಅಮೆರಿಕದ ಫೋರ್ಡ್ ಕಂಪನಿಗೆ ಮಾರಾಟ ಮಾಡಲು ಮುಂದಾಗಿದ್ದರು.

ರತನ್ ಟಾಟಾ ಪರವಾಗಿ ವೈ. ವಿ .ಚವಾಣ್ ರಾಷ್ಟ್ರೀಯ ಪುರಸ್ಕಾರ ಸ್ವೀಕರಿಸಿದ ಟಾಟಾ ಕ್ಯಾಪಿಟಲ್ ಮುಖ್ಯಸ್ಥ ಪ್ರವೀಣ್ ಕಾಡ್ಲೆ ಅವರು ಈ ಕುತೂಹಲಕರ ವಿಚಾರಗಳನ್ನು ಬಹಿರಂಗಪಡಿಸಿದ್ದಾರೆ. ಫೋರ್ಡ್ ಕಂಪನಿಯ ಜತೆ ಮಾತುಕತೆ ನಡೆಸಿದ ತಂಡದಲ್ಲಿ ಪ್ರವೀಣ್ ಅವರೂ ಇದ್ದರು.

1998 ರಲ್ಲಿ ಟಾಟಾ ಕಂಪನಿ ಇಂಡಿಕಾ ಕಾರನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿತ್ತು. ಆದರೆ ನಿರೀಕ್ಷಿಸಿದ್ದಷ್ಟು ಪ್ರತಿಕ್ರಿಯೆ ಬಾರಲಿಲ್ಲ. ಅದಾದ ಒಂದೇ ವರ್ಷದಲ್ಲಿ ಪ್ರಯಾಣಿಕ ಕಾರು ಉದ್ದಿಮೆಯನ್ನು ಮಾರಾಟ ಮಾಡುವಂತೆ ಕೆಲವು ವ್ಯಕ್ತಿಗಳು ರತನ್ ಟಾಟಾ ಅವರಿಗೆ ಸಲಹೆ ಮಾಡಿದರು. ಅದನ್ನು ಖರೀದಿಸುವ ಸಂಬಂಧ ಮಾತುಕತೆ ನಡೆಸಲು ಫೋರ್ಡ್ ಕಂಪನಿಯ ಅಧಿಕಾರಿಗಳು ಮುಂಬೈಗೆ ಆಗಮಿಸಿದ್ದರು.

ನಂತರ ಅಮೆರಿಕದ ಡೆಟ್ರಾಯಿಟ್‌ಗೆ ಮಾತು ಕೇಳಿ ಬರುವಂತೆ ಫೋರ್ಡ್ ಕಂಪನಿಯಿಂದ ಬುಲಾವ್ ಬಂತು. ರತನ್ ಟಾಟಾ ಅವರ ಜತೆ ನಾವೆಲ್ಲಾ ಅಧಿಕಾರಿಗಳು ಹೋಗಿದ್ದೆವು. ಮೂರು ತಾಸಿನ ವೇಳೆ ನಿಮಗೆ ಏನೇನೂ ಗೊತ್ತಿಲ್ಲ. ಆದರೂ ಪ್ರಯಾಣಿಕ ಕಾರು ಉದ್ದಿಮೆಯನ್ನೇಕೆ ಆರಂಬಿಸಿದಿರಿ? ಹೋಗಲಿ, ನಿಮ್ಮ ಕಾರು ಉದ್ದಿಮೆಯನ್ನು ಖರೀದಿಸಿ ಉಪಕಾರ ಮಾಡುತ್ತೇವೆ ಬಿಡಿ ಎಂದು ಫೋರ್ಡ್ ಕಂಪನಿ ಅಧಿಕಾರಿಗಳು ಹೀಯಾಳಿಸಿದ್ದರು.

ಈ ಮಾತುಗಳಿಂದ ರತನ್ ಟಾಟಾ ಅವರು ತೀವ್ರ ನೊಂದುಕೊಂಡರು. ಡೆಟ್ರಾಯಿಟ್‌ನಿಂದ ನ್ಯೂಯಾರ್ಕ್ ನಡುವಿನ 90 ನಿಮಿಷಗಳ ವಿಮಾನ ಪ್ರಯಾಣದುದ್ದಕ್ಕೂ ಅವರು ಮಂಕಾಗಿಯೇ ಇದ್ದರು.

ವಿಮಾನದಲ್ಲೇ ನಿರ್ಧರಿಸುತ್ತಾರೆ. ಏನಾಗುತ್ತೋ, ಹೇಗೆ ಮಾಡ್ತೀವೋ ಗೊತ್ತಿಲ್ಲ. ಟಾಟಾದವರು ಕಾರುಗಳ ಮಾರುಕಟ್ಟೆಯಲ್ಲೂ ಸೂಪರ್ ಸ್ಟಾರ್ ಅಂತ ಪ್ರಪಂಚಕ್ಕೆ ತೋರಿಸಬೇಕು ಎಂದು..!

ಟಾಟಾ ಇಂಡಿಕಾವನ್ನು ಹೇಗೆಲ್ಲಾ ಸಾಧ್ಯವೋ ಅಷ್ಟು ಸುಲಭವಾಗಿ ಜನರಿಗೆ ತಲುಪಿಸೋ ಕಾರ್ಯ ಶುರುವಾಗುತ್ತದೆ! ಅತ್ಯಂತ ಸ್ಪರ್ಧಾತ್ಮಕ ಬೆಲೆ ಟಾಟಾ ಕಾರುಗ್ಳು ಸಿಗುತ್ತೆ ಅನ್ನೋ ಹಾಗೆ ಬ್ರ್ಯಾಂಡಿಂಗ್ ಶುರುಮಾಡುತ್ತಾರೆ! ಖಸಲ್ ಕಾರುಗಳ ಮಾರುಕಟ್ಟೇಯಲ್ಲಿ ಟಾಟಾ ಇಂಡಿಕಾ ಕ್ರಾಂತಿಯನ್ನೇ ಮಾಡುತ್ತದೆ...! ನೋಡುನೋಡುತ್ತಿದ್ದಂತೆ ಇಂಡಿಯಾದ ಒಂದು ಟ್ರಾಫಿಕ್ ಸಿಗ್ನಲಲ್ಲಿ ಕನಿಷ್ಠ ಮೂರು ನಾಲ್ಕು ಇಂಡಿಕಾ ಕಾಣ ತೊಡಗುತ್ತವೆ...! ಆ ನಂತರ ಟಾಟಾದ ಬೇರೆ ಬೇರೆ ಕಾರುಗಳೂ ಸೂಪರ್ ಹಿಟ್...! ಇಂಡಿಗೋ ಸಫಾರಿ ಸೇರಿದಂತೆ ಹಲವು ಕಾರುಗಳು ಮನೆ ಮನೆ ತಲಪುತ್ತವೆ. .!

ಟಾಟಾ ಕಾರುಗಳು ಬೆಳೆದ ಪರಿ ನೋಡಿ ಜಗತ್ತಿನ ಮಹಾನ್ ಆಟೋಮೊಬೈಲ್ ಕಂಪನಿಗಳೆಲ್ಲಾ ಬೆರಗಾಗಿ ಹೋಗುತ್ತೆ....!

ಸುಮಾರು 2008ನೇ ಇಸ್ವಿ ಬರುವಷ್ಟರಲ್ಲಿ ಅದೇ ಫೋರ್ಡ್ ಕಂಪನಿಯ ಜಾಗ್ವಾರ್ ಹಾಗೂ ಲ್ಯಾಂಡ್ ರೋವರ್ ಬ್ರ್ಯಾಂಡ್‌ಗಳನ್ನು ಟಾಟಾ ಕಂಪನಿ ಖರೀದಿಸಿತು. ಇದಕ್ಕಾಗಿ ಫೋರ್ಡ್ ಕಂಪನಿಯ ಮುಖ್ಯಸ್ಥ ಬಿಲ್ ಫೋರ್ಡ್ ಅವರು ಟಾಟಾ ಅವರಿಗೆ ಧನ್ಯಾಅದ ಸಲ್ಲಿಸಿದರು. ಈ ಎರಡೂ ಬ್ರ್ಯಾಂಡ್ ಅಳನ್ನು ಖರೀದಿಸಿ ನಮಗೆ ದೊಡ್ಡ ಉಪಕಾರ ಮಾಡಿಕೊಟ್ಟಿರಿ ಎಂಬ ಮಾತುಗಳನ್ನು ಆಡಿದರು ಎಂದು ಪ್ರವೀಣ್ ಕಾಡ್ಲೆ ಅವರು ವಿವರಿಸುತ್ತಿದ್ದಂತೆ ಸಮಾರಂಭದಲ್ಲಿ ನೆರೆದಿದ್ದವರೆಲ್ಲಾ ಸೂರು ಕಿತ್ತುಹೋಗುವಂತೆ ಚಪ್ಪಾಳೆ ಬಾರಿಸಿದರು.

*(ಸಂಗ್ರಹ)*

*****

ನಮಗೆ ನಾಣ್ಯ ಸಿರಿವಂತಿಕೆ ಎಲ್ಲ ತುಂಬಿತ್ತು. ಸುಖ ಜೀವನ ಇತ್ತು ಅಂದು ಆದಾಗ್ಗೆ ಡಾಕ್ಟರ್ ಅವನ್ ಕರದ್ರು ಒಳಗೆ ಹೋಗಿ ಒಳಗೆ ಹೋಗಿ ಕೂಟ ಡಾಕ್ಟರ್ ಹೇಳಿದ್ರು ನಿಮ್ಮ ತಾಯಿಗೆ ಕ್ಯಾನ್ಸರ್ ಇದೆ ಇನ್ನೂ ಉಳಿಯಲ್ಲ ಅಂದ್ರು ಎಷ್ಟು ಖರ್ಚು ಮಾಡೀದ್ರು ಅಷ್ಟೇ ಸುಮ್ಮನೆ ಇರೋವಷ್ಟು ದಿನ ಚೆನ್ನಾಗಿ ನೋಡ್ಕೊಳ್ಳಿ ಅಂತ ಹೇಳಿದ್ರು ಜೀವ ಕಿತ್ತು ಬರ್ತಿತ್ತು ಕೂತು ಅಳಬೇಕು ಅನ್ನಿಸಿತ್ತು. ಗಂಟಲು ಹಿಡಿದಿತ್ತು. ಮನ ಮಸನವಾಗೋಯ್ತು ಹಿಂದೆ ಇಂದ ಯಾರೋ ಹೆಗಲ ಮೇಲೆ ಕೈ ಇಟ್ಟಂತೆ ಭಾಸವಾಯ್ತು ನೋಡಿದ್ರೆ ಅವನ ಮುದಿ ತಾಯಿ ಮಗಾ ಏನಾಯ್ತು ಯಾಕ್ ಅಳ್ತಿದೀಯ ಅಂದ್ರು ಅವನಿಗಾಗಿದ್ದ ಆ ಸಂಕಟ ಕರುಳೇ ಕಿತ್ತು ಬರ್ತಿದ್ದ ವೇದನೆ ಎಲ್ಲ ಅಡಗಿಸಿ ಕಣ್ಣೀರು ಒರಸಿಕೊಳ್ಳುತ್ತಾ ಏನಿಲ್ಲ ಅಮ್ಮ ಕಣ್ಣಲ್ಲಿ ಕಸ ಬಿತ್ತು ಅಂದ ಯಾವ ಸಂಗತಿಯ ಅರಿಯದ ತಾಯಿ ಹಣ್ಣು ಊದುತ್ತಾ ಮನೆಕಡೆಗೆ ಹೋಗೋಣ ನಡಿ ಮಗಾ ಅಂದ್ರು ವಿಧಿಯಾಟ ಯಾರು ಬಲ್ಲರು ತಾಯಿನ ಹೆತ್ತ ಮಗುವಂತೆ ನೋಡ್ಕೊಂಡ ಅವನು ಪೂಜಿಸಿದ ದೇವರುಗಳಿಲ್ಲ ಮಾಡದ ವ್ರತಗಳಿಲ್ಲ ಬಹುಶಃ ಕರುಣೆ ಇಲ್ಲದ ಕಟುಕ ದೇವರಿಗೂ ಕಣ್ಣೀರು ಬಂತು ಅನ್ಸುತ್ತೆ ಕಣ್ಣೀರು ಜೊತೆಗೆ ಮಾತೆ ಕಣ್ಣು ಮುಚ್ಚಿಡು ತಾಯಿ ಇಲ್ಲ ಅಂತ ತಬ್ಬಲಿ ಆದ ಎಷ್ಟೋ ಕ್ಯಾನ್ಸರ್ ಪೀಡಿತರಲ್ಲಿ ಅವನ ತಾಯಿನ ಕಂಡ ದೊಡ್ಡಮಟ್ಟಕ್ಕೆ ಬೆಳೆದ ತನ್ನ ತಾಯಿ ಪರಿಸ್ಥಿತಿ ಯಾರಿಗೂ ಬರಬಾರದು ಅಂತ ಉಚಿತ ಚಿಕಿತ್ಸೆ ವ್ಯವಸ್ಥೆ ರೂಪಿಸಿದ.

*(ಸಂಗ್ರಹ)*

# ಮೈಲಿ ಕಲ್ಲು

(ನೇಸರು ಕಥಾ ಸ್ಪರ್ಧೆಗೆ ಬಂದ ಕಥೆ)

✍ ಮಧು ಕೌಂಡಿನ್ಯ ಎಸ್.

ಚಂದ್ರ ಅನ್ನೆರಡ್ಗಂಟೆ ಡೂಟಿ ಮುಗ್ಸಿ ಒಗೋ ಒತ್ತು. ಆಗೊಂದು ಈಗೊಂದು ಕಾರು, ಕಣ್ಣು ಬಿಟ್ಕೊಂಡು 'ರೊಂಯ್' ಅಂತಾ ಅತ್ತಾಗಿಂದ ಇತ್ತಾಗೆ ಎಳ್ಡಕ್ಕೆ ಬಂದಂಗೆ ಫಾಸ್ಟಾಗಿ ಒಗ್ತಾ ಇತ್ತು. ಅದು ಬುಟ್ರೆ ರಸ್ತೆ ಪೂರಾ ಕಲ್ಕಾಲಿ.. ರಸ್ತೆ ಅಕ್ಕ ಪಕ್ಕದ ಬಯಲು ಕೂಡ ಡಾಂಬರು ಮತ್ತೆ ಕೊಂಡಂತೆ ಕರ್ರಗೆ ಕಾಣ್ತಿತ್ತು. ಅಂಗೆ ಯಾವುದಾದ್ರೂ ಕಾರು ಬಂದಾಗ ಕೈಲಿದ್ದ ಸುತ್ತಿಗೇನ ನೆಲಕ್ಕೆಸೆದು 'ಎಲ್ಡ'ಕ್ಕೆ ಕುಂತಂಗೆ ಕುಂತು ಕೋತಿದ್ದ ಚಿಂಕ್ರ. ಕಾರುಗಳು ಇದ್ಯಾವುದರ ಖಬರಿಲ್ಲದೆ ಸಾಗಿಹೋದ ಮೇಲೆ ಮತ್ತೆ ತನ್ನ ಚೆಡ್ಡಿ ಏರಿಸಿಕೊಂಡು ಸುತ್ತಿಗೆ–ಚಾಕು ಹಿಡಿದು ತನ್ನಕೆಲ್ಸಾ ಸುತು ಅಚ್ಚಂತಿದ ನಿಧಾನ್ಕಕೆ ಚುಮು ಚುಮು ಅಂತ ಬೆಳಕು ಹರಿಯೋದ್ನ ನೋಡಿ ತನ್ನ ಕೆಲ್ಸಾ ನಿಲ್ಸಿ ಹಿಂತಿರುಗಿ ಒಮ್ಮೆ ದೂರದವರೆಗೂ ಕಣ್ಣಾಡ್ಸಿ ತನ್ನ ಕೆಲ್ಸಕ್ಕೆ ತಾನೇ ಕುಸಿ ಪಟ್ಕೊಂಡು 'ಭಪ್ಪಾರೆ ಮಗನೇ' ಅಂದ್ಕೋತಾ ಸುತ್ತಿಗೆ ಚಾಕುಗಳನ್ನು ಬಣ್ಣಗೆಟ್ಟಿದ್ದ ತನ್ನ ಹಳೆ ಬ್ಯಾಗಿಗೆ ತುರುಕಿಕೊಂಡು ಮನೆ ಕಡೆ ಹೊರಟ.

ಹೆಚ್ಚು ಕಮ್ಮಿಕೇರಿಯ ಎಡಸಾಲಿನ ಕೊನೆ ಮನೆನೇ ಚಿಂಕ್ರಂದು. ಚಿಂಕ್ರ ಮನೆ ಹತ್ರ ಒಗಿ ನಿಧಾನಕ್ಕೆ ಬಾಗ್ಲು ತೆಗೆದು ಒಳಗೋದ. ನಿಂಗಮ್ಮ ಮನಿಕ್ಕೊಂಡು ನಿದ್ದೆ ಮಾಡ್ತಿದ್ಲು. ಅವಳ ಕಟವಾಯಿಯಿಂದ ಸುರಿತಿದ್ದ ಜೊಲ್ಲು ಇನ್ನೇನೂ ಸುಕ್ಕು ಕಟ್ಟಿದ ಮುಖದ ಮೇಲೆ ಸುರಿಯತ್ತೆ ಅನ್ನೋವಷ್ಟರಲ್ಲಿ 'ಹಿಸ್ಸಸ್ಸಸ್' ಅಂತ ಅದನ್ನ ಒಳಕ್ಕೆಳಕೊಂಡು 'ಸೂಂಯ್' ಅಂತ ಸದ್ದು ಹೊರಡಿಸುತ್ತಾ ಮಲ್ಗಿದ್ಲು. ಆಗಾಗ ಒಂಚೂರು ಒಳ್ಳಿದಾಗ ಹಗ್ಗದ ಮಂಚದ ಮೂರನೇ ಕಾಲಿನ ಕೆಳಗೆ ಇಟ್ಟಿದ್ದ ಇಟ್ಟಿಗೆ ಚೂರು... ಚೂರು ಚೂರೇ ಉದುರ್ತಾ ಇತ್ತು. ಚಿಂಕ್ರ ಮೆತ್ತಗೆ ಹೋಗಿ ಇಡಗಡೆ ಮೂಲೇಲಿ ಕಮಟುಗಟ್ಟಿದ್ದ ದಿಂಬೊಂದನ್ನು ತಬ್ಬಿ ಮಲಗುವುದರೊಂದಿಗೆ ಬೆಳಗು ಮಾಡ್ದ.

ಅದಾಗಿ ಎಷ್ಟೋ ಹೊತ್ತಾದ ಮ್ಯಾಲೇ ಇದ್ದ ನಿಂಗಮ್ಮ ಪೊರೆ ಬಿದ್ದ ಚಿಕ್ಕಕಣ್ಣನ್ನೇ ದೊಡ್ಡದು ಮಾಡ್ಕೊಂಡು 'ಸಿವಾ'ನ ಕ್ಯಾಲೆಂಡರಿಗೆ ನಮಸ್ಕರಿಸಿ ಎಡಕ್ಕೆತಿರುಗಿ ಸಿಂಬಿ ಹಾವಿನಂತೆ ಸುತ್ಕೊಂಡು ಮಗ್ಗಿದ್ದ 'ಚಿಂಕ್ರ'ನ ನೋಡಿ ನಿಟ್ಟುಸಿರುಬಿಟ್ಟಳು. ಆ ನಿಟ್ಟುಸಿರಿನಲ್ಲಿ ಸಮಾಧಾನ ಮತ್ತು ಬೇಸರಗಳೆರಡು ಸಮ–ಸಮವಾಗಿ ಬೆರೆತಿದ್ದೊ.

ಪಂಚಾಯ್ತಿ ಅದ್ಯಕ್ಸರು ಯೋಳಿ ಕಳ್ಸವ್ರೇ ಅಂತ ತಿಳಿತಿದ್ದಂಗೆ ಬಿರಬಿರನೇಯೆಜ್ಜೆ ಆಕ್ತಾ ಅದ್ಯಕ್ಸರ ಮನೆ ಕಡೆ ಹೊಂಟ ಪೇಂಟರ್ ಎಂಕ್ಟೇಸ. ಅದಾಗಲೇ ಅಲ್ಲಿ ಅಯ್ನೋರು, ಲೇಡಿಟೇಲರ್ ರಾಮ್ಚಂದ್ರು, ಸೌಂಡ್ ಸಿಸ್ಟಮ್ ಗಂಗಾ, ಪುಲ್ಕೇಸಿ ಇಲ್ಲಾ ಸೇರಿದ್ರು. ಅದ್ಯಕ್ಸರ ಎರಡ್ನೇ ಎಂಡ್ರು ಎಲ್ರಿಗೂ ಸಿಲ್ವರ್ ಗೀಲಾಸಲ್ಲಿ ಕಾಪಿ ಕೊಟ್ರು. ಅಷ್ಟರಲ್ಲಿ ಅದ್ಯಕ್ಸರು ಬಂದ್ರು.

"ನೋಡ್ರಪಾ ! ಯಾರೋ ನಂಗಾಗದ ಲೌಡಿ ಮಕ್ಳು ನನ್ನ ಮ್ಯಾಕೆ ಸರ್ಕಾರಕ್ಕೆ ಮೂಗರ್ಜೀ ಬರೆದವ್ರಂತೆ. ಅದ್ಯಕ್ಸ ದುಡ್ಡು ತಿಂದು ಶೌಚಾಲಯ ಕಟ್ಸಿಲ್ಲಾ ಅಂತ .ಈ ಬೇವರ್ಸಿಗಳು ಶೌಚಾಲಯ ಕಟ್ಸಕ್ಕೇ ಒದ್ರೆ ರಾತ್ರೋರಾತ್ರೇ ಇಟ್ಟಿಗೆ, ಸಿಮೆಂಟು, ಬಾಗ್ಲು ಎಲ್ಲಾ ಕದ್ಕೊಂಡ್ ಒಯ್ತಾರೆ. ನಮ್ ಕಷ್ಟ ಯಾರಿಗೇಳಾನಾ? ಅದೇನೂ ಇನ್ಸಪೆಕ್ಸನ್ ಅಂತೆ ಅವ್ರು ಬರೋ ಮುಂಚೆ ಯಾವುದ್ಯಾವುದು ಎಲ್ಲೆಲ್ಲಿ ಇರ್ಬೇಕೋ ಒಸಿ ನೋಡ್ಕಳಿ ದುಡ್ಡಿಗೆ ತಲೆಗೆಡಸ್ಕಬೇಡಿ ಮರ್ವಾದೆ ಮುಖ್ಯ. ಏ ಪೆಂಟ್ರೂ ! ಅದ್ಯಾರಲೇ ಐ.ವೇ ರಸ್ತೆಲೆಲ್ಲಾ ಮೈಲ್ಕಲ್ಲು ಕೆತ್ತಿಕೆತ್ತಿ ಆಳ್ ಮಾಡವ್ರಂತೆ, ಒಸಿ ! ನೋಡಿ.. ಪೂರಾ ಒಸಾದಂತೆ ಸರ್ ಮಾಡ್ಸು.."

"ಅಣ್ಣಾ ! ವುಡುಗ್ರು ಸಿಕ್ತಾ ಇಲ್ಲಾ. ಎಲ್ಲಾ ಪ್ಯಾಟೇಗೋಗಿ ಡ್ರೈವರ್ ಆಗೋವ್ರೆ ಕೆಲವೊಂದ್ ಕಡೆ ಒಸಾ ಕಲ್ಲೇಆಕ್ಬೇಕೂ ಶಾನೆ ಟೇಮ್ ಬೇಕೂ."

"ಯೇ ! ಅಮಿಕ್ಕಂಡ್ ಮಾಡ್ಲಾ ! ನನ್‌ತಿಕನೇ ಗಾಳಿಗೋಯ್ತಾದೆ. ಇವ್ನದು ಬ್ಯಾರೆ ಅದೇನ್ ಮಾಡ್ತೀಯೋ ಮಾಡು ಅವ್ರು ಬರೋದ್ರೊಳ್ಗೆ ಎಲ್ಲಾ ಸರಿಯಿರಬೇಕು ಅಷ್ಟೇ? ಅಂತಂದು ಟವಲ್ ಕೊಡವಿ ಒಳಗೋದ. ಸೇರಿದವರೆಲ್ಲಾ ಮುಖ ಮುಖ ನೋಡ್ಕೊಂಡು ಒರಟ್ರು.

ಅಲ್ಲಿಂದ ಬಂದಾಗಿಂದ ಎಂಕ್ಟೇಸನ ತಲೆತುಂಬಾ ಅದೇಯೇಚ್ನೇ ! ಎಂಗೇ ಮಾಡೋದು ಕಮ್ಮಿ ಅಂದ್ರೂ 15 ಜನಾ ಬೇಕು ಕೆಲ್ಸಾಕ್ಕೆ ಚೆನ್ನ ಬೇರೆ ಮಣ್ಣಾಗೋವ್ನೇ ಅವ್ನಿದಿದ್ರೆ ಆ ಕತೆನೇ ಬೇರೆ ದಿನಕ್ಕೇ ಅರ್ಧ ಕ್ವಾಟ್ರು ಕೊಟ್ಟು ಕಳ್ಸಿದ್ರೇ 10 ಜನಾ ಮಾಡೋಕೆಲ್ಸಾ ಮಾಡೋವ್ನು ಈಗಿನ್ ಕಾಲದ ಐಕ್ಳು ಬಲು ಸೂಕ್ಷ್ಮ . ಬಡ್ಡಿ ಐದಾ ಈಗ್ಲೇ ಸಾಯ್ಬೇಕಿತ್ತಾ ? ಮೈಲ್ಕಲ್ ಪೆಂಟ್ ಮಾಡ್ತಿದ್ದಾಗ ಲಾರಿ ಗುದ್ದಿ..ಸ್ಪಾಟು ! ಮಗಾ ಆವ್ನೇ ! ಅದ್ರೇ ಏನೂ ಸುಖಿಲ್ಲಾ . ಆದ್ರೇ ಈ ಟೇಮಲ್ಲಿ ಯಾರಾದ್ರೂ ಒಂದ್ಕೈ ನೋಡ್ಲೇ ಬೇಕ್ಲು ಚೆನ್ನನ ಮಗನ್ನ ಒಪ್ಸಿದ್ರೆಯೋಚ್ನೇ ಮಾಡ್ತಚೆನ್ನನ ಮನೆ ಕಡೆ ಒಂಟಾ. ತೆರೆದ ಬಾಗಿಲಿನೊಳಗೆ ಕಾಲಿಡುತ್ತಿದ್ದಂತೆ ಎಂಕ್ಟೇಸ

"ಚಿಗವಾ? ಇದ್ದೀಯಾ ? 'ಅಂದವನೇ ಒಳ ಹೊಕ್ಕು ಮನೆಯ ಒಳಗಿನ ಕತ್ತಿಲಿಗೆ ಕಣ್ಣು ಹೊಂದಿಸಿಕೊಳ್ಳತೊಡಗಿದ. ಪುಟ್ಟ ಅಡುಗೆ ಮನೆಯಿಂದ ಎಂಕ್ಟೇಸನ ದನಿ ಕೇಳಿದ ನಿಂಗಮ್ಮ ಅಲ್ಲಿಂದಲೇ 'ಖಿಂವ್ ಖಿಂವ್' ಅಂತ ಕೆಮ್ಮಿ ತನ್ನಿರಿವನ್ನು ತೋರಿಸಿಕೊಂಡು ನಿಧಾನಕ್ಕೆ ಹೊರಬಂದು

"ಅಪ್ನೇ, ಈಗ ಬಂದಾ? ಬಾಪ್ಪಾ ಉಣ್ಣು?" ಅಂದ್ಲು.

"ಹೇ, ಈರ್ಲೀಚಿಗವ್ವಾ, ಶಾನೇ ದಿನ ಆಯ್ತಾಲ್ಲಾ, ಅದ್ಕೇ ಇಚಾರಿಸ್ಕೊಂಡು ಒಗಣಾಂತ ಬಂದೆ"

"ಅಯ್ಯೋ ! ನನ್ನಪ್ಪನೇ ನಿಂಗಾರ ಆ ಒಳ್ಳೇ ಮನ್ಸು ಐತಲ್ಲಾ, ಎತ್ತ ಮಕ್ಳಿಗಿಲ್ದೇ ಇದ್ರೂ ಬಾ ನನ್ನೊಡೆಯಾ, ಕುಂತ್ಕೋ" ಎಂದು 'ಖಿಂವ್‌ಖಿಂವ್' ಎಂದು ಕೆಮ್ಮತೊಡಗಿದ ನಿಂಗಮ್ಮ ಕೊನೆಗೆ ಅಳುವಿನೊಂದಿಗೆ ಕೆಮ್ಮನ್ನು ಪರ್ಯಾವಸಾನಗೊಳಿಸಿ 'ಕುಂಯ್' ಗುಟ್ಟತೊಡಗಿದ್ದಳು. ನಿಧಾನವಾಗಿ ಅಳುವಿನ ಶೃತಿ ಹಿಡಿದು

"ಆ ಯಪ್ಪಾ ಒಗಿದ್ದೇ ಒಗಿದ್ದೂ, ನಮ್ ಮನೇಗೇ ರಾಹು ಬಡ್ದದೇ ತಿನ್ನಕಾಳಿಲ್ಲಾ, ಉಡಕ್ ಬಟ್ಟಿಲ್ಲಾ, ಸಾಯುಮಾ ಅಂದ್ರೇ ಇಸ ತಗಳಾಕ್ಕೂ ಕಾಸಿಲ್ಲಾ."

"ಏ ಬುಡ್ತು ಅನ್ನು ! ಏತರ ಮಾತೂಂತ ಆಡ್ತೀಚಿಗವ್ವಾ? ನಾವೆಲ್ಲಾ ಏನು ಸತ್ತೋಗಿದೀವಾ, ಕಾಳು–ಕಡ್ಡಿ ಬೇಕೂಂತಾ ಒಂದ್ಮಾತು ಯೋಳಿ ಕಳ್ಸಿದ್ರೇ ಆಯ್ತು. ಚೆನ್ನ ನಂಗೆ ಅಪ್ಪಿದ್ದಂಗಿದ್ದ ನೀನೂ ಯಾವತ್ತೂ ನಂಗೆ ಚಿಗವ್ವಾನೇ.ಏನ್ಲಾಚಿಂಕ್ರ?" ಅಂದ ಎಂಕ್ಟೇಸ ಕಣ್ಣಲ್ಲಿ ಚಿಂಕ್ರನ ನಡವಳಿಕೆಗಳನ್ನ ಅಳಿಯತೊಡಗಿದ.

"ನೀಯೇನೊ ಕೊಟ್ಟಿಯಪ್ಪಾ ಅದ್ರೇ ಏಟೂಂತ ನಾವೂ ಕೇಳಕಾಯ್ತದೆ. ಈ ಬೇವರ್ಸಿ ಕತೆ ಇಂಗೆ ನಮ್ ಕಷ್ಟನಾ ಆ ಉಕ್ಕಡಮ್ಮನೇ ತೀರಿಸ್ಬೇಕೂ "

"ಅದಿಕ್ಯಾಕೇಯೋಚ್ನೇ? ಅಪ್ಪನ ಕಲೆ–ಮಗಂಗಿರಕಿಲ್ವಾ? ಅಪ್ಪನ್ ಕೆಲ್ಸಾನೇ ಇವ್ನು ಮಾಡ್ಲೀ ರವಷ್ಟು ಜಾಸ್ತಿನೇ ಕೊಡ್ತಿವೇಳೂ ಸಾಮಾನ್ ಏನ್ ಬೇಕಾ

ಶೆಟ್ರಂಗಡೀಲಿ ತಕ್ಕಳಿ ಲೆಕ್ಕ ನಂದೇ ಇರ್ಲಿ"

"ನನ್ನೊಡೆಯಾ..., ನಿನ್ ಬಾಳ್ ಬಂಗಾರವಾಗಲಿ.ಅಷ್ಟ್ ಮಾಡಿ ಪುಣ್ಯ ಕಟ್ಕಳಪ್ಪಾ" ಅಂದ್ಲು ನಿಂಗಮ್ಮ.

"ಅಪ್ಪಯ್ಯನ್ ತಿಂದಿದ್ ಕೆಲ್ಸಾ ಅದೂ. ನಾನ್ ಹೋಗಾಕಿಲ್ಲಾ" ಅಂದು ಬಿಟ್ಟಚಿಂಕ್ರ. ಒಮ್ಮೆಲೆ ಎದೆ ಮೇಲೆ ಉಕ್ಕಡಮ್ಮನ್ ರಥದ ಗಾಲಿ ಒದಂಗಾಯ್ತು ನಿಂಗಮ್ಮನಿಗೆ, ಮೊದಲು ಸಿಟ್ಟಿನಿಂದ ನಂತರ ನೋವಿನಿಂದ ಮೂಗಿನ ಒಳ್ಳೆಗಳು ಅದುರತೊಡಗಿದವು.

"ನೋಡಪ್ಪಾ ಚಿಂಕ್ರ, ನಿಮ್ಮಪ್ಪಯ್ಯ ಒಗಿದ್ದಿಕ್ಕೆ ನಂಗೂ ದುಃಖ ಇದೆ, ಆದ್ರೇ ಅಂಗಂತ ಕೈ ಕೆಲ್ಸಾನೇ ಮಾಡಾಕುಲ್ಲಾಂದ್ರೇಚಿಗವ್ವಾನ್ನ ಎಂಗ್ ಸಾಕ್ದೀ? ಚಿಗವ್ವಾ ನಾಕ್ ದಿನಾ ಬದುಕ್ಬೇಕಾಂದ್ರಾ ನೀನ್ ಅಪ್ಪಯ್ಯನ್ ಕೆಲ್ಸಾ ಒಪ್ಪಾ ಬೇಕು ನೋಡು ಯೋಳ್ಬೂಟ್ಟಿದ್ದೀನಿ" ಅಂದು ತಾನು ಹೇಳಿದ್ದೇ ಕೊನೇ ನಿರ್ಧಾರವೆಂಬಂತೇ ಕೈ ಕಟ್ಟಿ ಕುಳಿತ ಎಂಕ್ಟೇಸ.

"ನಾನ್ ಸತ್ ಮ್ಯಾಕೇ ಈ ತಿರುಬೋಕಿಗೆ ಬುದ್ಧಿ ಬರಾದು.."ಅಂತಂದು ಲಯಬದ್ಧವಾಗಿ ಅಳತೊಡಗಿದಾಗ ಕಿವಿ ಮೇಲೆ ಕಾದ ಸೀಸ ಬಿದ್ದಂಗಾಯ್ತುಚಿಂಕ್ರನಿಗೆ. ಬರ್ತಾ ಬರ್ತಾ ಅಳು ಇನ್ನೂಜೋರಾಗ್ತ ಇದೆಯೆನ್ನಿಸಿ,

"ಆಯ್ತವ್ವಾ !ಆದ್ರೇರಾತ್ರಿನಾಗೆ ನಾ ಕೆಲ್ಸಾ ಮಾಡದು ಯೋಳ್ ಬುಟ್ಟಿದೀನಿ" ಅಂದಚಿಂಕ್ರ, ಕೈಗೆ ಬಂದದೊನ್ನೆ ಪ್ರಸಾದಕ್ಕೆ ಕಾಗೆ ಪೀಯಾ ಬಿದ್ದಂತಾಗಿ ಒದ್ದಾಡಿದಳು ನಿಂಗಮ್ಮ.ಕಡೆಗೇ ಎಂಕ್ಟೇಸನೇ ಮಧ್ಯೆ ಪ್ರವೇಶಿಸಿ,

"ಆಗ್ಲೇಳೂ ! ಚಿಗವ್ವಾಗೋಸ್ಕರ ಅದೂ ಸೈ ! ನೀ ರಾತ್ರಿ ನಾಗೇಕೆಲ್ಸಾ ಮಾಡು. ಇವತ್ತಿಂದಾನೇ ಮೈಲ್ಕಲ್ಗೇ ಪೆಂಟ್ ಮಾಡೋಕೆಲ್ಸಾ ನೀನು ಮಾಡು, ರಾತ್ರಿ ನಾಗೇ ಓಗಿ ಮಾಡು, ನಾ ಬತ್ತೀನಿ" ಅಂದವನೆ ಕಾಲ್ಕಿತ್ತ. ಶಾನೆ ದಿನಗಳಾದ ಮ್ಯಾಲೇ ನಿಂಗಮ್ಮ ಮಗನ ಕಡೇ ಕುಸಿಯಿಂದ ನೋಡ್ತಾ ಇದ್ಲು. ಆದ್ರೇ ಚಿಂಕ್ರ ಮಾತ್ರ ಪ್ರತಿರಾತ್ರಿ ತಾನು ಹೋಗಿ ಹಾಳುಗೆಡವಿದ ಮೈಲಿಕಲ್ಲುಗಳಿಗೆ ಈಗ;ತಾನೇ ಸರಿ ಮಾಡಿ ಪೆಂಟ್ ಬಳಿಯೋ ಕೆಲ್ಸಾ ತಗ್ಲಾಕೊಳ್ತಲ್ಲಾ ಇನ್ನೊಂದು ವಾರ ಆಗಿದ್ರೇ ಎಲ್ಲಾ ಕಲ್ಲುಗಳನ್ನು ಎಕ್ಕುಟ್ಟಿಸಿ ಬಿಡ್ತಾಯಿದ್ದೇಭೇ ! ಅನ್ಕತಿದ್ದ. ಮೊದಲಿಂದಲೂ ತನ್ನ ಅಪ್ಪನ ಜೊತೆ ಹೋಗಿ ಪೆಂಟ್ ಡಬ್ಬಾಗಳನ್ನ ಹಿಡಿದು ನಿಲ್ಲೋದು ಆರಾಮಾಗಿತ್ತು ಚಿಂಕ್ರಂಗೆ. ಉದ್ದಾನುದ್ದರಸ್ತೆಗೇ ಹಳದಿ, ಬಿಳಿ, ಕಪ್ಪು ಬಣ್ಣಗಳನ್ನು ಕ್ರಮದಂತೆ ಬಳಿದು ಬೆಂಡು-ಬತ್ತಾಸು ತಿನ್ಕೊಂಡು ರಾತ್ರಿ ಮನೆ ಸೇರ್ತಾಯಿದ್ರು ಚಿಂಕ್ರನ ಜಗತ್ತು ಅಂದ್ರೇ ಅಪ್ಪ-ಪೆಂಟೂ-ಬೆಂಡು-ಬತ್ತಾಸು ಮತ್ತು ಚೆಲುವರಾಯ. ಚೆಲುವರಾಯ ಎಸರಿಗೆತಕ್ಕಂತೆ ಚೆಲುವ. ಅತ್ರ ಬಂದ್ರೇ 'ಗಮ್' ಅನ್ನಾದು. ಅದ್ಯಾವುದ್ಯಾವುದೋ ಪುಸ್ತಕನೆಲ್ಲಾ ಓದಿದ್ದ. ನ್ಯೂಡೆಲ್ಲಿ ಪಾರಿನಿಂದೆಲ್ಲಾ ಜನ ಬರ್ತಿದ್ರು. ಅವ್ನು ಎಲ್ರೂನ್ನು ಪ್ರೀತಿಯಿಂದ ಮಾತಾಡ್ಸೋನೂ ಆಗಾಗ ನಮ್ಕೇರಿ ಉಡುಗ್ರನ್ನ ಕರ್ಕ್ಕೋಗಿ ಓಟ್ಲಲ್ಲಿ ಕಾಲಿ ದೋಸೆ ಚಿತ್ರನ್ನಾ ಕೊಡ್ಸುವಾ... ಯಾವಾಗ್ಲೂ ಇವೇಕಾನಂದ್ರು ಹಿಂಗಂದ್ರು, ಹಂಗಂದ್ರು..ಅಂತಿರುವಾ ನಮ್ಮಕ್ಕಯ್ಯ ಮನೇ ಬಿಟ್ಟು ಓಡೋದಾಗ

"ಬ್ಲಡೀ ಸಿಟಿ ಅಟ್ರಾಕ್ಷನ್ ! ಈ ದೇಶದಲ್ಲಿ ಹಳ್ಳಿಗಳೇ ಇರಬಾರ್ದು . ಆಗ ಯಾರೂ ಇಲ್ಲಿಂದ ಎಲ್ಲಿಗೂ ಓಡಿ ಹೋಗಲ್ಲಾ ಗ್ಲೋಬಲ್ಸೇಶನ್ ಆಗ್ಬೇಕೂ, ಈಡೀ ಪ್ರಪಂಚನೇ ಒಂದು ಹಳ್ಳಿ ಆಗ್ಬೇಕೂ" ಅಂತ ಏನೇನೋ ಯೋಳಿದ್ದ. ನಂಗೇನೂ ಅರ್ಥ ಆಗ್ದೇ ಇದ್ರೂ ಇಷ್ಟ ಆಗಿತ್ತು. ಆಮ್ಯಾಕೇ ಅದೆಲ್ಲೋ ಇನ್ನೇನೋ ಓದ್ಬೇಕೂ ಅಂತ ಒಂಟೋದ. ಒಗೋಕೆ ಮುಂಚೆ ಒಂದಿನ ನನ್ನ ಕೂಡಿಸ್ಕೊಂಡು 'ಯಾವ ಯಾವತರ ಮೈಲಿಗಲ್ಲೈತೆ .ಯಾವ ಬಣ್ಣ ಬಳಿದ್ರೇ ಏನ್ ಅರ್ಥಕೊಡತ್ತೆ ಅಂತೆಲ್ಲಾ ಯೋಳಿ ಕೊಟ್ಟಿದ್ದ. ನಂಗೇ ಶಾನೆ ಕುಸಿಯಾಗಿತ್ತು.

ಇದಾಗಿ ಮುಂದಿನ ದಿನಗಳು ವೇಗವಾಗಿ ಸಾಗಿದ್ವು. ಚಿಂಕ್ರಕೆಲ್ಸಾ ಮಾಡ್ತಿದ್ದ. ಎಂಕ್ಟೇಸ ಆಗಾಗ ಬಂದು ಚಿಂಕ್ರನಕೆಲ್ಸಾ ನೋಡಿ 'ಬೇಸ್, ಬೇಸ್' ಎಂದು ಹೋಗ್ತಾ ಇದ್ದ. ಇನ್ಸ್‌ಪೆಕ್ಸನ್ಗೆ ಅದ್ಯಾರೋ ಬರಾಕೆ ಇನ್ನೆಲ್ಡು ದಿನ ಇತ್ತು. ಮನೇಲಿ ಮನ್ಗಿದ್ದಾಗ ಒರಗಡೆಗಲಾಟೆಕೇಣಿಸ್ತಾ ಇತ್ತು. ಓಗಿ ನೋಡುದ್ರೇದಾನವ್ವನ ಮಗ್ಳು ಕಳೆದ ಅಮಾವಾಸ್ಯೆಗೆ ಮುಂಚೆ ಮೈ ನೆರೆದಿದೋಳೋ ಓಡೋಗಿದ್ಲು. ದಾನವ್ವ ಎದೆ-ಎದೆ ಬಡ್ಕೊಂಡು ಅಳ್ತಿತ್ತು. ನಮ್ ಅಕ್ಕಯ್ಯ ಒದಾಗ ಅವ್ವನೂ ಇಂಗೇಯಾ ಅತ್ತಿದ್ದು. ಮಲಗೀ ಕಣ್ಣು ಮುಚ್ಚಿದ್ರೆ ಅದೇ ಮಾತುಗಳು-ಮುಖಗಳು, ದಾನವ್ವ-ಅಕ್ಕಯ್ಯ-ಚೆಲುವರಾಯ-ಗ್ಲೋಬಲೈಸೇಷನ್ನು - "ಈ ಪ್ರಪಂಚನೇ ಒಂದು ಹಳ್ಳಿಯಾಗ್ಬೇಕೂ", ಆಗ ಮಾತ್ರ ಯಾರೂ ಎಲ್ಲಿಗೂ ಓಡೋಗೋದಿಲ್ಲಾ "

ನಿಂಗಮ್ಮ ಎಬ್ಬಿಸಿದಾಗ ಎದ್ದು ಹಿಟ್ಟುಂಡುಚೀಲ, ಪೆಂಟ್ ಡಬ್ಬಾತಗೊಂಡು ಹೊಂಟ ಚಿಂಕ್ರ. ಆಗ್ಲೇ ಬೀದಿ ದೀಪ ಅತ್ಕೊಂಡಿತ್ತು.ನಡೀತಾ ಹೋಗಿ ಹೈ ವೇ ರಸ್ತೆಗೇ ಬಂದು ನಿಂತಒಮ್ಮೆ ಉಸಿರೆಳೆದುಕೊಂಡ. ನಂತರ ಬ್ಯಾಗಿಂದ ಬ್ರಷ್ ತೆಗೆದು ಪೆಂಟ್ ಡಬ್ಬಿ ತೆರೆದವನೇ ಪೆಂಟೂ ಬಳಿಯುತ್ತಾ ಹೋದ ಬಳಿತಾನೇ ಇದ್ದ ಬಳಿತಾನೇ . ಬೆಳಕು ಹರಿಯತೊಡಗಿದಂತೆ ಬ್ರಷ್ಷು, ಡಬ್ಬಾವನ್ನು ಅಲ್ಲೇ ಬಿಟ್ಟವನೇ ಗುಡ್ಡದ ಕಡೆಗೆ ನಡೆಯತೊಡಗಿದ್ದ.ಗುಡ್ಡದ ಮೇಲಿನಿಂದ ನಿಂತು ನೋಡಿದವನಿಗೇ 'ಕಿತ್ತಲೆ-ಬಿಳಿ' ಬಣ್ಣ ಬಳಿಸಿಕೊಂಡ ಮೈಲಿಕಲ್ಲುಗಳು ಸಾಲಾಗಿ ಕಾಣಿಸತೊಡಗಿದ್ದವು. ಹೈ ವೇ ರಸ್ತೆಗಳ ನಿಯಮದಂತೆ 'ಹಳದಿ-ಬಿಳಿ' ಬಣ್ಣ ಬಳಿಯುವ ಬದಲಿಗೆ 'ಕಿತ್ತಳೆ-ಬೆಳಿ' ಬಣ್ಣ ಬಳಿದ ಚಿಂಕ್ರ ರಾಷ್ಟ್ರದ ಹೆದ್ದಾರಿಯನ್ನು ಹಳ್ಳಿಯ ರಸ್ತೆಯನ್ನಾಗಿ ಮಾಡಿಬಿಟ್ಟಿದ್ದ. ●

# Founders Day Celebration at Mysore Association

The Mysore Association, Mumbai completed 93 years on Feb 26, 2019. To celebrate this Occasion, the Youth Wing of Mysore Association organised an event on 24th March 2019 at the Association.

On the Sunday morning, members and their families gathered in good number. The program commenced with a melodious welcome song sung by Mahathi Radhesh. President of the Association, Kamala K remembered contributions made by all the persons instrumental in building of the great association which has remained relevant even after 93 years of its existence. She also invited suggestions from members on the initiatives and actions that management could consider in further strengthening and building of Association to become a great organisation lasting for long period of time. Incidentally she mentioned about the management's thought of establishing an Art school with a differential approach.

Dr. Manjunath spoke on the occasion and narrated his experiences in the journey of association and shared his thoughts on making Art School a dream come true idea.

New and upcoming website of Mysore Association was launched by Our beloved Manjunathiah. A short video detailing out new features of the website like all the past NESARU edition in archives, new functionalities, auditorium photos , visitors book, cluster maps etc,








Interesting team games like Drawing by only listening to the instructions after which the team would guess what the object is, a guessing game where the participant was blindfolded after which they had to touch and feel the item and guess it and a few one minute games were organised. There were loads of fun and joy and it was interesting to see many elders play with childlike enthusiasm. The Youth Wing then thanked the members for coming in on a Sunday morning and making this event a huge success. The members also applauded the efforts of Youth wing in bringing all the members together in a playful manner. The event ended with lunch.

Date of Publication : 5th of every month RNI No. 040015 / 83
Regd. No. MNE / 93 / 2018-20 Date of Posting:5/6th of every month
at Mumbai Patrika Channel Sorting Office G.P.O.

# ನೇಸರು ಜಾಗತಿಕ ಏಕಾಂಕ ನಾಟಕ ಸ್ಪರ್ಧೆ– 2019

ಮೈಸೂರು ಅಸೋಸಿಯೇಷನ್‌ಗೆ 93 ವರ್ಷ ತುಂಬಿರುವುದರಿಂದ, ಈ ಸಂಭ್ರಮದ ಪ್ರಯುಕ್ತವಾಗಿ ಮೈಸೂರು ಅಸೋಸಿಯೇಷನ್ ಏಕಾಂಕ ನಾಟಕ ರಚನಾ ಸ್ಪರ್ಧೆಯನ್ನು ಆಯೋಜಿಸಿದೆ. ಈ ಸ್ಪರ್ಧೆಯಲ್ಲಿ ಇಡೀ ಭಾರತದಾದ್ಯಂತ ಇರುವ ಎಲ್ಲ ಸಾಹಿತ್ಯಾಸಕ್ತರು ಇದರಲ್ಲಿ ಭಾಗವಹಿಸಬಹುದಾಗಿದೆ. ಆಸಕ್ತ ನಾಟಕಕಾರರು ಯಾವುದೇ ವಿಷಯದ ಕುರಿತಂತೆ ನಾಟಕಗಳನ್ನು ರಚಿಸಬಹುದಾಗಿದೆ. ಇಲ್ಲಿ ಯಾವುದೇ ಪ್ರವೇಶ ಶುಲ್ಕವಿರುವುದಿಲ್ಲ.

| | | |
|---|---|---|
| ಪ್ರಥಮ ಬಹುಮಾನ | ರೂ. | 15000/– |
| ದ್ವಿತೀಯ ಬಹುಮಾನ | ರೂ. | 10000/– |
| ತೃತೀಯ ಬಹುಮಾನ | ರೂ. | 7500/– |

## ಸ್ಪರ್ಧೆಯ ನಿಯಮಾವಳಿಗಳು:

1) ನಾಟಕಗಳು ಸ್ವರಚಿತವಾಗಿರಬೇಕು. ಅನುವಾದ, ಅನುಕರಣೆ ಆಗಿರಕೂಡದು. ಕನ್ನಡದಲ್ಲಿಯೇ ಇರಬೇಕು
2) ನಾಟಕಗಳು ಸುಮಾರು 30 ಪುಟಗಳ ಮಿತಿಯಲ್ಲಿರಲಿ. ಒಂದು ವೇಳೆ ಈ ನಾಟಕವನ್ನು ಪ್ರದರ್ಶನ ಮಾಡಿದರೆ 45–50 ನಿಮಿಷಗಳ ಒಳಗೆ ಮುಗಿಯುವಂತಿರಬೇಕು. ಕಾಗದದ ಒಂದೇ ಮಗ್ಗುಲಲ್ಲಿ ಚಿತ್ತಿಲ್ಲದಂತೆ ಬರೆದು ಕಳುಹಿಸಿ. (ಹಸ್ತ ಯಾ ಕಂಪ್ಯೂಟರ್ ಮುದ್ರಿತ). ಇಮೈಲ್ ಮೂಲಕವೂ ಕಳುಹಿಸಬಹುದು.
3) ನಾಟಕಕಾರರ ಹೆಸರು, ವಿಳಾಸ, ಮೊಬೈಲ್ ಸಂಖ್ಯೆ ಹಾಗೂ ಇಮೈಲ್ ಇದ್ದಲ್ಲಿ ಪ್ರತ್ಯೇಕ ಕಾಗದದಲ್ಲಿ ಬರೆದು ಕಳುಹಿಸಿ.
4) ಒಬ್ಬರು ಒಂದೇ ನಾಟಕವನ್ನು ಬರೆದು ಕಳುಹಿಸಬೇಕು.
5) ಸ್ಪರ್ಧೆಗೆ ಬಂದ ನಾಟಕಗಳನ್ನು ಮರಳಿಸಲಾಗುವುದಿಲ್ಲ.
6) ತೀರ್ಪುಗಾರರ ತೀರ್ಮಾನವೇ ಅಂತಿಮ.
7) ನಾಟಕಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ 10.06.2019
8) ತೀರ್ಪುಗಾರರ ತೀರ್ಮಾನವನ್ನು ಆಗಸ್ಟ್ ತಿಂಗಳಿನಲ್ಲಿ ಜಾಹೀರುಗೊಳಿಸಲಾಗುವುದು.

**Postal Address:** The Mysore Association, Mumbai 393, BhauDaji road, Matunga, Mumbai – 400019
Tel: 022- 24024647, 24037065 Fax: 24010574
email:nataka.nesaru@gmail.com

## ಮುಂಬರುವ ಕಾರ್ಯಕ್ರಮಗಳು *Forthcoming Programmes*

### ರಾಮ ನವಮಿ

ಶನಿವಾರ ಏಪ್ರಿಲ್ 13, 2019ರಂದು ಅಸೋಸಿಯೇಷನ್ನಿನಲ್ಲಿ ಸಂಜೆ 6.00ಕ್ಕೆ ಪೂಜೆ

ಸಂಗೀತ : ಶ್ರೀಮತಿ ವಿಜಯಲಕ್ಷ್ಮಿ ಮತ್ತು ಸಂಗಡಿಗರಿಂದ

### ಶಾಲಾ ಮಕ್ಕಳಿಗಾಗಿ ರಂಗ ತರಬೇತಿ ಶಿಬಿರ

ಕರ್ನಾಟಕ ನಾಟಕ ಅಕಾಡೆಮಿ ಹಾಗೂ
ರಾಷ್ಟ್ರೀಯ ಕನ್ನಡ ಶಿಕ್ಷಣ
ಸಂಸ್ಥೆಯ ಸಹಕಾರದೊಡನೆ

ಏಪ್ರಿಲ್ 24, 2019ರಿಂದ ಮೇ 24, 2019ರ ವರೆಗೆ

ಶಿಬಿರ ನಿರ್ದೇಶಕ : ಡಾ. ಸತೀಶ್ ಸಾಸ್ವೆಹಳ್ಳಿ

### ಹರಟೆ

ಶನಿವಾರ ಏಪ್ರಿಲ್ 27, 2019 ಸಂಜೆ 6:00ಕ್ಕೆ

**ಪ್ರಜಾಪ್ರಭುತ್ವ ವ್ಯವಸ್ಥೆ ಸರಿಯಾಗಿದೆಯೇ?**

***Is Democracy Right Choice?***

ಎಲ್ಲರೂ ಚರ್ಚೆಗೆ ಮುಂಚಿತವಾಗಿಯೇ ಅಣಿಯಾಗಿ ಬರಬೇಕು.

### ಸನದಿಯವರಿಗೆ ನಮನ

ಮೈಸೂರು ಅಸೋಸಿಯೇಷನ್ ಮುಂಬೈ, ಕರ್ನಾಟಕ ಸಂಘ, ರಾಷ್ಟ್ರೀಯ ಕನ್ನಡ ಶಿಕ್ಷಣ ಸಂಸ್ಥೆ

ಭಾನುವಾರ ಏಪ್ರಿಲ್ 28, 2019 ಬೆಳಿಗ್ಗೆ 10 ರಿಂದ 1ರ ವರೆಗೆ

ಸನದಿಯವರ ಸಾಹಿತ್ಯ ದರ್ಶನ – ಭಾಷ್ಯ ರೂಪಕ
ಸನದಿಯವರ ಕವಿತಾ ಸಾಗರ – ಸಂಗೀತ ರೂಪಕ

ಮುಂಬಯಿಯ ಗಾಯಕಿಯರಿಂದ

ಎಲ್ಲರಿಗೂ ನಲು ಬರುವು

Edited, Printed & Published by Dr. Girija Shastri, On behalf of the Mysore Association, Mumbai. Tel.: 2402 4647, 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361